
ಜಾಗತಿಕ ಚಿಂತಕರು ಮಾಲೆ

ಜಯಪ್ರಕಾಶ ನಾರಾಯಣ

ಜ. ಹೊ. ನಾರಾಯಣ ಸ್ವಾಮಿ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜಾಗತಿಕ ಚಿಂತಕರು ಮಾಲೆ - ೨

ಜಯಪ್ರಕಾಶ ನಾರಾಯಣ

ಜ.ಹೊ. ನಾರಾಯಣಸ್ವಾಮಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

JAYAPRAKASH NARAYANA–Life and thoughts of Jayaprakash Narayan by, Ja.Ho.Narayana Swamy,B.Com.,B.L.,M.A.,(Dip-in-Drama)
Pulished by: Administrative Officer, **Kannada Pustaka Pradhikara,**
Pampa Mahakavi Road, Chamarajapet, Bangalore-18

ಪ್ರಥಮ ಮುದ್ರಣ : ೨೦೦೦

ಪ್ರತಿಗಳು, ವರ್ಷ - ೨೦೦೦

ಪುಟಗಳು : ೬೦

ಬೆಲೆ : ೨೫/-

ಪ್ರಕಾಶನ :
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಐ.ಎಸ್.ಬಿ.ಎನ್.: 81-7713-034-X

ಮುದ್ರಕರು :
ಕೀರ್ತಿ ಪ್ರಿಂಟರ್ಸ್
ಗಿರಿನಗರ, ಬೆಂಗಳೂರು-೮೫

ಸಂಪಾದಕ ಸಮಿತಿ

ಮುನ್ನುಡಿ

ಜಗತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ, ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳನ್ನು ತಮ್ಮ ವಿಶಿಷ್ಟವಾದ ಬದುಕು, ಪ್ರಯೋಗಶೀಲತೆ, ಕ್ರಿಯಾಶೀಲತೆ, ಹೋರಾಟ, ಬುದ್ಧಿಮತ್ತೆ, ದಾರ್ಶನಿಕ ದೃಷ್ಟಿ ಮತ್ತು ದೂರಗಾಮೀ ಚಿಂತನೆಗಳಿಂದ ಅರ್ಥಪೂರ್ಣವನ್ನಾಗಿ, ಸಂಪದ್ಭರಿತವನ್ನಾಗಿ, ಅತ್ಯುಪಯುಕ್ತವನ್ನಾಗಿ ಜೀವಂತಿಸಿದ ನೂರಾರು ಶ್ರೇಷ್ಠ ಚಿಂತಕರು ಇತಿಹಾಸದಲ್ಲಿ ಮೂಡಿ ತಮ್ಮ ಸಾಧನೆ ಸಿದ್ಧಿಗಳಿಂದ ಚಿರಂತನವಾದ ಪರಿಣಾಮವನ್ನುಂಟುಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಮಾನವ ಬದುಕನ್ನು ವೈಶಿಷ್ಟ್ಯಮಯವನ್ನಾಗಿ ಸಮೃದ್ಧವನ್ನಾಗಿ ಮಾಡಲು ಹಾಗೂ ಶಾಂತಿ, ತೃಪ್ತಿ, ವೈಚಾರಿಕತೆಗಳನ್ನು ತುಂಬಲು ಇವರ ಅಪೂರ್ವವೂ, ಅನನ್ಯವೂ ಆದ ಅಸಾಧಾರಣ ಜೀವನ ಮತ್ತು ಚಿಂತನೆಗಳು ಕಾಲ, ದೇಶ, ಮತ, ಬಣ್ಣ ಮತ್ತು ಭಾವನೆಗಳನ್ನು ಮೀರಿ ಸತತ ಪ್ರಸ್ತುತವಾಗಿ ಕ್ರಿಯಾಶೀಲವಾಗಿವೆ. ಇಂತಹವರ ಆದರ್ಶಪರ ವ್ಯಕ್ತಿತ್ವ, ಪರಿಶ್ರಮ ಮತ್ತು ಪರಿಚಿಂತನೆಗಳಿಂದಾಗಿ ಮನುಷ್ಯ ತನ್ನ ಇತಿ-ಮಿತಿಗಳನ್ನು ಮೀರಲು, ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯವಾಗುತ್ತಿದೆ. ಹೀಗೆ ಮಾನವ ಜೀವಿತವನ್ನು ಸದಾ ಹಸಿರುಗೊಳಿಸುವ ಪ್ರಪಂಚದ ಮಹಾನ್ ಚಿಂತಕರ ಮುಖ್ಯ ಅಲೋಚನೆಗಳನ್ನು ಕನ್ನಡಿಗರಿಗೆ ಅದರಲ್ಲೂ ಯುವಜನತೆಗೆ, ಸರಳವಾದ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಉದ್ದೇಶದಿಂದ ಪುಸ್ತಕ ಪ್ರಾಧಿಕಾರವು ''ಜಾಗತಿಕ ಚಿಂತಕರು ಮಾಲೆ'' ಎಂಬ ಹೊಸ ಪುಸ್ತಕ ಮಾಲೆಯೊಂದನ್ನು ಆರಂಭಿಸಿದೆ. ಸದ್ಯಕ್ಕೆ 50 ಜನ ವಿಶ್ವಚಿಂತಕರನ್ನು ಕುರಿತು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ಉದ್ಯುಕ್ತವಾಗಿದೆ. ಈ ಮಾಲೆಯ ಪುಸ್ತಕಗಳನ್ನು ಸಹೃದಯ ವಾಚಕರು ಪ್ರೀತಿ ಉತ್ಸಾಹಗಳಿಂದ ಸ್ವೀಕರಿಸುವರೆಂದು ಆಶಿಸಲಾಗಿದೆ.

ಈ ಮಾಲೆಯಲ್ಲಿ ಇದೀಗ ''ಜಯಪ್ರಕಾಶ ನಾರಾಯಣ'' ಎಂಬ ಕೃತಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಶ್ರೀ ಜಯಪ್ರಕಾಶ ನಾರಾಯಣ ಅವರು ಭಾರತದ ಅಗ್ರಮಾನ್ಯ ಸ್ವಾತಂತ್ರ್ಯ ಹೋರಾಟಗಾರರಲ್ಲಿ, ಸಮಾಜ ಚಿಂತಕರಲ್ಲಿ, ಪರಿಶುದ್ಧ ಜೀವನ ಶೈಲಿಯ ಆದರ್ಶ ರಾಜನೀತಿಜ್ಞರಲ್ಲಿ ಮುಖ್ಯರಾದವರು. ಮಹಾತ್ಮಾಜೀ ಅವರ ನಿಷ್ಠ ಅನುಯಾಯಿಗಳಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ಜಯಪ್ರಕಾಶರು ಗಾಂಧೀಜಿ ಪ್ರಣೀತವಾದ ಅಹಿಂಸಾ ಮಾರ್ಗದಲ್ಲಿ ದೇಶದ ಬಿಡುಗಡೆಗೆ ಕಾಯಾ-ವಾಚಾ-ಮನಸಾ ಶ್ರಮಿಸಿದ ಮಹಾನ್ ದೇಶಭಕ್ತ. ವಿಶ್ವಜ್ಯೋತಿ ಭಗವಾನ್ ಬುದ್ಧ ಆವಿರ್ಭವಿಸಿದ ಬಿಹಾರದಲ್ಲಿ ರೈತ ಕುಟುಂಬದಲ್ಲಿ ಹುಟ್ಟಿ, ತಮ್ಮ ಬದುಕಿನ ಉದ್ದಕ್ಕೂ ರೈತ ಜೀವನದ ಸರಳ ಮುಗ್ಧ ಪಥದಲ್ಲೇ ಸಾಗಿದ ಜಯಪ್ರಕಾಶರು ನಿಸರ್ಗ ಸುಂದರ ಪರಿಸರದಲ್ಲಿ ತಮ್ಮ ಬಾಲ್ಯ ಜೀವನವನ್ನು ಹಸಿರು ಮಾಡಿಕೊಂಡವರು. ಗುರು-ಹಿರಿಯರಲ್ಲಿ ಅಪಾರ ಗೌರವ ಇಟ್ಟುಕೊಂಡವರು. ತಮ್ಮ ಶಿಕ್ಷಣದ ಆರಂಭದಿಂದಲೂ ಪ್ರಾಮಾಣಿಕತೆ, ಸಜ್ಜನಿಕೆ, ಸ್ನೇಹ ಮಧುರ ಮಾತುಗಳನ್ನು ರೂಢಿಸಿಕೊಂಡವರು. ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ತಮ್ಮ ಪ್ರಾಮಾಣಿಕತೆ

ಹಾಗೂ ಸರಳತೆಗಳ ಜೊತೆ-ಜೊತೆಗೆ ದಬ್ಬಾಳಿಕೆ ವಿರುದ್ಧ ಪ್ರತಿಭಟಿಸುವ ಕೆಚ್ಚನ್ನು ಹೃದ್ಗತ ಮಾಡಿಕೊಂಡವರು. ತಮ್ಮ ಶಿಕ್ಷಣದ ಉದ್ದಕ್ಕೂ ಪ್ರತಿಭಾವಂತ ವಿದ್ಯಾರ್ಥಿಯಾಗಿ ಬೆಳೆದ ಅವರ ಆ ಅವಧಿಯಲ್ಲೇ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ವಿರುದ್ಧವಾದ ಪ್ರತಿಭಟನೆ ಮತ್ತು ಹೋರಾಟಗಳು ಉಗ್ರವಾಗಿ ಹಬ್ಬಿದ್ದು, ಅವುಗಳ ಪರಿಣಾಮ ಅವರ ಮೇಲೆ ತೀವ್ರವಾಗಿ ಆಯಿತು. ಗಾಂಧೀಜಿಯವರ ಮತ್ತು ಅವರನ್ನು ಕುರಿತ ಬರಹಗಳು ಅವರಿಗೆ ಸ್ಫೂರ್ತಿಯನ್ನು ತುಂಬಿದವು. ಆ ಎಳೆವೆಯಲ್ಲಿಯೇ ಗಾಂಧೀಜಿಯವರ ದಾರಿಯಲ್ಲಿ ನಡೆಯಬೇಕೆಂಬ ಸಂಕಲ್ಪ ಅವರ ಮನದಲ್ಲಿ ಮೂಡಿ ಮೊಳಕೆಯೊಡೆಯಿತು. ಭಾರತದ ಬಡತನ ಮತ್ತು ಅಜ್ಞಾನಗಳಿಗೆ ಮೂಲ ಕಾರಣ ವೈಜ್ಞಾನಿಕ ಮನೋಧರ್ಮದ ಅಭಾವ-ಇದರ ನಿವಾರಣೆಗೆ ವಿಜ್ಞಾನವನ್ನು ಓದಿ, ವಿಜ್ಞಾನಿಯಾಗಿ ದೇಶದ ವಿಶಿಷ್ಟ ಸಂರಚನೆಯಲ್ಲಿ ಪಾಲ್ಗೊಳ್ಳಬೇಕೆಂಬ ಇಚ್ಛೆ ಅವರಲ್ಲಿ ಬಲವಾಯಿತು.

ಕಾಲೇಜಿನಲ್ಲಿ ವಿಜ್ಞಾನ ಮತ್ತು ಸಾಹಿತ್ಯಗಳೆರಡೂ ಅವರ ಬುದ್ಧಿ ಮತ್ತು ಹೃದಯಗಳನ್ನು ಸೆಳೆದುಕೊಂಡವು. ಆನಂತರದ ದಿನಗಳಲ್ಲಿ ಗಾಂಧೀಜಿಯವರನ್ನು ಪ್ರಥಮ ಬಾರಿಗೆ ಕಂಡಾಗ, ಅವರ ಮೇಲೆ ಮಹಾತ್ಮ ಗಾಂಧೀಜಿಯವರ ಅಚ್ಚಳಿಯದ ಪ್ರಭಾವ ಉಂಟಾಯಿತು. ದೇಶದ ಬಿಡುಗಡೆಯ ಹಾಗೂ ಜ್ಞಾನ ಗಳಿಕೆಯ ಸಂಕಲ್ಪದ ಪೂರಕ ಹೋರಾಟದ ಮಧ್ಯದಲ್ಲಿ ಅಮೆರಿಕಾದಲ್ಲಿ ತನ್ನ ವ್ಯಾಸಂಗವನ್ನು ಮುಗಿಸಿದ ಜಯಪ್ರಕಾಶರಿಗೆ ಆ ದೇಶದ ಕೆಳವರ್ಗ ಹಾಗೂ ದಲಿತ ಜನಾಂಗದ ದಾರುಣ ಜೀವನದ ಅನುಭವ ಹೃದಯವನ್ನು ಕಲಕಿತು. ವಿಜ್ಞಾನ, ಇಂಜಿನಿಯರಿಂಗ್, ಸಮಾಜಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಹೆಸರಾದವರ ವ್ಯಕ್ತಿತ್ವ ಮತ್ತು ವಿಚಾರಗಳು ಅವರ ಮನಸ್ಸಿನಮೇಲೆ ದಟ್ಟವಾದ ಪ್ರಭಾ ಬೀರಿದವು. ವಿಜ್ಞಾನಿಯಾಗಿ, ಸಮಾಜ ಶಾಸ್ತ್ರಜ್ಞರಾಗಿ, ಹಾಗೂ ವಿಚಾರವಾದಿಯಾಗಿ ಭಾರತಕ್ಕೆ ಬಂದ ಜಯಪ್ರಕಾಶರು ರಾಷ್ಟ್ರೀಯತೆಯ ಮಹಾ ಆಂದೋಲನಕ್ಕೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡರು. ಮದುವೆಯಾಗಿದ್ದರೂ ಬ್ರಹ್ಮಚಾರಿಗಳಾಗಿ ಪತಿ-ಪತ್ನಿಯರು ಸಂಪೂರ್ಣವಾಗಿ ದೇಶಸೇವಾ ಯಜ್ಞಕ್ಕೆ ತಮ್ಮನ್ನು ತೆತ್ತುಕೊಂಡರು. ನೆಹರೂ, ಗಾಂಧೀ, ರಾಜೇಂದ್ರಪ್ರಸಾದ್ ಮುಂತಾದ ಹಿರಿಯರ ಸಹವಾಸದಲ್ಲಿ ತಮ್ಮ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಗಟ್ಟಿಗೊಳಿಸಿಕೊಂಡು ಅವುಗಳನ್ನು ಕ್ರಿಯಾರೂಪಕ್ಕೆ ತರುವ ಕಾರ್ಯದಲ್ಲಿ ನಿರತರಾದರು. ಸತತವಾದ ಹೋರಾಟ, ಸೆರೆಮನೆಯವಾಸ, ಭಾಷಣ, ಬರವಣಿಗೆ, ಚಿಂತನೆ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಜಯಪಪ್ರಕಾಶರು ಹಲವು ಹೊರಾಟಗಳನ್ನು ನಿರ್ದೇಶಿಸಿದರು. ಜಯಪ್ರಕಾಶರ ಹೆಸರು ಮಹಾನ್ ದೇಶಭಕ್ತರ ಮೊದಲ ಪಂಕ್ತಿಯಲ್ಲಿ ಪರಿಗಣಿಸಲ್ಪಟ್ಟಿತು. ಇಲ್ಲಿಯವರೆಗೆ ಅವರ ಜೀವನದ ಪೂರ್ವಾರ್ಧದ ಕಥೆಯಾದರೆ, ಉತ್ತರಾರ್ಧದ ಕಥೆ ಮತ್ತೊಂದು ರೋಮಾಂಚಕಾರೀ ಅಧ್ಯಾಯ. ಭೂದಾನ ಚಳುವಳಿ, ಸರ್ವೋದಯ ಸಿದ್ಧಾಂತ, ಸಮಾಜದಲ್ಲಿ ಯಾವ-ಯಾವುದೋ ಅನಿವಾರ್ಯಗಳಿಂದ ಹಿಂಸಾಜೀವಿಗಳಾಗಿ, ಅಪರಾಧಿಗಳಾಗಿ ಮಾರ್ಪಟ್ಟವರ ಮಾನಸಿಕ ಪರಿವರ್ತನೆ, ದೇಶದ ಕಟ್ಟಕಡೆಯ ವ್ಯಕ್ತಿಗೂ ಕನಿಷ್ಠ ಸವಲತ್ತು ದೊರೆಯಬೇಕೆಂಬ ಹಂಬಲ,

ರಾಜಕೀಯ ಜೀವನದಲ್ಲಿ ನೈತಿಕತೆ ಮತ್ತು ಪ್ರಾಮಾಣಿಕತೆಗಳು ಹಾಸುಹೊಕ್ಕಾಗಿ ಸೇರಿರಬೇಕು ಎಂಬ ತೀವ್ರತರವಾದ ಸಂಕಲ್ಪ- ಇವುಗಳ ಮೂಲಕ ಸಮಗ್ರ ಕ್ರಾಂತಿಯ ನೇತಾರರಾಗಿ ಜಯಪ್ರಕಾಶರು ಧೀರೋದಾತ್ತವಾಗಿ ಮುನ್ನಡೆದರು. ಇಂದಿರಾಗಾಂಧಿಯವರು ಹೇರಿದ ತುರ್ತುಪರಿಸ್ಥಿತಿಯ ಕರಾಳ ಅಧ್ಯಾಯವನ್ನು ತಮ್ಮ ಇಳಿ ವಯಸ್ಸಿನಲ್ಲಿ ಉಗ್ರವಾಗಿ ಪ್ರತಿಭಟಿಸಿ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಮತ್ತು ಜನತೆಯ ಮುಕ್ತ ಮನಸ್ಸಿನ ವಿಚಾರಧಾರೆಗೆ ಬಂದೊದಗಿದ ಕುತ್ತನ್ನು ನಿವಾರಿಸಲು ಪರಿಣಾಮಕಾರೀ ಹೋರಾಟವನ್ನು ನಡೆಸಿದರು. ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮ ಗಾಂಧೀಜಿಯವರಾದರೆ ಸ್ವಾತಂತ್ರ್ಯೋತ್ತರದ ಸಂಕಷ್ಟ ದಿನಗಳಲ್ಲಿ ಗಾಂಧೀಜಿಯವರ ಮಾನಸ ಪುತ್ರರಾಗಿ ಅವರ ಸ್ಥಾನವನ್ನು ತುಂಬಿದವರು ಜಯಪ್ರಕಾಶರು. ರಾಷ್ಟ್ರ, ಜನತೆ, ಸ್ವಾತಂತ್ರ್ಯ, ರಾಜನೀತಿಜ್ಞತೆ, ಪ್ರಾಮಾಣಿಕ ಸಾರ್ವಜನಿಕ ಜೀವನ, ಅವಕಾಶ ವಂಚಿತರ ಪ್ರಗತಿಯ ಬಗೆಗಿನ ನಿಶಿತ ವಿಚಾರಧಾರೆ, ಅತ್ಯುನ್ನತವಾದುದನ್ನು ಸಾಧಿಸುವ ಸಲುವಾಗಿ ರೂಪುಕೊಳ್ಳಬೇಕಾದ ಸಂಘಟನಾ ಶೀಲತೆ-ಮುಂತಾದವುಗಳ ಕಾರಣದಿಂದಾಗಿ ಜಯಪ್ರಕಾಶರು ರಾಷ್ಟ್ರದ ಮಹಾನ್ ನಾಯಕರಲ್ಲಿ ಒಬ್ಬರಾಗಿರುವುದು ಮಾತ್ರವೇ ಅಲ್ಲದೇ ಅವರ ಜೀವನ ಮತ್ತು ಚಿಂತನೆಗಳು ಶುದ್ಧ ರಾಜಕೀಯ ಮತ್ತು ಸಾಮಾಜಿಕ ಬದುಕಿನ ದಾರಿಯಲ್ಲಿ ಹಚ್ಚಿಟ್ಟ ಹಣತೆಗಳಾಗಿವೆ.

ಇಂತಹ ಚೇತನವನ್ನು ಕುರಿತು ಈಗಾಗಲೇ ತಮ್ಮ ವೈಜ್ಞಾನಿಕ ಮನೋಧರ್ಮದ ಕೃತಿಗಳ ರಚನೆಯಿಂದ ಹೆಸರು ಮಾಡಿರುವ ಮಿತ್ರರಾದ ಜ.ಹೊ. ನಾರಾಯಣಸ್ವಾಮಿಯವರು ಈ ಕೃತಿಯನ್ನು ತುಂಬಾ ಸ್ವಾರಸ್ಯವಾಗಿ ರಚಿಸಿದ್ದಾರೆ. ಜಯಪ್ರಕಾಶರ ಜೀವನದ ಪ್ರಮುಖ ಘಟ್ಟಗಳಾವುವೂ ಬಿಟ್ಟು ಹೋಗದಂತೆ ಮತ್ತು ಅವರ ದಿಟ್ಟ ಹಾಗೂ ಪ್ರಾಮಾಣಿಕ ವಿಚಾರದ ಎಳೆಗಳು ಸುಸ್ಪಷ್ಟವಾಗುವಂತೆ ಲೇಖಕರು ಈ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಈ ಕೃತಿ ಸಂಕ್ಷಿಪ್ತವಾದರೂ ಸಮರ್ಪಕವಾಗಿ ಮತ್ತು ಆ ದಿವ್ಯ ಚೇತನದ ಬಗೆಗೆ ಆಸಕ್ತಿ ಮತ್ತು ಗೌರವಗಳು ಅರಳುವಂತೆ ಮೂಡಿ ಬಂದಿದೆ.

ಈ ಕೃತಿಯನ್ನು ಪ್ರಾಧಿಕಾರಕ್ಕಾಗಿ ರಚಿಸಿಕೊಟ್ಟಿರುವ ಶ್ರೀ ಜ.ಹೊ. ನಾರಾಯಣಸ್ವಾಮಿಯವರಿಗೆ, ಈ ಮಾಲೆಯ ಸಂಪಾದಕ ಮಿತ್ರರೂ ಮತ್ತು ಪ್ರಸಿದ್ಧ ಲೇಖಕರೂ ಆದ ಪ್ರೊ. ಎಂ.ಎಚ್. ಕೃಷ್ಣಯ್ಯ ಹಾಗೂ ಪ್ರೊ. ಸಿ. ವೀರಣ್ಣನವರಿಗೆ, ಈ ಮಾಲೆಯನ್ನು ಆರಂಭಿಸಲು ಸಂತೋಷದಿಂದ ಸಮ್ಮತಿಸಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಹಾಗೂ ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಕೀರ್ತಿ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಹಾರ್ದಿಕ ಕೃತಜ್ಞತೆಗಳು.

ಸ್ಥಳ : ಬೆಂಗಳೂರು
ದಿನಾಂಕ : 26-09-2000

ಡಾ॥ ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸಂಪಾದಕರ ಮಾತು

ಮಾನವ ಸಮಾಜ ಚಲನಶೀಲವಾದದು. ಮಾನವನ ಸಾಮಾಜಿಕ ವ್ಯವಸ್ಥೆಯ ಅಂತರ್ ಸಂಘರ್ಷದ ಮೂಲಕ ಈ ಚಲನಶೀಲತೆ ನಿರಂತರವಾಗಿ ಇರುತ್ತದೆ. ಚರಿತ್ರೆಯ ಚಕ್ರ ಎಂದೂ ಹಿಂದಕ್ಕೆ ಹೋಗುವುದಾಗಲೀ, ಪುನರಾವರ್ತನೆ ಆಗುವುದಾಗಲೀ ಸಾಧ್ಯವಿಲ್ಲ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿಕೊಂಡು ಆಯಾ ಕಾಲಗಳಲ್ಲಿ ಹೊಸ ಹೊಸ ವಿಚಾರಧಾರೆಗಳು ಸಮಾಜದಲ್ಲಿ ಬದಲಾವಣೆಗೊಳ್ಳುತ್ತವೆ. ಸಮುದಾಯದ ಮಾತು ಒಬ್ಬ 'ಪ್ರತಿಭಾವಂತ'ನ ನುಡಿಯಾಗಿ ಹೊರಬಂದು ಸಮಾಜದ ಚಲನೆಗೆ ಅನುವು ಮಾಡುತ್ತದೆ.

ಜಗತ್ತಿನಲ್ಲಿ ಕಾಲಕಾಲಕ್ಕೆ ತಮ್ಮ ವಿಚಾರಗಳಿಂದ ಮಹಾನ್ ದಾರ್ಶನಿಕರೆಂದು ಹೆಸರು ಪಡೆದ ಅನೇಕ ಮಹಾನುಭಾವರ ವೈಚಾರಿಕ ವೈವಿಧ್ಯಗಳನ್ನು ಕನ್ನಡದ ಓದುಗರಿಗೆ ಪರಿಚಯಿಸಬೇಕೆಂಬುದೇ **''ಜಾಗತಿಕ ಚಿಂತಕರು ಮಾಲೆ''**ಯ ಉದ್ದೇಶ. ಬದಲಾಗುತ್ತಿರುವ ಸಂದರ್ಭದಲ್ಲಿ ದೇಶ ಭಾಷೆಗಳನ್ನು ದಾಟಿ ಆಧುನಿಕ ಸಂವಹನ ಮಾಧ್ಯಮಗಳು ಜಗತ್ತನ್ನು ಒಂದು ಪುಟ್ಟ ಸಾಂಸಾರವನ್ನಾಗಿ ಮಾಡುತ್ತಿರುವಾಗ, ನಮ್ಮ ಜನ ಬೇರೆ ಬೇರೆ ದೇಶ ಭಾಷೆಗಳಲ್ಲಿ ಪ್ರಸಿದ್ಧರಾದ, ಸಮಾಜದ ಬೆಳವಣಿಗೆಗೆ ಕಾರಣೀಭೂತರಾದ ಚಿಂತಕರ ಚಿಂತನೆಗಳನ್ನು ಪರಿಚಯಿಸಿಕೊಳ್ಳಲೆಂದು ಈ ಪುಸ್ತಗಳನ್ನು ಹೊರತರಲಾಗುತ್ತಿದೆ.

ಈ ಮಾಲೆಯಲ್ಲಿ ಬರುವ ಎಲ್ಲಾ ಚಿಂತಕರೂ ಪ್ರಗತಿಪರರು, ಸಮಾಜದ ಬದಲಾವಣೆಗೆ ಪ್ರೇರೇಪಿಸಿದವರು ಎಂದು ಹೇಳುತ್ತಿಲ್ಲ. ಆದರೆ ಇವರೆಲ್ಲರೂ ತಮ್ಮ ಆಲೋಚನೆಗಳಿಂದ ತಮ್ಮ ಕಾಲದಲ್ಲಿ ಮತ್ತು ಈಗಲೂ ಸಮಾಜದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ ಸಮರ್ಥರು ಎಂಬುದನ್ನು ನಾವು ಮರೆಯುವಂತಿಲ್ಲ. ಅಲ್ಲದೆ ಇವರಲ್ಲಿ ಕೆಲವರು ಮೊದಲಿನ ಅವರವರ ಕಾಲದಲ್ಲಿ ಪ್ರಸ್ತುತವಾದಂತೆ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮೊದಲಿನ ಮಹತ್ವವನ್ನು ಕಳೆದುಕೊಂಡಿರಬಹುದು. ಆದರೂ ವಿಚಾರಗಳ ವಿವಿಧ ಮಗ್ಗಲುಗಳ ಪರಿಚಯ ನಮಗೆ ಆಗುವುದು ಅಗತ್ಯವೆಂದು ಭಾವಿಸಿ ಅವರನ್ನು ಈ ಮಾಲೆಗೆ ಸೇರಿಸಲಾಗಿದೆ.

ಕನ್ನಡ ಸಾರಸ್ವತ ಮತ್ತು ತಾತ್ವಿಕ ಲೋಕದಲ್ಲಿ 'ತಾಜಾ ಚಿಂತಕರ' ಅಭಾವವಿದೆ ಯೆಂಬುದು ಕಹಿಯಾದರೂ ಸತ್ಯವಾದ ವಿಚಾರವೇ. ಆದುದರಿಂದ ಬೇರೆಬೇರೆ ಜನಾಂಗಗಳ ಪ್ರಖರ ಮತಿಗಳ ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವುದು ಕನ್ನಡಿಗ ವಿಚಾರವಂತರಿಗೆ ಅತ್ಯಗತ್ಯವಾದದ್ದು. ಈ ಮಾಲೆಯ ಕೃತಿಗಳ ಓದುವಿಕೆಯಿಂದ ಕನ್ನಡಿಗರಿಗೆ ಸ್ವಲ್ಪವಾದರೂ ವಿಭಿನ್ನ ವೈಚಾರಿಕ ಜಗತ್ತಿನ ಪರಿಚಯವಾದರೆ ಕನ್ನಡ ಪುಸ್ತಕ ಪ್ರಾಧಿಕಾರ ಕೈಗೊಂಡ ಈ ಯೋಜನೆ ಸಾರ್ಥಕವಾಯಿತು ಎಂದು ನಾವು ಭಾವಿಸುತ್ತೇವೆ.

೫-೫-೨೦೦೦ **ಡಾ. ಸಿ. ವೀರಣ್ಣ**

ಬೆಂಗಳೂರು **ಪ್ರೊ. ಎಂ.ಎಚ್. ಕೃಷ್ಣಯ್ಯ**

ನನ್ನ ಮಾತು

ಕನ್ನಡ ಪುಸ್ತಕ ಪ್ರಾಧಿಕಾರದವರು 'ಜಾಗತಿಕ ಚಿಂತಕರು' ಪುಸ್ತಕ ಮಾಲೆಯನ್ನು ಹೊರತರುತ್ತಿರುವುದು ಸ್ವಾಗತಾರ್ಹ. ಈ ಮಾಲೆಯಲ್ಲಿ 'ಜಯಪ್ರಕಾಶ ನಾರಾಯಣ' ಅವರನ್ನು ಕುರಿತು ಕೃತಿ ರಚನೆ ಮಾಡಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ|| ಎಚ್.ಜೆ. ಲಕ್ಕಪ್ಪಗೌಡರಿಗೆ ಹಾಗೂ ಪ್ರಾಧಿಕಾರದ ಸದಸ್ಯರಿಗೆ, ಸಂಪಾದಕರಾದ ಪ್ರೊ|| ಎಂ.ಎಚ್. ಕೃಷ್ಣಯ್ಯ ಮತ್ತು ಡಾ|| ಸಿ. ವೀರಣ್ಣ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕೃತಿ ರಚನೆಯ ಸಂದರ್ಭದಲ್ಲಿ ನೆರವು ನೀಡಿದ ನನ್ನ ಮಗಳು ಶ್ರೀಮತಿ ಜೆ.ಎನ್. ತೇಜಶ್ರೀ ಡಾ|| ಹೆಚ್.ಎಸ್. ರವಿಶಂಕರ್ ಅವರಿಗೂ, ಪೂರಕ ಕೃತಿಗಳನ್ನು ಒದಗಿಸಿದ ಗೆಳೆಯರಾದ ಆರ್. ಜಿ. ಹಳ್ಳಿ ನಾಗರಾಜ್ ಮತ್ತು ಬಿ.ಎಸ್. ವೆಂಕಟೇಶಮೂರ್ತಿ ಅವರಿಗೂ ನಾನು ಆಭಾರಿ.

ಜ.ಹೊ. ನಾರಾಯಣಸ್ವಾಮಿ
೨೦೬೪, ''ಮಾನವ''
ಉತ್ತರ ಬಡಾವಣೆ
ಹಾಸನ - ೫೭೩ ೨೦೧

ಪರಿವಿಡಿ

ಹಿನ್ನೆಲೆ

ಮಾನವ ಇತಿಹಾಸದಲ್ಲಿ ಇಂದಿಗೂ ಹೆಸರಿಸಬಹುದಾದ ಎರಡು ಸಂಸ್ಕೃತಿಗಳೆಂದರೆ ಭಾರತದ ಹರಪ್ಪ ಮತ್ತು ಮೆಹೆಂಜದಾರೋ ಹಾಗೂ ಗ್ರೀಸ್‌ದೇಶದ ಅಥೇನಿಯನ್ ಸಂಸ್ಕೃತಿಗಳು. ಈ ವಿಶಿಷ್ಟ ಸಂಸ್ಕೃತಿಗಳ ಗರ್ಭದಲ್ಲಿ ಮಾನವನ ಬದುಕಿನ ಮೂಲ ಸತ್ವಗಳು ಅಡಗಿವೆ. ಆಧುನಿಕ ಸಮಾಜ ಸಾಕ್ಷಾತ್ಕರಿಸಿಕೊಳ್ಳಲು ಹವಣಿಸುತ್ತಿರುವ 'ಸಮಾಜವಾದ' ತನ್ನ ನಿಜವಾದ ಅರ್ಥದಲ್ಲಿ ಸಾಕಾರಗೊಂಡಿದ್ದು ಆ ಪ್ರಾಚೀನ ಸಂಸ್ಕೃತಿಗಳಲ್ಲಿ .

ಹರಪ್ಪ ಮತ್ತು ಮೆಹೆಂಜದಾರೋ ಸಂಸ್ಕೃತಿ ಆರ್ಯರು ಭಾರತಕ್ಕೆ ಬರುವ ಮುನ್ನವೇ ಕ್ರಿ.ಪೂ. ೨೫೦೦ರಲ್ಲಿ ಗರಿಷ್ಠಾವಸ್ಥೆಯನ್ನು ಮುಟ್ಟಿತ್ತು. ಒಳಚರಂಡಿಯ ವ್ಯವಸ್ಥೆಯನ್ನೂ ಒಳಗೊಂಡಂತೆ ನಾಗರಿಕ ಸೌಲಭ್ಯಗಳೆಲ್ಲವೂ ಅಲ್ಲಿ ನೆಲೆಗೊಂಡಿದ್ದವು. ಸಮಾನತೆ, ಸರ್ವರ ಏಳ್ಗೆ ಆ ಸಂಸ್ಕೃತಿಯ ಉಚ್ವಾಸ-ನಿಶ್ವಾಸಗಳಾಗಿದ್ದುವು. ಜೀವನ ಮಟ್ಟ ಉತ್ತಮವಾಗಿತ್ತು. ವ್ಯಕ್ತಿ ಗೌರವಕ್ಕೆ ಮಾನ್ಯತೆ ಇತ್ತು. ಸ್ತ್ರೀ ಪುರುಷರ ಸಮಾನತೆ ಆದರ್ಶವಾಗಿತ್ತು. ಪ್ರಕೃತಿ ಪುರುಷರ ಸಮಭಾಗಿತ್ವದಿಂದ ಬದುಕಿನ ಸಾರ್ಥಕತೆ ಎಂಬ ವಾಸ್ತವ ಅದರ ಜೀವ ಸ್ವರೂಪವಾಗಿತ್ತು.

ಇದಕ್ಕೆ ಮತ್ತೊಂದು ಉದಾಹರಣೆ ಅಥೆನ್ಸ್. ಆ ನಾಗರೀಕತೆಯಲ್ಲಿ (ಕ್ರಿ.ಪೂ. ೫೦೮) ಪ್ರಜಾಪ್ರಭುತ್ವ ಮೌಲ್ಯಗಳು ಮೈಪಡೆದಿದ್ದುವು. ಕ್ಲೈಸ್ಥೆನ್ಸ್‌ರ (CLEISTHENS) ಸುಧಾರಣೆಯ ಪ್ರಕಾರ ೫೦೦ ಜನರ ಸಂಪುಟ ರಚಿಸುತ್ತಿದ್ದರು. ಅವರ ಆಯ್ಕೆ ಚೀಟಿ ಎತ್ತುವುದರ ಮೂಲಕ ನಡೆಯುತ್ತಿತ್ತು. ನಗರಾಡಳಿತದಲ್ಲಿ ವಿದ್ಯಾವಂತರಿಗೆ ಅವಕಾಶ ಕೊಡಲಾಗುತ್ತಿತ್ತು. ಆಡಳಿತದ ಅತ್ಯುನ್ನತ ಪದವಿಗಳಿಗೂ ಚುನಾವಣೆ ನಡೆಸದೆ ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಲಾಗುತ್ತಿತ್ತು. ಅಸಮರ್ಥ ಹಾಗೂ ಜನಾನುರಾಗಿಯಾಗಿರದ ರಾಜಕಾರಣಿಗಳನ್ನು ಹತ್ತು ವರ್ಷಗಳ ಕಾಲ ಉಚ್ಚಾಟಿಸಲಾಗುತ್ತಿತ್ತು. ಸಮಾನತೆ ಆ ಸಮಾಜದ ನೀತಿಯಾಗಿತ್ತು. ಹೀಗೆ ಪ್ರಜಾಪ್ರಭುತ್ವ ಮೌಲ್ಯಗಳು ಅಲ್ಲಿ ನಿಜವಾದ ಅರ್ಥದಲ್ಲಿ ಸಾಕಾರಗೊಂಡಿದ್ದುವು.

ಹರಪ್ಪ ಮೆಹೆಂಜದಾರೋ ಸಂಸ್ಕೃತಿಯ ಉಚ್ಛ್ರಾಯ ಕಾಲದಲ್ಲಿ ಆರ್ಯರು ಭಾರತಕ್ಕೆ ಬಂದರು. ಮಾನವ ಬದುಕಿನ ಬೆಳಕಾದ ವೇದೋಪನಿಷತ್ತುಗಳು ರಚನೆಯಾದವು. ಅರ್ಧನಾರೀಶ್ವರ ತತ್ವ ಸ್ತ್ರೀ ಪುರುಷರ ಸಮಾನತೆಯ ಸಂಕೇತವಾಗಿ ಹೊರಹೊಮ್ಮಿತು. ಅದು ಭಾರತದ ಹೃದಯವಾದರೆ ವೇದ-ಉಪನಿಷತ್ತುಗಳು ಅದರ ಕಣ್ಣುಗಳು. ಇದು ವಿಶ್ವದ ಆದರ್ಶ. ಇಂತಹ ಭವ್ಯ ಆದರ್ಶ ಪರಂಪರೆಯನ್ನು ಒಳಗೊಂಡು ಇಡೀ ಪ್ರಪಂಚವನ್ನು ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಒಂದಾಗಿಸುವ ಬಲ ಹೊಂದಿದ್ದ ಭಾರತ ಅನ್ಯರಾಷ್ಟ್ರಗಳ ಕೈಕೆಳಗೆ ಗುಲಾಮವಾದದ್ದು ಏಕೆ ?

ಪ್ರಪಂಚದ ಇತರ ರಾಷ್ಟ್ರಗಳು ಕಣ್ಣು ತೆರೆಯುವುದರೊಳಗೆ ಸೃಷ್ಟಿಯ ಅಂತರಂಗವನ್ನು ಅರಿವ ಹಾದಿಯಲ್ಲಿ ಭಾರತ ಬಹುದೂರ ಸಾಗಿ ಬಂದಿತ್ತು. ತನ್ನ

ಅಂತಃಸ್ಸತ್ವದಿಂದ ಇಡೀ ವಿಶ್ವಕ್ಕೆ ಬೆಳಕಾಗಿ ನಿಲ್ಲುವ ಶಕ್ತಿಯನ್ನು ಪಡೆದಿತ್ತು. ಆದರೆ ಅದರ ದೌರ್ಭಾಗ್ಯ. ವರ್ಣ ವ್ಯವಸ್ಥೆಯ ಕ್ರೂರ ಪಾಶಕ್ಕೆ ಸಿಲುಕಿ ಅಂಧಕಾರದಲ್ಲಿ ಮುಳುಗಿಹೋಯ್ತು. ಈ ಕಾರಣದಿಂದ ಅನ್ಯರ ಆಳ್ವಿಕೆಗೆ ಶತಶತಮಾನಗಳು ಒಳಗಾಗಿದ್ದರೂ ಭಾರತದ ಅಂತಃಸ್ಸತ್ವ ಅಡಗದೆ ಅಂತರಂಗದಲ್ಲಿ ತುಡಿಯುತ್ತಿರುವುದು ಅದರ ಜೀವಶಕ್ತಿಯ ದ್ಯೋತಕವಾಗಿದೆ.

ಭಾರತದ ಹಿರಿಮೆ ಗರಿಮೆಗಳನ್ನು ವಿಶ್ವದ ದಿಕ್ತಟಗಳಲ್ಲಿ ಅನುರಣಿತವಾಗುವಂತೆ ಮಾಡುವಲ್ಲಿ ಅನೇಕ ಪೌರಾತ್ಯ ಮಹನೀಯರುಗಳಂತೆ ಪಾಶ್ಚಾತ್ಯ ಮಹನೀಯರೂ ಶ್ರಮಿಸಿದ್ದಾರೆ. ರಾಷ್ಟ್ರರಾಷ್ಟ್ರಗಳ ನಡುವೆ ನಡೆಯುವ ವಿಶ್ವ ಘಟನೆಗಳಿಗೆ 'ಕಾಲ'ದ ಕೊಡುಗೆ ಮಹತ್ತರವಾದುದು. ಪರಕೀಯರ ಆಳ್ವಿಕೆ ಭಾರತದ ಕಪ್ಪು ಅಧ್ಯಾಯವಾದರೂ ಅದರ ಪರಿಣಾಮ ಬೆಳಕಿನದಾಗಿದೆ. ಅವು ಶತಶತಮಾನಗಳಿಂದ ಜಡಗಟ್ಟಿದ್ದ ಭಾರತದ ಹೃದಯಕ್ಕೆ ಬೆಳಕನ್ನು ಬೀರಿವೆ. ಭೌಗೋಳಿಕವಾಗಿ ಬಂಧಿಸಿಯೂ ಆಂತರಿಕ ಬಂಧನಗಳಿಂದ ಅಂದರೆ ಅನಕ್ಷರತೆ, ಅಸ್ಪೃಶ್ಯತೆ, ಅಜ್ಞಾನ, ಮೂಢನಂಬಿಕೆ, ಕಂದಾಚಾರ ಮುಂತಾದುವುಗಳಿಂದ ಬಿಡುಗಡೆಗೊಳಿಸಿವೆ. ಹರಿದು ಹಂಚಿಹೋಗಿದ್ದ ಭಾರತ ಒಂದು ಬೃಹತ್ ರಾಷ್ಟ್ರವಾಗಿ ಹೊರಹೊಮ್ಮಲು ಅನ್ಯರ ಆಳ್ವಿಕೆಯ ಕೊಡುಗೆ ಅಲ್ಪವಾದುದೇನೂ ಅಲ್ಲ.

ಭೂಮಿಯ ಮೇಲಿನ ಮಾನವನ ಸಾರ್ಥಕ ಬದುಕಿಗೆ ಅನಾದಿಕಾಲದಿಂದಲೂ ಅನೇಕ ಪ್ರಯತ್ನಗಳು ನಡೆಯುತ್ತಲೇ ಬಂದಿವೆ. ಮಹಾತ್ಮರ, ದಾರ್ಶನಿಕರ, ಚಿಂತಕರ ಸಾಧನೆ ಅಪಾರವಾದುದು. ಎಲ್ಲರ ಅಭೀಪ್ಸೆಯಂತೆ ಬದುಕು ಅರ್ಥಪೂರ್ಣವಾಗಿ ರೂಪ ಪಡೆಯಲು ಯತ್ನಿಸಿದ್ದರೂ ಅದು ಪೂರ್ಣಪ್ರಮಾಣದಲ್ಲಿ ಸಾಕಾರಗೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಇಂದಲ್ಲದಿದ್ದರೂ ಮುಂದಾದರೂ ಸಾಕಾರಗೊಳ್ಳಬೇಕೆಂಬ ಹಂಬಲದಿಂದ ತುಡಿದು ದುಡಿದ ಅಸಂಖ್ಯಾತ ಮಹನೀಯರುಗಳಲ್ಲಿ ಜಯಪ್ರಕಾಶ್ ನಾರಾಯಣ್ ಒಬ್ಬ ವಿಶಿಷ್ಟ ವ್ಯಕ್ತಿಯಾಗಿದ್ದಾರೆ.

ಮನುಕುಲದ ಮಹಾನ್ ನಾಯಕರಾದ ಮಹಾತ್ಮಗಾಂಧಿ ಹಾಗೂ ಸುಭಾಷ್ ಚಂದ್ರಬೋಸ್ ಅವರುಗಳಿಗೆ ಸಿಗದ ಒಂದು ಅವಕಾಶ ಜಯಪ್ರಕಾಶ್ ಅವರಿಗೆ ಸಿಕ್ಕಿದೆ. ಅವರೀರ್ವರಿಗೆ ಸ್ವಾತಂತ್ರ್ಯಗಳಿಕೆಯವರೆಗೆ ಅವಕಾಶ ಸಿಕ್ಕಿದ್ದರೆ ಜಯಪ್ರಕಾಶರಿಗೆ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾನಂತರವೂ ರಾಷ್ಟ್ರಸೇವೆ ಮಾಡುವ ಅವಕಾಶ ಸಿಕ್ಕಿತು. ಅದು ಭಾಗ್ಯವೆಂತೋ ಅಂತೆ ಅವರ ದೌರ್ಭಾಗ್ಯವೂ ಹೌದು.

೧೯೫೬ರ ಸುಮಾರಿಗೆ ದೇಶದ ಸ್ಥಿತಿಯನ್ನು ಕುರಿತು:-

ಅಂದೋ ?
ಹಿಂದಕ್ಕೆ ಗುರುವಿದ್ದ ಮುಂದಕ್ಕೆ ಗುರಿ ಇತ್ತು
ನುಗ್ಗಿದುದು ಮುಂದೆ ಧೀರ ದಂಡು !
ಇಂದೋ ?
ಹಿಂದಕ್ಕೆ ಗುರುವಿಲ್ಲ ಮುಂದಕ್ಕೆ ಗುರಿ ಇಲ್ಲ
ಮುಗ್ಗುತಿದೆ ಮಧ್ಯೆ ಹೇಡಿಗಳ ಹಿಂಡು !

ಎನ್ನುವ ಕುವೆಂಪು ಅವರ ಉದ್ಗಾರದಂತೆ ಗುರು-ಗುರಿ ಇದ್ದ ಕಾಲದಲ್ಲಿ ಹೋರಾಡಿದ ಜೆ.ಪಿ. ಗುರು-ಗುರಿ ಇರದ ಕಾಲದಲ್ಲಿ ಗುರುವಾಗಿ ಹೋರಾಡಿ ರಾಷ್ಟ್ರವನ್ನು ಸ್ವಾತಂತ್ರ್ಯದ ಸಾರ್ಥಕತೆಯ ಗುರಿಯೆಡೆಗೆ ಕೊಂಡೊಯ್ಯಲು ಯತ್ನಿಸಿದ ಅಸಾಮಾನ್ಯ ನಾಯಕರಾಗಿದ್ದಾರೆ.

ಅವರ ಕೊಡುಗೆ ಅಪರೂಪದ್ದು, ಅರ್ಥಪೂರ್ಣವಾದುದು. ಅದಕ್ಕೆ ಪ್ರತಿಯಾಗಿ ಭಾರತೀಯರು ಅವರನ್ನು ನಡೆಸಿಕೊಂಡ ರೀತಿ ಕ್ರೂರವಾದುದು. ಅವರ ಜೀವನ ಸಾಧನೆ ದೊಡ್ಡದು. ಅವರ ಆದರ್ಶಗಳನ್ನು ಇಂದು ಎಂದರೆ ಭಾರತ ಸ್ವಾತಂತ್ರ್ಯ ಪಡೆದು ಪರದೇಶಗಳ ಸಾಲದ ಶೂಲಕ್ಕೆ ಸಿಕ್ಕಿ ಬಹುರಾಷ್ಟ್ರೀಯ ಕಂಪೆನಿಗಳ ಕೈಕೆಳಗೆ ಪರೋಕ್ಷವಾಗಿ ಮತ್ತೆ ಗುಲಾಮವಾಗುತ್ತಿರುವ ಈ ಪರ್ವಕಾಲದಲ್ಲಿ ಅನಿವಾರ್ಯವಾಗಿ ಅಳವಡಿಸಿಕೊಳ್ಳಬೇಕಾಗಿದೆ. ಅವರ ಸಿದ್ಧಾಂತಗಳನ್ನ ಅತ್ಯಂತ ಎಚ್ಚರದಿಂದ ಅರಿತು ಅನುಸರಿಸಬೇಕಾಗಿದೆ. ಅವರ ಜೀವನ ದೃಷ್ಟಿ ನಮ್ಮೆಲ್ಲರ ಹಾಗೂ ವಿಶ್ವಜನತೆಯ ಸಂಕಷ್ಟಗಳಿಗೆ ಸಂಜೀವಿನಿಯಾಗಿ ಪರಿಣಮಿಸಬಲ್ಲದು. ಅದು ಶೋಷಣೆಗೆ ಒಳಗಾಗಿ ನಲುಗುತ್ತಿರುವ ಹಾಗೂ ಶೋಷಣೆ ಮಾಡುತ್ತಾ ಭ್ರಮೆಗೆ, ಶ್ರೀಮಂತ ಸಂಕಟಗಳಿಗೆ ಸಿಕ್ಕಿ ನರಳುತ್ತಿರುವ ಶೋಷಿತ-ಶೋಷಕರೀರ್ವರಿಗೂ ಬಿಡುಗಡೆಯ ಬೆಳಕಾಗಬಲ್ಲದು.

***

ಜೀವನ

ಜಯಪ್ರಕಾಶರು ಜನ್ಮತಾಳಿದಾಗ ಭಾರತ ಬ್ರಿಟಿಷರ ಕೈಕೆಳಗೆ ಗುಲಾಮವಾಗಿ ಎರಡು ಶತಮಾನಗಳಿಗೂ ಹೆಚ್ಚುಕಾಲ ಸಂದಿತ್ತು. ೧೮೫೭ ರಲ್ಲೆ ಭಾರತ ಸ್ವಾತಂತ್ರ್ಯದ ಕಿಡಿ ಸಿಡಿದು ದಿವ್ಯಜ್ವಾಲೆಯಾಗಿ ವ್ಯಾಪಿಸಿಕೊಳ್ಳಲು ತನ್ನೊಳಗೇ ತಪಿಸುತ್ತಿತ್ತು. ಅನೇಕ ಮಹನೀಯರುಗಳ ತ್ಯಾಗ, ಬಲಿದಾನಗಳ ಫಲವಾಗಿ ಅದು ಅವ್ಯಕ್ತ ಶಕ್ತಿಯಾಗಿ ಭೂಮಿಯೊಳಗಣ ಲಾವಾರಸದಂತೆ ಕುದಿಗೊಳ್ಳುತ್ತಿತ್ತು. ಅದು ಸ್ಫೋಟಗೊಳ್ಳಲು ಜನಜಾಗೃತಿಗೊಳಿಸುವ ಅನೇಕ ಮಹಾಪುರುಷರ ಆವಿರ್ಭಾವಕ್ಕೆ ತವಕಿಸುತ್ತಿತ್ತು. ಭಾರತ ಮಾತೆಯ ಶ್ರೀಗರ್ಭದಿಂದ ಅಂತಹ ಅನೇಕ ಅನರ್ಘ್ಯ ರತ್ನಗಳು ಅವತರಿಸಿದವು. ಅಂತಹ ರತ್ನಗಳಲ್ಲಿ ಜಯಪ್ರಕಾಶ್ ನಾರಾಯಣ್ ವಿಜಯದ ಸಂಕೇತ ಎಂಬಂತೆ ವಿಜಯ ದಶಮಿಯೆಂದು - ೨೧-೧೦-೧೯೦೨ - ಬಿಹಾರದ ಸುಂದರ ಸರಯೂ ಮತ್ತು ಜಾಹ್ನವೀ ನದಿಗಳ ಮಧ್ಯೆ ಇರುವ ಸಿತಾಬ್ ದಿಯಾರಾ ಎಂಬ ಹಳ್ಳಿಯಲ್ಲಿ ತಂದೆ ಹರಸೂದ್‌ಪಾಲ್, ತಾಯಿ ಫೂಲ್‌ರಾನೀ ಅವರ ನಾಲ್ಕನೆಯ ಮಗನಾಗಿ ಜನಿಸಿದರು. ಇವರದು ಕಾಯಸ್ಥ ಕುಟುಂಬ.

ಜಯಪ್ರಕಾಶರು ಜನ್ಮತಾಳಿದಾಗ ಈಗ ಇರುವಂತೆ ಆಸ್ಪತ್ರೆಗಳ ಅನುಕೂಲವಿರಲಿಲ್ಲ. ಸಹಜವಾಗಿ ಗ್ರಾಮದಲ್ಲಿ ಹೆರಿಗೆಯಾಯಿತೆ ಎಂದರೆ ಅದೂ ಅಲ್ಲ. ಇಡೀ ಪ್ರಪಂಚವನ್ನ ತನ್ನ ಹಿಡಿತದಲ್ಲಿ ಕ್ರೂರವಾಗಿ ಹಿಡಿದಿಟ್ಟುಕೊಂಡಿದ್ದ ಪ್ಲೇಗ್ ಮಾರಿ ಜನರನ್ನು ಹಳ್ಳಿಯಲ್ಲಿ ವಾಸಿಸಲೂ ಬಿಟ್ಟಿರಲಿಲ್ಲ. ಈ ಪ್ಲೇಗ್ ಮಾರಿ ನರಮೇಧಕ್ಕಾಗಿ ನಾಲಿಗೆ ಚಾಚಿ ನಡೆದಿತ್ತು. ಅದರಿಂದ ತಪ್ಪಿಸಿಕೊಳ್ಳಲು ಜನ ಹಳ್ಳಿಗಳನ್ನು ತೊರೆದು ಬಾರೆ ಮೇಲೆ ಗುಡಿಸಲು, ಡೇರೆಗಳನ್ನು ಹಾಕಿಕೊಂಡು ವಾಸಿಸುವುದು ಅನಿವಾರ್ಯವಾಗಿತ್ತು. ಜಯಪ್ರಕಾಶರ ತಂದೆತಾಯಿಯರು ಈ ಪ್ಲೇಗಿನಿಂದ ಬದುಕಿ ಉಳಿಯಲು ಸಿತಾಬ್‌ದಿಯಾರಾ ಹಳ್ಳಿಯಿಂದ ಎರಡು ಮೂರು ಮೈಲಿಗಳಷ್ಟು ದೂರದಲ್ಲಿದ್ದ ತಮ್ಮ ಜಮೀನಿನಲ್ಲಿ ಡೇರೆ ಹಾಡಿಕೊಂಡು ವಾಸಿಸುತ್ತಿದ್ದರು. ಅಂತಹ ಅನಾರೋಗ್ಯಕರ ವಾತಾವರಣದಲ್ಲಿ ಬಾರೆಯ ಡೇರೆಯಲ್ಲಿ ಜಯಪ್ರಕಾಶ್ ಜನಿಸಿದರು. ಮನುಕುಲದ ಬೆಳಕಾಗಿ ಬಂದ ಗೌತಮಬುದ್ಧ ಜನಿಸಿದ್ದು ಬಿಹಾರದ ಲುಂಬಿನಿ ವನದಲ್ಲಿ. ಬುದ್ಧ ಕಾಡಿನ ಮಧ್ಯೆ ಜನಿಸಿದ್ದರೆ ಜಯಪ್ರಕಾಶ್ ಗುಡಿಸಿಲಿನಲ್ಲಿ ಜನ್ಮತಾಳಿದರು. ಈರ್ವರ ಬದಕೂ ಮನುಕುಲದ ಬೆಳಕಾಯ್ತು.

ಜಯಪ್ರಕಾಶ್‌ರ ಬಾಲ್ಯದ ಬದುಕು ಮನನೀಯವಾದುದು. ಅಮೆರಿಕಾದ ಅಧ್ಯಕ್ಷನಾಗಿದ್ದ ಅಬ್ರಹಾಂ ಲಿಂಕನ್ ತನ್ನ ಮಗ ಓದುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯುತ್ತಾನೆ. ಅದರಲ್ಲಿ ತನ್ನ ಮಗನನ್ನು ಹೇಗೆ ಬೆಳಸಬೇಕೆಂದು ಹದಿನೆಂಟು ಸೂತ್ರಗಳನ್ನು ತಿಳಿಯ ಪಡಿಸಿದ್ದಾನೆ. ನನ್ನ ಮಗನನ್ನು ನಾಲ್ಕು ಗೋಡೆಗಳ ಮಧ್ಯೆ ಕೂಡಿ ಹಾಕಿ ಕಲಿಸುವ ಪಾಠಕ್ಕಿಂತ ಹೆಚ್ಚಾಗಿ ಅವನಿಗೆ ನಿಸರ್ಗದಲ್ಲಿ ಗಿಡ ಮರ, ಬೆಟ್ಟ ಗುಡ್ಡ, ನದಿತೊರೆ, ಮೃಗ ಪಕ್ಷಿಗಳೊಂದಿಗೆ ಬೆರೆತು ಕಲಿಯಲು ಅವಕಾಶಮಾಡಿ ಎಂಬುದು ಅದರಲ್ಲಿ ಒಂದು. ಅಂತಹ ಒಂದು ವಾತಾವರಣ ಜಯಪ್ರಕಾಶರ ಪಾಲಿಗೆ ಯಾವ ಪೂರ್ವ ತಯಾರಿಯೂ

ಇಲ್ಲದೆ ಸಹಜವಾಗಿ ದಕ್ಕಿತ್ತು. ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಸಿಗದ ಅಂತಹ ವಾತಾವರಣ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಈಗಲೂ ಸಿಗುತ್ತಿದೆ. ಆ ಪರಿಸರದ ಪ್ರಭಾವ ಅವರ ಮೇಲೆ ಉಂಟಾಗುವಂತೆ ಶಿಕ್ಷಕರು ಗಮನ ಹರಿಸಬೇಕಾಗಿದೆ. ಜಯಪ್ರಕಾಶರ ಪ್ರಾಥಮಿಕ ವಿದ್ಯಾಭ್ಯಾಸ ಅಂತಹ ಸುಂದರ ಪರಿಸರದಲ್ಲಿಯೇ ನಡೆಯಿತು.

ಜಯಪ್ರಕಾಶರಿಗೆ ಪಶು ಪಕ್ಷಿಗಳೆಂದರೆ ಪಂಚಪ್ರಾಣ. ಹಾಗೆ ಗುರು ಹಿರಿಯರು ಎಂದರೆ ಪರಮ ಗೌರವ. ಎಲ್ಲದರಲ್ಲೂ ಪೂಜ್ಯಭಾವ. ಇದರಿಂದಾಗಿ ಅವರ ಹೃದಯ ಮನಸ್ಸುಗಳು ಪ್ರಕೃತಿಯ ಮಡಿಲಲ್ಲಿ ವೈಶಾಲ್ಯದಿಂದ ಮಾನವೀಯ ತುಡಿತದಿಂದ ಅರಳಿದುವು.

ಒಮ್ಮೆ ಒಂದು ಪಾರಿವಾಳ ಸತ್ತಾಗ ದುಃಖ ತಡೆಯಲಾಗದೆ ಜಯಪ್ರಕಾಶರು ದಿನವಿಡೀ ಅತ್ತದ್ದೂ ಅಲ್ಲದೆ ಎರಡುದಿನ ಆಹಾರ ಸೇವಿಸದೆ ಚಿಂತಾಮಗ್ನರಾಗಿದ್ದರಂತೆ. ಇದು ಅವರು ಜೀವಕ್ಕೆ ಕೊಡುತ್ತಿದ್ದ ಬೆಲೆಯ ಪ್ರತೀಕವಾಗಿದೆ.

ಒಂದು ಸಂದರ್ಭದಲ್ಲಿ ಮನೆಯ ಕುದುರೆ ಜಯಪ್ರಕಾಶರಿಗೆ ಘಾಸಿಗೊಳಿಸಿದಾಗ ಮನೆಯ ಹಿರಿಯರು ಕುದುರೆಯನ್ನು ಮನೆಯಿಂದ ಹೊರಹಾಕಲು ಯತ್ನಿಸಿದಾಗ ಅತ್ತು ಅನೇಕ ವಿಧವಾಗಿ ಗೋಳಾಡಿ ಕುದುರೆಯನ್ನು ಮನೆಯಲ್ಲಿಯೇ ಉಳಿಸಿಕೊಂಡ ರಂತೆ. ತಪ್ಪು ಮಾಡಿದವರ ಮೇಲೂ ಮಮತೆಯ ಮಳೆಗರೆವ ಅವರ ಹೃದಯದ ಪ್ರತೀಕವಾಗಿದೆ ಈ ಘಟನೆ.

ಇನ್ನೊಮ್ಮೆ ಪಾಠ ಹೇಳಿಕೊಡುತ್ತಿದ್ದ ಅಧ್ಯಾಪಕರು ಸಮರ್ಥರಲ್ಲ ಎಂಬ ಕಾರಣಕ್ಕಾಗಿ ಬೇರೊಬ್ಬರನ್ನು ನೇಮಿಸಲು ಯತ್ನಿಸಿದಾಗ ಆ ಪ್ರಯತ್ನವನ್ನು ತಮ್ಮ ದೃಢ ನಿರ್ಧಾರದ ಮಾತಿನಿಂದ ವಿರೋಧಿಸಿ ಆ ಅಧ್ಯಾಪಕರನ್ನೇ ಇರಿಸಿಕೊಂಡರಂತೆ. ಯಾವುದೇ ವ್ಯಕ್ತಿಯನ್ನು ಕೀಳಾಗಿ ಕಾಣುವ ಮನೋಧರ್ಮಕ್ಕೆ ಜಯಪ್ರಕಾಶರು ವಿರುದ್ಧವಾಗಿದ್ದರು. ಇದು ಅವರ ವ್ಯಕ್ತಿತ್ವವನ್ನು ಎತ್ತಿಹಿಡಿಯುತ್ತದೆ.

ಪ್ರಾಥಮಿಕ ಶಿಕ್ಷಣದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಜಯಪ್ರಕಾಶರನ್ನು ಬಿಹಾರದ ರಾಜಧಾನಿಯಾದ ಪಟ್ನಾಕ್ಕೆ ಕಳುಹಿಸಲಾಯ್ತು. ಅಲ್ಲಿ ಕೊಲಿಜಿಯೇಟ್ ಸ್ಕೂಲಿನಲ್ಲಿ ಅವರಿಗೆ ಪ್ರವೇಶ ದೊರೆಯಿತು. ಅಮ್ಜದ್ ಅಲೀಖಾನ್ ಅಲ್ಲಿನ ಮುಖ್ಯೋಪಾಧ್ಯಾಯ ರಾಗಿದ್ದರು. ಉತ್ತಮ ಹೆಸರುಗಳಿಸಿದ್ದ ಅವರು ಶಿಸ್ತಿನ ಸಿಪಾಯಿಯಾಗಿದ್ದರು. ಅವರ ಮಾರ್ಗದರ್ಶನ ಜಯಪ್ರಕಾಶರಿಗೆ ದೊರಕಿತು.

ಪಟ್ನಾದಲ್ಲಿ ಉಳಿದುಕೊಳ್ಳಲು ಜಯಪ್ರಕಾಶರಿಗೆ ಯಾವ ನೆಂಟರಿಷ್ಟರೂ ಇರಲಿಲ್ಲ. ವಿದ್ಯಾರ್ಥಿ ಕೇಂದ್ರವಾಗಿದ್ದ 'ಸರಸ್ವತೀಭವನ' ಇವರ ತಂಗುದಾಣವಾಯ್ತು. ನಾಡಿನ ಪುಣ್ಯವೋ ಎಂಬಂತೆ ಅಲ್ಲಿ ಅವರಿಗೆ ಅನೇಕ ರೀತಿಯ ಪ್ರಭಾವವಾಯ್ತು.

ಸ್ವಾತಂತ್ರ್ಯ ಸಂಗ್ರಾಮದ ವಿವಿಧ ಚಟುವಟಿಕೆಗಳು, ರಾಷ್ಟ್ರದ ಗಂಭೀರ ಸಮಸ್ಯೆಗಳ ಗಾಢ ಚರ್ಚೆಗಳು ಅಲ್ಲಿ ನಡೆಯುತ್ತಿದ್ದುವು. ಹೊರಗಿನಿಂದ ರಹಸ್ಯವಾಗಿ ತರಿಸಿಕೊಂಡು ಓದುತ್ತಿದ್ದ ಪತ್ರಿಕೆಗಳ, ಪುಸ್ತಕಗಳ ಪರಿಚಯವಾಯ್ತು. ಸ್ವಾತಂತ್ರ್ಯಗಳಿಕೆಗಾಗಿ ದೇಶದ

ಉದ್ದಗಲ ನಡೆಯುತ್ತಿದ್ದ ಸಂಗ್ರಾಮಗಳ ನಿಕಟ ಪರಿಚಯವಾಯ್ತು. ಸುಪ್ತವಾಗಿದ್ದ ರಾಷ್ಟ್ರಪ್ರೇಮ ಜಾಗೃತವಾಗಿ ಅವರಲ್ಲಿ ಸ್ವಾಭಿಮಾನದ ಕೆಚ್ಚು ನೆಚ್ಚುಗಳು ಗರಿಗೆದರತೊಡಗಿದ್ದವು.

ಪ್ರಾಥಮಿಕ ಶಿಕ್ಷಣ ಪಡೆವ ಸಂದರ್ಭದಲ್ಲಿ ಸಹಪಾಠಿಯೊಬ್ಬ ಜಯಪ್ರಕಾಶರ ಪುಸ್ತಕವನ್ನು ಕದ್ದ. ಕದ್ದವರು ಯಾರು ಎಂದು ಗೊತ್ತಾಯ್ತು. ಪ್ರತ್ಯಕ್ಷವಾಗಿ ಕಾಣದೆ ಇದ್ದುದರಿಂದ ನೇರವಾಗಿ ಆರೋಪಿಸಲು ಜಯಪ್ರಕಾಶರ ಮನಸ್ಸು ಒಪ್ಪಲಿಲ್ಲ. ಪ್ರಾಂಶುಪಾಲರಿಗೆ ತಿಳಿದು ಪುಸ್ತಕವೇನೋ ಹಿಂದಿರುಗಿ ಬಂತು. ಸ್ವಾರಸ್ಯ ಎಂದರೆ ಕ್ಷಮೆ ಕೇಳಬೇಕಾದ ಹುಡುಗನನ್ನೇ ಜಯಪ್ರಕಾಶ್ ಕ್ಷಮೆ ಯಾಚಿಸಿದರು. ಅದರಿಂದ ಪ್ರಭಾವಿತನಾದ ಹುಡುಗ ತನ್ನ ಅಂತರಂಗವನ್ನು ತೆರೆದಿಟ್ಟು ಇನ್ನು ಮುಂದೆ ಕಳ್ಳತನ ಮಾಡದೆ ಪ್ರಾಮಾಣಿಕನಾಗಿರುವ ಪ್ರತಿಜ್ಞೆ ಮಾಡಿದ. ಹೀಗೆ ಹೃದಯ ಪರಿವರ್ತಿಸುವ ಚುಂಬಕ ಶಕ್ತಿ ಜಯಪ್ರಕಾಶರಲ್ಲಿ ಮನೆಮಾಡಿತ್ತು.

ಮುಖ್ಯೋಪಾಧ್ಯಾಯರಾಗಿ ಬಂದ ವಿಟ್‌ಮೋರ್ ಎಂಬ ಆಂಗ್ಲ ವ್ಯಕ್ತಿ ಹಿಂದೂ ಹಬ್ಬದ ದಿನದಂದು ಪರೀಕ್ಷೆ ಗೊತ್ತುಪಡಿಸಿದ. ಆತನ ಆಜ್ಞೆಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ. ಜಯಪ್ರಕಾಶ್ ಸೇರಿದಂತೆ ಆರು ಜನ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬಹಿಷ್ಕರಿಸಿದರು. ಮಾರನೆ ದಿನ ವಿಚಾರಣೆಯಾಗಿ ಬೆತ್ತದ ಏಟಿನ ಶಿಕ್ಷೆಯಾಯ್ತು. ಕೈ ಊದಿಕೊಂಡರೂ ಸತ್ಯಾಗ್ರಹದಿಂದ ಹಿಂದೆಗೆಯಲಿಲ್ಲ. ಇದರಿಂದ ಧರ್ಮ, ಸಂಸ್ಕೃತಿ, ಸತ್ಯಗಳನ್ನು ರಕ್ಷಿಸುವಲ್ಲಿ ಇರುವ ಕಾಠಿಣ್ಯತೆಯ ಅರಿವು ಅವರಿಗಾಯ್ತು. ಮತ್ತಷ್ಟು ಗಟ್ಟಿಗೊಂಡರು.

ವಿದ್ಯಾರ್ಜನೆಯಲ್ಲಿ ಜಯಪ್ರಕಾಶರು ಎಂದೂ ಹಿಂದೆ ಬಿದ್ದವರಲ್ಲ. ಅಧ್ಯಯನದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳುತ್ತಿದ್ದರು. ಅದರ ಫಲವಾಗಿ ಅವರು ಪ್ರೌಢ ಶಿಕ್ಷಣವನ್ನು ಪ್ರಥಮ ಶ್ರೇಣಿಯಲ್ಲಿ ಪಡೆದುಕೊಂಡರು. ಮುಂದಿನ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿವೇತನವೂ ಸಿಕ್ಕಿತು.

ವಿದ್ಯಾರ್ಜನೆಯ ಅವಧಿಯಲ್ಲಿ ನಡೆದ ಅನೇಕ ಘಟನೆಗಳು ಅವರನ್ನು ಚಿಂತನೆಗೆ ಈಡು ಮಾಡಿದವು. ಬಿಹಾರದ ಅಂದಿನ ರಾಜಕೀಯ ಪರಿಸ್ಥಿತಿ ಆ ಘಟನೆಗಳು ಜರುಗಲು ಕಾರಣವಾಗಿತ್ತು. ಬ್ರಿಟಿಷರ ಆಳ್ವಿಕೆಯ ವಿರುದ್ಧ ಬಾಂಬ್‌ಸ್ಫೋಟ, ರಾಜಕೀಯ ದರೋಡೆಗಳು, ಚಂಪಾರಣ್ಯ ಸತ್ಯಾಗ್ರಹ ಮುಂತಾದವುಗಳು ಅವರ ಮೇಲೆ ಗಾಢ ಪರಿಣಾಮ ಬೀರಿದವು. ಗಾಂಧೀಜಿಯವರ ಬರಹಗಳನ್ನು, ಗಾಂಧಿಯವರನ್ನು ಕುರಿತು ಬರೆದ ಬರಹಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡಿದರು.

ಒಮ್ಮೆ ಜಯಪ್ರಕಾಶರು ತಂಗಿದ್ದ 'ಸರಸ್ವತೀ ಭವನದ' ಹತ್ತಿರವೇ ಇದ್ದ ಶ್ರೇಷ್ಠ ಇತಿಹಾಸಕಾರರಾದ ಯದುನಾಥ ಸರ್ಕಾರ್ ಅವರ ಮನೆಗೆ ಪೊಲೀಸರು ನುಗ್ಗಿ ಶೋಧಿಸುತ್ತಿದ್ದರು. ಕ್ರಾಂತಿಕಾರಿ ಹುಡುಗನೊಬ್ಬ ಅವರ ಮನೆಯಲ್ಲಿ ಅಡಗಿಕೊಂಡಿದ್ದನೆಂಬ ಗುಮಾನಿ ಅದಕ್ಕೆ ಕಾರಣವಾಗಿತ್ತು. ಕ್ರಾಂತಿದಳದ ತರುಣರ ಕ್ರಾಂತಿಕಾರಕ ಚಟುವಟಿಕೆಗಳು ಸಹಜವಾಗಿ ಯುವ ಮನಸ್ಸಿನ ಜಯಪ್ರಕಾಶರ ಮೇಲೆ ಪ್ರಭಾವ ಬೀರಿದವು. ಗಾಂಧಿಜೀಯವರ, ಗೋಖಲೆಯವರ ವಿಚಾರಗಳಿಂದ ಆಕರ್ಷಿತರಾದ ಜಯಪ್ರಕಾಶ್ ಕ್ರಾಂತಿದಳ ಸೇರಲು

ಹೋದಾಗ ಅವರು ಭೂಗತರಾಗಿ ಬಿಟ್ಟಿದ್ದರು. ಶ್ರೇಷ್ಠ ಇತಿಹಾಸ ಹೊಂದಿರುವ, ಶ್ರೇಷ್ಠ ವ್ಯಕ್ತಿಗಳ, ಉತ್ತಮ ಮೌಲ್ಯಗಳ ನೆಲೆವೀಡಾಗಿರುವ ಭಾರತ ಏಕೆ ಇಂಥ ಸಂಕಷ್ಟಕ್ಕೆ ಗುರಿಯಾಗಿದೆ ಎಂದು ನದಿಯ ದಡದಲ್ಲಿ ಏಕಾಂತವಾಗಿ ಕುಳಿತು ಚಿಂತಿಸಿದರು. ಅನೇಕ ಚಿತ್ರಗಳು ಅವರ ಕಣ್ಮುಂದೆ ಸುಳಿದುವು.

ಭಾರತ ಗುಲಾಮ ರಾಷ್ಟ್ರವಾಗಲು ಅನೇಕ ಕಾರಣಗಳಿದ್ದುವು. ಸಮುದ್ರವನ್ನು ದಾಟಿದರೆ ಮೈಲಿಗೆಯಾಗುತ್ತದೆ ಎಂಬ ನಿಯಮವನ್ನು ತಂದಿದ್ದು ಮೊದಲ ಕಾರಣ. ವೈಜ್ಞಾನಿಕ ವಿಚಾರಗಳಿಂದ ಹೊರಗುಳಿದು ಕೇವಲ ಸಂಪ್ರದಾಯದ ಆಚರಣೆಗಳೇ ಸರ್ವಶ್ರೇಷ್ಠ ಎಂದು ನಂಬಿ ವರ್ಣವ್ಯವಸ್ಥೆಯನ್ನು ಗಟ್ಟಿಗಳಿಸಿಕೊಂಡು ನಾವು ನಮ್ಮೊಳಗೆ ನಿರ್ವೀರ್ಯ ರಾದುದು, ವಿಜ್ಞಾನವನ್ನು ಅಳವಡಿಸಿಕೊಂಡ ಪಾಶ್ಚಿಮಾತ್ಯರನ್ನು ಮ್ಲೇಚ್ಛರು ಎಂದು ಅವರ ಜ್ಞಾನದಿಂದ ದೂರ ಉಳಿದುದು ಈ ಎಲ್ಲ ಸಮಸ್ಯೆಗಳಿಗೆ ಮೂಲಕಾರಣ. ಇದಕ್ಕೆ ಇರುವ ಏಕೈಕ ಮಾರ್ಗ ವೆಂದರೆ ಆಧ್ಯಾತ್ಮದೊಂದಿಗೆ ವಿಜ್ಞಾನವನ್ನು ಅಳವಡಿಸಿಕೊಳ್ಳುವುದು. ಜಗದೀಶ ಚಂದ್ರಬೋಸ್, ಪ್ರಫುಲ್ಲಚಂದ್ರರಾಯ್ ಅವರಂತೆ ತಾನೂ ಒಬ್ಬ ವಿಜ್ಞಾನಿಯಾಗಿ ರಾಷ್ಟ್ರ ಸೇವೆ ಮಾಡಬೇಕು ಎಂಬ ಇಚ್ಛೆ ಪ್ರಬಲವಾಯ್ತು. ಪಟ್ನಾ ಕಾಲೇಜನ್ನು ಸೇರಿ ವಿಜ್ಞಾನ ವಿದ್ಯಾರ್ಥಿಯಾದರು. ಮನಸ್ಸು ವಿಜ್ಞಾನವನ್ನು ಕುರಿತು ಚಿಂತಿಸಿದರೆ ಹೃದಯ ಸಾಹಿತ್ಯದ ಕಡೆ ವಾಲಿತ್ತು. ಭಾರತದ ಭೌತಿಕ ಸಮಸ್ಯೆಗಳಿಗೆ ವಿಜ್ಞಾನ ಪರಿಹಾರವಾಗಿ ಅವರ ಮನಸ್ಸನ್ನು ಸಿದ್ಧಗೊಳಿಸುತ್ತಿದ್ದರೆ ಅದರ ಆಂತರಿಕ ಸಮಸ್ಯೆಗಳಿಗೆ ಪರಿಹಾರವಾಗಿ ಸಾಹಿತ್ಯದ ಒಳಬೆಳಕು ಅವರ ಹೃದಯವನ್ನು ಹದಗೊಳಿಸುತ್ತಿತ್ತು. ಹೀಗೆ ಅಧ್ಯಯನದಲ್ಲಿ, ಚಿಂತನೆಯಲ್ಲಿ ಮಗ್ನವಾಗಿದ್ದಾಗ 'ಕಾಲ' ಅವರ ಬದುಕಿಗೆ ಮತ್ತೊಂದು ಆಯಾಮವನ್ನು ಒದಗಿಸಿತು.

ಹನ್ನೆರಡು ವರ್ಷಗಳ ಕಾಲ ಬಿಹಾರ ಕಾಂಗ್ರೆಸ್ ಅಧ್ಯಕ್ಷರಾದ, ದರ್ಭಾಂಗದ ದೊರೆಯನ್ನು ಎದುರಿಸಿ ನಿಂತ, 'ಇಂಪೀರಿಯಲ್ ಕೌನ್ಸಿಲ್'ನಲ್ಲಿ ಬಿಹಾರದ ಮೊದಲ ಸರ್ಕಾರೇತರ ಪ್ರತಿನಿಧಿಯಾಗಿ, ರಾಜೇಂದ್ರ ಪ್ರಸಾದ್ ಅವರಂಥ ವ್ಯಕ್ತಿಗಳನ್ನು ರೂಪಿಸಿದ, ಚಂಪಾರಣ್ಯ ಸತ್ಯಾಗ್ರಹಕ್ಕೆ ಆಹ್ವಾನ ನೀಡಿ ಶಕ್ತಿಯನ್ನು ತುಂಬಿದ್ದ ಧೀಮಂತ ವ್ಯಕ್ತಿಗಳಾಗಿದ್ದ ವಜ್ರ ಕಿಶೋರ ಬಾಬು ಅವರ ಪರಿಚಯವಾಯ್ತು. ತರುಣ ತೇಜಸ್ವಿ ಜಯಪ್ರಕಾಶರಲ್ಲಿ ಪ್ರಕಾಶಗೊಳ್ಳುತ್ತಿದ್ದ ಪ್ರತಿಭೆಯನ್ನು ಕಂಡು ಮಾರುಹೋದರು. ಕಂಕಣ ಕೂಡಿ ಬಂದು ತಮ್ಮ ಮಗಳಾದ ಪ್ರಭಾವತಿಯನ್ನು ಮದುವೆ ಮಾಡಿಕೊಟ್ಟರು. ಮತ್ತೊಬ್ಬ ಮಗಳು ವಿದ್ಯಾವತಿಯನ್ನು ರಾಜೇಂದ್ರ ಪ್ರಸಾದರ ಹಿರಿಯ ಮಗ ಮೃತ್ಯುಂಜಯ ಅವರಿಗೆ ಧಾರೆ ಎರೆದುಕೊಟ್ಟರು. ಹೀಗೆ ಜಯಪ್ರಕಾಶರ ಬಿಹಾರದ ರಾಜಕೀಯದ ನಂಟಿನಗಂಟು ಬಲವಾಯ್ತು.

ಇಂಟರ್ ಪರೀಕ್ಷೆ ಹತ್ತಿರವಾಗಿತ್ತು. ದೇಶದ ಪರಿಸ್ಥಿತಿ ಬೇರೆಯೇ ಆಗಿತ್ತು. ಗಾಂಧೀಜಿಯವರ ಅಸಹಕಾರ ಚಳವಳಿ ಚಾಲನೆಗೊಳ್ಳುತ್ತಿತ್ತು. ಹಿರಿಯ ನಾಯಕ ಮೌಲಾನಾ ಅಬುಲ್ ಕಲಾಮ್ ಆಜಾದರ ಭಾಷಣದಿಂದ ಇಡೀ ಪಟ್ನಾ ನಗರ ಪ್ರಭಾವಿತವಾಯ್ತು. ಜೊತೆಗೆ ನೆಹರೂ ಅವರ ರಾಷ್ಟ್ರ ವಿಮೋಚನೆಯ ಪ್ರಚೋದಕ

ವಾಣಿಗಳು ಯುವಶಕ್ತಿಯನ್ನು ಕ್ರಿಯಾಶೀಲರಾಗುವಂತೆ ಮಾಡಿತು. ವಿದ್ಯಾರ್ಥಿಗಳ ತಂಡ ಮೆರವಣಿಗೆಯಲ್ಲಿ ತೆರಳಿ ಪ್ರತಿಜ್ಞೆ ಮಾಡಿ ರಾಷ್ಟ್ರಕ್ಕಾಗಿ ಸಮರ್ಪಿಸಿಕೊಳ್ಳುವುದಾಗಿ ರಾಜೇಂದ್ರ ಪ್ರಸಾದರಲ್ಲಿ ತಿಳಿಸಿತು. ೧೯೨೦ರ ಅಂತ್ಯ ಭಾಗದಲ್ಲಿ ಗಾಂಧೀಜಿ ಪಟ್ನಾಗೆ ಭೇಟಿ ನೀಡಿದರು. ಜಯಪ್ರಕಾಶ್‌ರು ಗಾಂಧೀಜಿಯವರನ್ನು ಕಂಡದ್ದು ಅದೇ ಮೊದಲು. ಗಾಂಧೀಜಿಯವರ ವ್ಯಕ್ತಿತ್ವ ಅವರ ಮೇಲೆ ಗಾಢ ಪ್ರಭಾವ ಬೀರಿತು.

ಅಸಹಕಾರ ಚಳವಳಿಯ ಸಂದರ್ಭದಲ್ಲಿ ಪ್ರಸಂಗ ಒಂದು ಜರುಗಿತು. ೧೯೨೨ರ ಫೆಬ್ರವರಿಯಲ್ಲಿ ಚೌರೀಚಾರದ ಘಟನೆಯಲ್ಲಿ ಕೆಲವು ಬ್ರಿಟಿಷ್ ಅಧಿಕಾರಿಗಳನ್ನು ಹತ್ಯೆ ಮಾಡಲಾಗಿ ಗಾಂಧೀಜಿ ಅಸಹಕಾರ ಚಳವಳಿಯನ್ನು ನಿಲ್ಲಿಸಿದರು. ಆಗ ಜಯಪ್ರಕಾಶ್ ಮುಂದೇನು ಮಾಡಬೇಕೆಂದು ತಿಳಿಯದೆ ದೇಶಪ್ರೇಮಿ ವಿದ್ಯಾರ್ಥಿಗಳಿಗೆ ಸ್ಥಾಪಿಸಲಾಗಿದ್ದ ಬಿಹಾರ್ ವಿದ್ಯಾಪೀಠಕ್ಕೆ ಸೇರಿಕೊಂಡರು. ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪ್ರೊ॥ ಫೂಲ್‌ದೇವ್ ಸಹಾಯ್ ಬಳಿ ಅಧ್ಯಯನ ಮುಂದುವರೆಸಿದರು. ಅಮೆರಿಕೆಗೆ ಹೋಗಿ ವಿದ್ಯಾಭ್ಯಾಸ ಮಾಡಲು ಸತ್ಯದೇವ ಪರಿವ್ರಾಜರ ಕೃತಿಗಳ ಅಧ್ಯಯನ ಹಾಗೂ ಅವರ ಪರಿಣಾಮಕಾರಿ ಭಾಷಣಗಳು ಜಯಪ್ರಕಾಶರಿಗೆ ಪ್ರೇರೇಪಿಸಿದುವು. ೧೯೨೨ ಆಗಸ್ಟ್ ೧೬ ರಂದು ಜಯಪ್ರಕಾಶ್ ಅಮೆರಿಕೆಗೆ ತೆರಳಿದರೆ ಸಹಧರ್ಮಿಣಿ ಪ್ರಭಾವತಿ ಗಾಂಧೀಜಿ ಯವರ ಸಾಬರಮತಿ ಆಶ್ರಮಕ್ಕೆ ಸೇರಿದರು.

ಯಾವ ಕಡೆಯಿಂದಲೂ ಹೆಚ್ಚಿನ ಆರ್ಥಿಕ ನೆರವನ್ನು ನಿರೀಕ್ಷಿಸದ ಜಯಪ್ರಕಾಶ್ ಅಮೆರಿಕಾದಲ್ಲಿ ಸ್ವಾವಲಂಬಿಯಾಗಿ ಶಿಕ್ಷಣ ನಡೆಸುವ ಸಂಕಲ್ಪ ಮಾಡಿ ಅದರಲ್ಲಿ ಯಶಸ್ವಿ ಯಾದರು. ಏಳು ವರ್ಷಗಳ ಕಾಲ ಹಣ್ಣಿನ ತೋಟಗಳಲ್ಲಿ ದಿನನಿತ್ಯ ಒಂಭತ್ತು ಘಂಟೆಗಳ ಕಾಲ ದುಡಿದರು. ಭಂಗಿಗಳೊಡನೆ, ಮೋಚಿಗಳೊಡನೆ, ಅಮೆರಿಕದ ದಲಿತರೊಡಗೂಡಿ ದುಡಿವ ಅವಕಾಶ ಅವರಿಗೆ ಲಭಿಸಿತು. ತುಳಿತಕ್ಕೊಳಗಾದವರ ದಾರುಣ ಬದುಕಿನ ನಿಕಟ ಪರಿಚಯವಾಯ್ತು. ಕಾರ್ಮಿಕ ವಿಮೋಚನೆಯ ಮಾರ್ಕ್ಸ್‌ವಾದದ ಬಿರುಗಾಳಿ ಅಮೆರಿಕಾ ವನ್ನು ಅಲ್ಲಾಡಿಸಿತು. ಅಮೆರಿಕೆಯ ಅನುಭವ ವ್ಯಕ್ತಿತ್ವ ರೂಪುಗೊಳ್ಳಲು ಸಹಕಾರಿಯಾಗಿ ಬಂತು. ಹೋಟೆಲ್‌ನ ಪರಿಚಾರಕನಾಗಿ ದುಡಿದದ್ದು, ಬೂಟ್‌ಪಾಲಿಶ್ ಮಾಡಿ, ಮಾಂಸ ಶುದ್ಧೀಕರಣ ಕಾರ್ಖಾನೆಯಲ್ಲಿ ಕೂಲಿ ಮಾಡಿ, ಸುಗಂಧ ದ್ರವ್ಯಗಳ ಮಾರಾಟ ಮಾಡಿ ವಿವಿಧ ಮುಖಗಳ ಅನುಭವ ಪಡೆದರು.

ಮಾರ್ಕ್ಸ್‌ವಾದದ ಬಿರುಗಾಳಿ ಅಮೆರಿಕದಲ್ಲಿ ಎಬ್ಬಿಸಿದ ಹೊಸ ಅಲೆಯ ಅನುಭವ ಜಯಪ್ರಕಾಶರಲ್ಲಿ ಭರತಭೂಮಿಯ ವಿಮೋಚನೆಯನ್ನು ಕುರಿತು ಚಿಂತನೆಗೆ ಹಚ್ಚಿತು. ಅಲ್ಲಿಯ ಅನುಭವ ಅವರಿಗೆ ಪೂರಕವಾಗಿ ಬಂತು. ಪ್ರೊ॥ ಆಲ್ಬರ್ಟ್ ವೇಸ್ ನೇತೃತ್ವದಲ್ಲಿ ವಿಜ್ಞಾನ, ಕೆಮಿಕಲ್ ಇಂಜಿನಿಯರಿಂಗ್ ಶಿಕ್ಷಣ ಪಡೆದರು. ಪ್ರೊ॥ ಎಡ್ವರ್ಡ್ ರೈಸ್ ಮತ್ತು ಪ್ರೊ॥ಯಂಗ್ ಅವರಂಥ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನದಲ್ಲಿ ಸಮಾಜಶಾಸ್ತ್ರವನ್ನು ಅಧ್ಯಯನ ಮಾಡಿದರು. ಮಾರ್ಕ್ಸ್ ಮತ್ತು ಲೆನಿನ್ನರ ವಿಚಾರ ಅವರನ್ನು ಆಕರ್ಷಿಸಿತು. ರಷ್ಯಾಕ್ಕೆ ಹೋಗುವ ಮನಸ್ಸು ಮಾಡಿದರು. ರಾಜೇಂದ್ರ ಪ್ರಸಾದರು 'ಭಾರತಕ್ಕೆ

ಹಿಂದಿರುಗಿ, ಅಗತ್ಯ ಬಿದ್ದರೆ ಹೋಗುವಿರಂತೆ' ಎಂದು ಬರೆದ ಕಾರಣ ರಷ್ಯಾ ಪ್ರವಾಸವನ್ನು ಕೈಬಿಟ್ಟರು. 'ಜಯ ಪ್ರಕಾಶರು ಬೌದ್ಧಿಕವಾಗಿ ಎತ್ತರದವರು, ಅಷ್ಟೇ ಅಲ್ಲ ಇತರರಿಗಿಂತ ಶ್ರೇಷ್ಠರು' ಎಂದು ಅಮೆರಿಕೆಯ ಪ್ರೊ॥ ಮಿಲ್ಲರ್ ಅವರಿಂದ ಪ್ರಶಂಸಿಸಲ್ಪಟ್ಟರು. ಕೀಟಾಣು ವಿಜ್ಞಾನದಿಂದ ಪ್ರೌಢಸಂಕಲನ ಶಾಸ್ತ್ರದವರೆಗೆ ಅಭ್ಯಸಿಸಿದರು. ಜೊತೆಗೆ ಮಾನವ ವಂಶ ಶಾಸ್ತ್ರ, ಸಂಖ್ಯಾಶಾಸ್ತ್ರ, ಶರೀರಶಾಸ್ತ್ರ, ಮನೋವಿಜ್ಞಾನ, ಇತಿಹಾಸ, ಅರ್ಥಶಾಸ್ತ್ರಗಳನ್ನು ಕುರಿತ ಆಳವಾದ ಅಧ್ಯಯನ ಮಾಡಿ ಜೊತೆಗೆ ಮಾರ್ಕ್ಸ್ ಸಿದ್ಧಾಂತದ ಅಧ್ವರ್ಯುವಾಗಿ ೧೯೨೯ರ ಅಂತ್ಯ ಭಾಗದಲ್ಲಿ ಭಾರತಕ್ಕೆ ಮರಳಿದರು.

ಅಮೆರಿಕಾ ಬಿಡುವ ವೇಳೆಗೆ ಅವರ ಸಹಧರ್ಮಿಣಿ ಪ್ರಭಾದೇವಿ ಅವರಿಂದ ಪತ್ರ ಬಂದಿತ್ತು. ದೇಶಸೇವೆಗೆ ಕೌಟುಂಬಿಕ ಜೀವನ ಅಡಚಣೆಯಾದ್ದರಿಂದ ಬ್ರಹ್ಮಚರ್ಯ ದೀಕ್ಷೆ ತೆಗೆದುಕೊಳ್ಳೋಣ ಎಂಬುದು ಆ ಪತ್ರದ ಸಾರಾಂಶ. ಆಗಲಿ ಬಂದಾಗ ಚರ್ಚಿಸೋಣ ಎಂದು ಉತ್ತರಿಸಿದರು. ಭಾರತಕ್ಕೆ ಬಂದನಂತರ ಜಯಪ್ರಕಾಶರಲ್ಲಿ ರಾಷ್ಟ್ರೀಯ ಭಾವನೆ ತುತ್ತತುದಿಯನ್ನು ಮುಟ್ಟಿತ್ತು. ತುಂಬು ಉತ್ಸಾಹದಿಂದ ಹೋರಾಟದಲ್ಲಿ ಧುಮುಕಿದರು. ಅನೇಕ ಸಂಕೋಲೆಗಳಿಂದ ಬಂಧಿಸಿರುವ ಮಾತೃಭೂಮಿಯ ಬಿಡುಗಡೆಗೆ ಸಮರ್ಪಿಸಿಕೊಂಡರು. ಸಹಧರ್ಮಿಣಿ ಪ್ರಭಾವತಿಯವರ ಇಚ್ಛೆಯಂತೆ ಬ್ರಹ್ಮಚರ್ಯ ದೀಕ್ಷೆಯನ್ನು ಸ್ವೀಕರಿಸಿದರು. ದೇಶಸೇವೆ ಮಾಡಲು ಅದು ಅವರೀರ್ವರಿಗೆ ಶ್ರೀರಕ್ಷೆಯಾಗಿ ಪರಿಣಮಿಸಿತು. ಇಬ್ಬರೂ ಮಾತೃಭೂಮಿಯ ವಿಮೋಚನೆಯೊಂದನ್ನೇ ಜೀವನದ ಗುರಿಯಾಗಿಸಿಕೊಂಡು ಮಕ್ಕಳಿಲ್ಲದೆ, ಆಸ್ತಿಯ ಆಸೆ ಇಲ್ಲದೆ, ದೇಶಸೇವೆಯೇ ತಮ್ಮ ಸಕಲೈಶ್ವರ್ಯ ಎಂದು ಸಮರ್ಪಿಸಿಕೊಂಡರು.

ಭಾರತ ಕಾಂಗ್ರೆಸ್‌ನ ಅಧಿವೇಶನ ೧೯೨೯ರ ಡಿಸೆಂಬರ್‌ನಲ್ಲಿ ಲಾಹೋರ್‌ನಲ್ಲಿ ಜರುಗಿತು. ಕಾಂಗ್ರೆಸ್‌ನ ಗುರಿ 'ಪೂರ್ಣಸ್ವರಾಜ್ಯ' ಎಂದು ಘೋಷಿಸಿತು. ಆ ಅಧಿವೇಶನಕ್ಕೆ ಅನೇಕ ರಾಷ್ಟ್ರೀಯ ನಾಯಕರು ಸೇರಿದ್ದರು. ಗಾಂಧೀಜಿ, ನೆಹರೂಗೆ ಜಯಪ್ರಕಾಶರನ್ನು ಪರಿಚಯಿಸಿದರು. ಪ್ರಥಮ ಭೇಟಿಯಲ್ಲಿಯೇ ಅವರೀರ್ವರ ಸಂಬಂಧ ಗಾಢವಾಗಿ ಪರಿಣಮಿಸಿತು.

ಈ ನಡುವೆ ಜಯಪ್ರಕಾಶರ ತಾಯಿ ಅನಾರೋಗ್ಯದಿಂದ ನರಳುತ್ತಿದ್ದರು. ಇತ್ತ ಹೋರಾಟದ ಕರೆಯಾದರೆ ಅತ್ತ ಮನೆಯ ಸಂಕಷ್ಟ. ತಾಯಿಯ ಸಂಕಷ್ಟದಲ್ಲಿ ಪಾಲ್ಗೊಳ್ಳದಿದ್ದರೆ ಮಗನಾಗಿ ಹುಟ್ಟಿದುದಕ್ಕೆ ಸಾರ್ಥಕತೆ ಏನು ಎಂದು ಊರಿಗೆ ತೆರಳಿದರು. ದಂಪತಿಗಳಿಬ್ಬರೂ ಶುಶ್ರೂಷೆ ಮಾಡಿದರೂ ತಾಯಿಯ ಜೀವ ಉಳಿಯಲಿಲ್ಲ. ಆ ದುಃಖದಲ್ಲಿ ಅಲ್ಲಿಯೇ ತಂಗಿದರು. ಕಮಲಾ ನೆಹರು ಪ್ರಭಾವತಿಯವರಿಗೆ ಬರೆದ ಪತ್ರದಲ್ಲಿ 'ತಾಯಿಯ ಆತ್ಮಕ್ಕೆ ಶಾಂತಿ ಸಿಗುವುದು ಮಾತೃಭೂಮಿಯ ಸೇವೆ ಮಾಡಿದಾಗ ಮಾತ್ರ' ಎನ್ನುವ ನುಡಿ ಅವರನ್ನು ಮತ್ತೆ ಜಾಗೃತರನ್ನಾಗಿಸಿತು. ಅಲಹಾಬಾದಿಗೆ ಮತ್ತೆ ಮರಳಿ ಕಾರ್ಯೋನ್ಮುಖರಾದರು.

೧೯೩೦ರಲ್ಲಿ ನೆಹರೂ ಜಯಪ್ರಕಾಶರನ್ನು ಕಾರ್ಮಿಕ ಇಲಾಖೆಯ

ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಅವರ ಕಾರ್ಯದಕ್ಷತೆಯಿಂದ ಆಂದೋಲನ ಯಶಸ್ವಿಯಾಗಿ ಪರಿಣಾಮ ಬೀರಿತು. ಕಾಂಗ್ರೆಸ್ ಪಕ್ಷದ ಮೇಲೆ ಹಾಕಿದ್ದ ಬಹಿಷ್ಕಾರವನ್ನು ಸರ್ಕಾರ ತೆಗೆದುಹಾಕಿತು. ಬಂಧಿಗಳ ಬಿಡುಗಡೆಯಾಯ್ತು. ಗಾಂಧೀಜಿ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಇಂಗ್ಲೆಂಡಿಗೆ ತೆರಳಿದರು.

ಇತ್ತ ಜಯಪ್ರಕಾಶರ ತಂದೆಗೆ ಪಾರ್ಶ್ವವಾಯು ಬಡಿಯಿತು. ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. ಕಾರ್ಯದರ್ಶಿಯ ಹುದ್ದೆ ತ್ಯಜಿಸಿದರು. ಗಾಂಧಿಗೆ ಪತ್ರ ಬರೆದು ತಮ್ಮ ಆರ್ಥಿಕ ಸಂಕಷ್ಟವನ್ನು ತಿಳಿಸಿದರು. ಗಾಂಧಿ ಬಿರ್ಲಾರಿಗೆ ಪತ್ರಬರೆದು ಜಯಪ್ರಕಾಶರಿಗೆ ಯಾವುದಾದರೂ ಕೆಲಸ-ಸಾಧ್ಯವಾದರೆ ಪಿಲಾನಿ ಕಾಲೇಜಿನಲ್ಲಿ -ಎಂದು ಬರೆದರು. ಕ್ರಾಂತಿಕಾರಿಗಳಿಗೆ ಕಾಲೇಜಿನಲ್ಲಿ ಹುದ್ದೆ ಕೊಟ್ಟರೆ ಸರ್ಕಾರ ಸುಮ್ಮನೆ ಬಿಟ್ಟೀತೆ ? ಬಿರ್ಲಾ ಜಯಪ್ರಕಾಶರನ್ನು ತಮ್ಮ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡರು. ಆದರೆ ಆ ವಾತಾವರಣದಲ್ಲಿ ಆರು ತಿಂಗಳು ಇರಲೂ ಅವರಿಗೆ ಸಾಧ್ಯವಾಗಲಿಲ್ಲ. ಬಿರ್ಲಾರಂಥ ಬಂಡವಾಳ ಶಾಹಿಗಳ ಒಂದು ಕಾಲು ಗಾಂಧೀಜಿಯ ಸಾಬರಮತಿ ಆಶ್ರಮದಲ್ಲಿದ್ದರೆ ಮತ್ತೊಂದು ಕಾಲು ಗೌರ್ನರ್ ಜನರಲ್ಲರ ಕಛೇರಿಯಲ್ಲಿರುತ್ತದೆ ಎಂಬ ಕಟು ವಾಸ್ತವದ ಅನುಭವ ಅವರನ್ನು ಅಲ್ಲಿಂದ ಕಾಲ್ತೆಗೆಯುವಂತೆ ಮಾಡಿತು. ಬಂಡವಾಳ ಶಾಹಿಗಳ ಅಂತರಂಗ ಜಯಪ್ರಕಾಶರಿಗೆ ಅರಿವಾದಂತೆ ಗಾಂಧೀಜಿಯವರಿಗೆ ಆಗದಿದ್ದುದು ಒಂದು ಆಶ್ಚರ್ಯವೇ ಸರಿ ! ಸ್ವಾತಂತ್ರ್ಯ ಸಿಕ್ಕಿದ್ದು ಬಂಡವಾಳಶಾಹಿಗಳಿಗೆ ಎಂಬುದು ಕಟುವಾಸ್ತವ. ಈಗ ಅದು ಇತಿಹಾಸ. ಅದರ ಬಿಡುಗಡೆಗಾಗಿ ಈಗ ಮತ್ತೆ ಹೋರಾಡಬೇಕಾಗಿರುವುದು ಆಂತರಿಕ ಸಮಸ್ಯೆಯ ಮತ್ತೊಂದು ಮಜಲು.

'ಇರ್ವಿನ್ ಒಪ್ಪಂದ' ದ ನಂತರ ಕಾಂಗ್ರೆಸ್ ಶಾಸನಬದ್ಧ ಸಂಸ್ಥೆಯಾಯ್ತು. ಜಯಪ್ರಕಾಶರ ಅಗತ್ಯವನ್ನರಿತ ನೆಹರೂ ಅವರನ್ನು ಮತ್ತೆ ಕರೆಸಿಕೊಂಡರು. ಈ ನಡುವೆ ಗಾಂಧೀಜಿ ಅಸಹಕಾರ ಚಳವಳಿಯನ್ನು ಶುರುಮಾಡಿದರು. ಸರ್ಕಾರ ನೆಹರೂರವರನ್ನು ಬಂಧಿಸಬಹುದೆಂಬ ಶಂಕೆ ಮೂಡಿತು. ಜಯಪ್ರಕಾಶರು, ನೆಹರೂ ಒಟ್ಟಿಗೆ ರೈಲಿನಲ್ಲಿ ಪಯಣಿಸುತ್ತಿದ್ದರು. ನೆಹರೂ ಅವರಿಂದ ಮುಖ್ಯ ಕಾಗದಪತ್ರಗಳನ್ನು ತೆಗೆದುಕೊಂಡ ಜಯಪ್ರಕಾಶ್ ವೇಶ ಮರೆಸಿಕೊಂಡು ಬೊಂಬಾಯಿಯ ತಾಜ್ ಹೋಟಲಿನಲ್ಲಿದ್ದ ಸರೋಜಿನಿ ನಾಯ್ಡು ಅವರಿಗೆ ತಲುಪಿಸಿದರು. ಸರ್ಕಾರ ನೆಹರೂ ಅವರನ್ನು ದಸ್ತಗಿರಿ ಮಾಡಿತು. ಚಳವಳಿಯ, ಸಂಘಟನೆಯ ಸಂಪೂರ್ಣ ಹೊರೆ ಜಯಪ್ರಕಾಶರ ಹೆಗಲೇರಿತು. ಅತ್ಯಂತ ಕ್ರಿಯಾಶೀಲರಾಗಿ ಕಾಂಗ್ರೆಸ್‌ನ 'ಬುದ್ಧಿಶಕ್ತಿಯ ಕೇಂದ್ರ' ಎನಿಸಿಕೊಂಡರು.

ಸರ್ಕಾರ ಇದ್ದಕ್ಕಿದ್ದಂತೆ ಜಯಪ್ರಕಾಶರನ್ನು ದಸ್ತಗಿರಿಮಾಡಿತು. ಅವರ ಬಂಧನವನ್ನು 'ಕಾಂಗ್ರೆಸ್ ಬುದ್ಧಿಶಕ್ತಿಯ ಕೇಂದ್ರದ' ಬಂಧನ ಎಂದು ಬಣ್ಣಿಸಿತು. ಅಂಥ ಬುದ್ಧಿಶಾಲಿ ಜಯಪ್ರಕಾಶರನ್ನು ಬೊಂಬಾಯಿಯ ನಾಸಿಕ್ ಸೆಂಟ್ರಲ್ ಜೈಲಿಗೆ ವರ್ಗಾಯಿಸಲಾಯ್ತು.

ಆ ದಸ್ತಗಿರಿಯೂ ಒಂದು ವರವಾಗಿ ಪರಿಣಮಿಸಿತು. ಅದನ್ನು ಜಯಪ್ರಕಾಶರು

ವರವಾಗಿ ಪರಿಣಮಿಸಿಕೊಂಡರು ಎನ್ನುವುದು ಹೆಚ್ಚು ಅರ್ಥಪೂರ್ಣ. ಕಾರಾಗೃಹದಲ್ಲಿ ಅಚ್ಯುತ ಪಟವರ್ಧನ, ಯೂಸೂಫ್ ಮೆಹರಾಲಿ, ಎನ್. ಜಿ. ಗೋರೆ, ಎಸ್. ಎಂ. ಜೋಷಿ, ಅಶೋಕಮೆಹ್ತಾ, ಮಿನೂಮಸಾನಿ ಮುಂತಾದ ರಾಷ್ಟ್ರೀಯ ನಾಯಕರ ಪರಿಚಯವಾಗಿ ಅವರನ್ನು ಕೂಡಿಕೊಂಡರು. ಇವರೆಲ್ಲರ ಸಮಾಲೋಚನೆಯ ಫಲವಾಗಿ ಭಾರತದಲ್ಲಿ ಸಮಾಜವಾದಿ ಚಳವಳಿಯ ಪ್ರಥಮ ಸಂಘಟನೆ ಉದಯವಾಯ್ತು. ಅದರ ನೇತೃತ್ವ ವಹಿಸಿದವರು ಆಚಾರ್ಯ ನರೇಂದ್ರದೇವ. ಸ್ವಾತಂತ್ರ್ಯ ಹೋರಾಟದಲ್ಲಿ ಭಾರತದ ಕಮ್ಯೂನಿಸ್ಟರ ಪಾತ್ರ ಅಸಮರ್ಪಕವಾಗಿದ್ದು ಅದು ಆತ್ಮಾಭಿಮಾನವನ್ನು ಮೂಡಿಸದಿದ್ದರೂ ಜಯಪ್ರಕಾಶ್‌ರಂತೂ ಮಾರ್ಕ್ಸ್‌ವಾದದ ನಿಷ್ಠೆಯಿಂದ ದೂರ ಸರಿಯಲಿಲ್ಲ. ಅವರ ನಿಷ್ಠೆ ಅಷ್ಟು ಅಚಲವಾಗಿತ್ತು.

೧೯೩೪ ರಲ್ಲಿ ಬಿಹಾರ ಭೂಕಂಪದಿಂದ ತತ್ತರಿಸಿತು. ಅಸಂಖ್ಯಾತ ಸಾವು ನೋವುಗಳಾಯ್ತು. ಹಳ್ಳಿಗಳು ನಿರ್ನಾಮವಾದವು. ಆಹಾರ, ವಸತಿ, ಶುಶ್ರೂಷೆಯ ಸೌಕರ್ಯವಿಲ್ಲದೆ ಜನ ಸಂಕಷ್ಟಕ್ಕೆ ಸಿಲುಕಿದರು. ರಾಷ್ಟ್ರನಾಯಕರು ನೆರವಿಗೆ ಧಾವಿಸಿದರು. ಡಾ|| ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಪರಿಹಾರ ಕಾರ್ಯ ನಡೆಯಿತು. ಜಯಪ್ರಕಾಶ್ ಕೇಂದ್ರ ಪರಿಹಾರ ಕಾರ್ಯಾಲಯದ ಜವಾಬ್ದಾರಿ ಹೊತ್ತರು. ಹಣಕಾಸು ಪೋಲಾಗದಂತೆ ಲೆಕ್ಕಪತ್ರಗಳನ್ನಿಡಲು ಗಾಂಧೀಜಿ ಡಾ|| ಜೆ.ಸಿ. ಕುಮಾರಪ್ಪ ಅವರನ್ನು ನೇಮಿಸಿದರು. ಇವರೆಲ್ಲರ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆಯ ಪರಿಣಾಮ ಅನೇಕ ಕಡೆಗಳಿಂದ ಬಂದ ಸಹಾಯಧನ ಯಾವ ಲೋಪವೂ ಆಗದೆ ಸದ್ವಿನಿಯೋಗವಾಯ್ತು. ಅಷ್ಟು ಸಮರ್ಥವಾಗಿ ಅದನ್ನು ನಿರ್ವಹಿಸಿದರು. ಅಧಿಕಾರಿಗಳೂ ಸೇರಿದಂತೆ ಸಂಕಟ ಸಮಯದಲ್ಲಿ ಇರಿದು ತಿನ್ನುವ ರಾಕ್ಷಸೀ ಪ್ರವೃತ್ತಿಯ ಸ್ವಾರ್ಥ ಮನಸ್ಸಿನ ಸಮಯ ಸಾಧಕರಿಗೆ ನಿರಾಶೆಯಾಯ್ತು. ಧನ ಪಿಶಾಚಿ ಹಿಡಿದ ಈ ರಾಕ್ಷಸರನ್ನು ಕಂಡು ಜಯಪ್ರಕಾಶರು ಇವರ ನಿರ್ಮೂಲನವಾದಲ್ಲದೆ ಸಮಾಜಕ್ಕೆ ನೆಮ್ಮದಿ ಇಲ್ಲ ಎಂದು ನಿಟ್ಟುಸಿರಿಟ್ಟರು.

ಮಾನ್ಯ ಓದುಗರು ನವಂಬರ್ ೧೯೯೯ ರಲ್ಲಿ ಒರಿಸ್ಸಾಗೆ ಅಪ್ಪಳಿಸಿದ ಚಂಡ ಮಾರುತದಿಂದ ಲಕ್ಷಾಂತರ ಜನರ ಸಾವುನೋವುಗಳ ಜೊತೆಗೆ ಕೋಟ್ಯಂತರ ಆಸ್ತಿಪಾಸ್ತಿಗಳ, ಆಹಾರ ಧಾನ್ಯಗಳ ನಷ್ಟವಾದುದನ್ನು ಸ್ಮರಿಸಿಕೊಳ್ಳಬಹುದು. ಆಹಾರ ಎಷ್ಟು ನಷ್ಟವಾಯ್ತೆಂದರೆ ಆಹಾರದ ಕೊರತೆಯನ್ನು ತುಂಬಿಕೊಳ್ಳಲು ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉಂಟಾಯ್ತು. ಇಂಥ ಸಂಕಟ ಸಮಯದಲ್ಲಿ ರಾಷ್ಟ್ರಾದ್ಯಂತ ಹಾಗೂ ಅನ್ಯ ರಾಷ್ಟ್ರಗಳಿಂದ ಸಹಾಯದ ಮಹಾಪೂರವೇ ಹರಿದು ಬಂತು. ಅದನ್ನು ಸರಿಯಾಗಿ ನಿರ್ವಹಿಸದೆ ಅಧಿಕಾರಿಗಳು, ಸಮಯಸಾಧಕ ಸ್ವಾರ್ಥಿಗಳು ದುರುಪಯೋಗ ಪಡಿಸಿಕೊಂಡ ವರದಿಗಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾದುವು. ಧನಪಿಶಾಚಿಗಳನ್ನು ಕಂಡು ಜಯಪ್ರಕಾಶರು ೧೯೩೪ ರಲ್ಲೆ ಇಟ್ಟ ನಿಟ್ಟುಸಿರು ಇಂದಿಗೂ ಜೀವಂತವಾಗಿ ಉಲ್ಬಣಗೊಳ್ಳುತ್ತಿರುವುದನ್ನು ಕಂಡರೆ ರಾಷ್ಟ್ರ ಕ್ರಮಿಸುತ್ತಿರುವ ದಿಕ್ಕನ್ನು ಕಂಡು ದಿಗ್ಭ್ರಮೆಯಾಗುತ್ತದೆ.

೧೯೩೮ರಲ್ಲಿ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಅಧಿವೇಶನ ಲಾಹೋರಿನಲ್ಲಿ

ನಡೆಯಿತು. ಕಾಂಗ್ರೆಸ್ ಸೋಷಲಿಸ್ಟ್ ಪಕ್ಷವನ್ನು ವಶಪಡಿಸಿಕೊಳ್ಳಲು ಹವಣಿಸಿದ ಕಮ್ಯುನಿಸ್ಟ್ ಪಕ್ಷದ ಸಂಚು ಪಟವರ್ಧನ್, ಮಿನೂಮಸಾನಿ ಅವರ ಪ್ರಯತ್ನದಿಂದ ಫಲಿಸಲಿಲ್ಲ. ಕಮ್ಯುನಿಸ್ಟರು ಜಯಪ್ರಕಾಶರಿಂದ ದೂರ ಸರಿದರು. ಜಯಪ್ರಕಾಶರು ಕಮ್ಯುನಿಸ್ಟರೊಂದಿಗೆ ಕೈಗೂಡಿಸದಿದ್ದುದೇ ಇಂದಿಗೂ ಕಮ್ಯೂನಿಸ್ಟರು ಅವರನ್ನು ದ್ವೇಷಿಸಲು ಕಾರಣವಾಗಿದೆ.

ಮತ್ತೊಂದು ಪ್ರಮುಖ ಘಟನೆ ಜರುಗಿದ್ದು ೧೯೩೯ರ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ. ಸ್ಪರ್ಧೆ ಇದ್ದುದು ಪಟ್ಟಾಭಿಸೀತಾರಾಮಯ್ಯ ಹಾಗೂ ಸುಭಾಷ್‌ಚಂದ್ರ ಬೋಸರ ನಡುವೆ. ಗಾಂಧಿ ಪಟ್ಟಾಭಿಯವರನ್ನು ಬೆಂಬಲಿಸಿದರು. ಸಹಜವಾಗಿ ರಾಷ್ಟ್ರೀಯ ನಾಯಕರೆಲ್ಲಾ ಅವರ ಬೆಂಬಲಕ್ಕೆ ನಿಂತರು. ಸುಭಾಷ್ ಏಕಾಂಗಿಯಾಗಿ ನಿಂತರು. ಕ್ರಾಂತಿಕಾರಿ ಮನೋಭಾವದ ಜಯಪ್ರಕಾಶರು ಸುಭಾಷ್ ಅವರನ್ನು ಒಪ್ಪಿಕೊಂಡಿದ್ದರೂ ಕಾಂಗ್ರೆಸ್ ಇಬ್ಭಾಗವಾಗಿ ರಾಷ್ಟ್ರಶಕ್ತಿ ಕುಂದಿ ಬ್ರಿಟಿಷರಿಗೆ ಅನುಕೂಲವಾಗುತ್ತದೆಂಬ ಆತಂಕದಿಂದ ಇಬ್ಬರ ನಡುವೆ ಸಂಧಾನಕ್ಕಾಗಿ ಯತ್ನಿಸಿದರು. ಚುನಾವಣೆಯಲ್ಲಿ ಸುಭಾಷ್ ಗೆದ್ದರು. ಆಗ ಗಾಂಧೀಜಿ ತಳೆದ ನಿಲುವು ಅವರ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಕಳಂಕ ಪ್ರಾಯವಾಗಿದೆ. ಪಟ್ಟಾಭಿಯವರ ಸೋಲು ನನ್ನ ಸೋಲು ಎಂದು ಸಹಕಾರವನ್ನು ನೀಡಲಿಲ್ಲ. ಅಲ್ಲದೆ ಸಮಿತಿಯ ಸದಸ್ಯರಿಗೆ ರಾಜೀನಾಮೆ ನೀಡಲು ಪ್ರೇರೇಪಿಸಿದರು. ಇದರಿಂದ ರೋಸಿಹೋದ ಸುಭಾಷ್ ಚಂದ್ರ ಬೋಸ್ ಕಾಂಗ್ರೆಸ್‌ನ ಮಾರ್ಗ ಕಾಂಗ್ರೆಸ್‌ಗೆ ಇರಲಿ ಎಂದು ಸ್ವಇಚ್ಛೆಯಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಭಾರತ ರಾಷ್ಟ್ರೀಯ ಸೇನೆ (INA) ಕಟ್ಟಿ ತಮ್ಮದೇ ಆದ ಮಾರ್ಗದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಗಾಂಧಿಯ ನಿಲುವು ಜಯ ಪ್ರಕಾಶರಿಗೆ ಸಮಾಧಾನ ತರಲಿಲ್ಲ.

೧೯೪೦ ರಲ್ಲಿ ಬ್ರಿಟಿಷರ ವಿರುದ್ಧ ಯುವಕರ ತಂಡವನ್ನು ಪ್ರಚೋದಿಸಿದ ಆಪಾದನೆಯ ಮೇಲೆ ಜಯಪ್ರಕಾಶರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯ್ತು. ೧೯೪೧ರಲ್ಲಿ ಭೂಗತನಾಯಕನೆಂದು ಹೆಸರಿಸಿ ದೇವಲಾಲಿ ಸೆರೆಮನೆಯಲ್ಲಿ ಇರಿಸಲಾಯ್ತು. ಅಲ್ಲಿ ಸುಭಾಷ್‌ಚಂದ್ರ ಬೋಸರು ಆರಂಭಿಸಿದ್ದ ಫಾರ್ವರ್ಡ್ ಬ್ಲಾಕಿನ ಸತ್ಯಾಗ್ರಹಿಗಳೂ ಇದ್ದರು. ಸಮಾಜವಾದ ಕುರಿತ ಜಿಜ್ಞಾಸೆಯಿಂದಾಗಿ ಸ್ಪಷ್ಟ ಕಲ್ಪನೆ ಮೂಡಲು ಕಾರಣವಾಯ್ತು. ಜಯಪ್ರಕಾಶರು ಆಡಳಿತದ ವಿರುದ್ಧ ಜೈಲಿನಲ್ಲೆ ಉಪವಾಸ ಕೈಗೊಂಡರು. ಗಾಂಧಿ ಮಧ್ಯೆ ಪ್ರವೇಶಿಸಿ ಮೂವತ್ತಮೂರು ದಿನಗಳ ಉಪವಾಸವನ್ನು ಮುಕ್ತಾಯಗೊಳಿಸಿದರು. ಹಜಾರಿಬಾಗ್ ಸೆರೆಮನೆಗೆ ಜಯಪ್ರಕಾಶರನ್ನು ಸ್ಥಳಾಂತರಿಸಲಾಯ್ತು.

ಆಗಸ್ಟ್ ೮, ೧೯೪೨ ರಲ್ಲಿ ರಾಷ್ಟ್ರಕ್ಕೆ ಗಾಂಧೀಜಿ 'ಮಾಡು ಇಲ್ಲವೆ ಮಡಿ' ಎಂಬ ಕರೆಕೊಟ್ಟರು. 'ಭಾರತ ಬಿಟ್ಟು ತೊಲಗಿ' ಚಳವಳಿ ಉಗ್ರವಾಯ್ತು. ಇದನ್ನು ಆಗಸ್ಟ್ ಕ್ರಾಂತಿ ಎಂದು ಕರೆಯಲಾಯ್ತು. ಜೈಲುಗಳು ತುಂಬಿದುವು. ಸರ್ಕಾರ ಸನ್ನದ್ಧವಾಯ್ತು. ಜಯಪ್ರಕಾಶರು ಐದು ಜನರೊಂದಿಗೆ ಜೈಲಿನ ಗೋಡೆ ಹಾರಿ ತಪ್ಪಿಸಿಕೊಂಡರು. ಜಯಪ್ರಕಾಶರ ಸುಳಿವು ನೀಡಿದವರಿಗೆ ಹಣಕೊಡುವುದಾಗಿ ಸರ್ಕಾರ ಘೋಷಿಸಿತು. ಜಯಪ್ರಕಾಶ್ ವೇಷ ಮರೆಸಿಕೊಂಡು ಆಂದೋಲನ ಉಗ್ರವಾಗುವಂತೆ ಮಾಡಿದರು.

ಸಿಂಗಪುರದಿಂದ ಸುಭಾಷ್ ಚಂದ್ರಬೋಸರ ಸ್ವಾತಂತ್ರ್ಯ ಹೋರಾಟದ ಸಂದೇಶಗಳು ಪ್ರಚೋದನೆ ನೀಡುತ್ತಿದ್ದುವು. ಈ ಎಲ್ಲ ಕಾರಣಗಳಿಂದ ಸರ್ಕಾರ ಸಹನೆಗೆಟ್ಟು ದಾರಿಗಾಣದಾಯ್ತು. ಜಯಪ್ರಕಾಶರು ಭಾರತಬಿಟ್ಟು ತೊಲಗಿ ಚಳವಳಿಯನ್ನು ಮುಂದುವರೆಸುತ್ತಿದ್ದ ಅಚ್ಯುತ ಪಟವರ್ಧನ್, ಡಾ॥ ರಾಮಮನೋಹರ ಲೋಹಿಯಾ, ಪುರುಷೋತ್ತಮ್‌ದಾಸ್, ತ್ರಿಕುಂದಾಸ್, ಅರುಣ್ ಅಸಫ್‌ಅಲಿ, ಪೂರ್ಣಿಮಾ ಬ್ಯಾನರ್ಜಿ, ಕಮಲಾದೇವಿ ಚಟ್ಟೋಪಾಧ್ಯಾಯ, ಮಿನೂಮಸಾನಿ, ಮೃದುಲಾ ಸಾರಾಬಾಯ್ ಮುಂತಾದವರನ್ನು ಸೇರಿಕೊಂಡರು. ಈ ಎಲ್ಲರ ಒಟ್ಟುಗೂಡಿದ ಪ್ರಯತ್ನದಿಂದಾಗಿ ದೇಶದ ಯುವಶಕ್ತಿ ಸ್ವಾತಂತ್ರ್ಯ ಆಂದೋಲನದಲ್ಲಿ ಧುಮುಕಿತು. ದೇಶಾದ್ಯಂತ ಒಂದು ಹೊಸ ಚೇತನದ ಅಲೆ ಹಬ್ಬಿತು. ಜಯಪ್ರಕಾಶರನ್ನು ಕಂಡಲ್ಲಿ ಗುಂಡಿಕ್ಕುವ ಆಜ್ಞೆ ಹೊರಡಿಸಲಾಯ್ತು.

ಜಯಪ್ರಕಾಶ್ ಕಾಶ್ಮೀರದಲ್ಲಿ ಹಲವು ವಾರಗಳಿದ್ದು ಚಳವಳಿಯನ್ನು ಉಗ್ರಗೊಳಿಸಿದರು. ದೆಹಲಿಗೆ ಬಂದು ಅಲ್ಲಿಂದ ಅಮೃತಸರಕ್ಕೆ ಪಯಣಿಸುತ್ತಿದ್ದಾಗ ೧೯೪೩, ಸೆಪ್ಟಂಬರ್ ೧೮ರಂದು ಅವರನ್ನು ದಸ್ತಗಿರಿಮಾಡಿ ಲಾಹೋರ್ ಕಾರಾಗೃಹದಲ್ಲಿ ಇಡಲಾಯ್ತು. ರಾಜ ಕೈದಿ ಎಂದು ಘೋಷಿಸಿದರು. ಜೈಲಿನಲ್ಲಿ ಕಿರುಕುಳದ ಮೇಲೆ ಕಿರುಕುಳ ಕೊಡಲಾಯ್ತು. ದಿನವೆಲ್ಲಾ ಮಂಜುಗಡ್ಡೆಯ ಮೇಲೆ ಬರಿಮೈಲಿ ಮಲಗಿಸಲಾಯ್ತು. ಅವರ ಮೇಲೆ ಕೊಲೆಯ ರಾಜದ್ರೋಹದ ಆರೋಪ ಹೊರಿಸಲಾಯ್ತು. ಅವರ ಮೇಲೆ ಮೊಕದ್ದಮೆ ಹೂಡಿದರು. ಜಯಪ್ರಕಾಶರ ಪರ ನಿಂತ ಜನಸ್ತೋಮದ ಜನಪ್ರಿಯತೆಯನ್ನು ಕಂಡ ಸರ್ಕಾರ ಕಂಗಾಲಾಗಿ ಪ್ರತಿಭಟನೆ ಬಲಗೊಳ್ಳುವುದೆಂಬ ಅಳುಕಿನಿಂದ ಮೊಕದ್ದಮೆಯನ್ನೇ ಕೈಬಿಟ್ಟಿತು.

೧೯೪೪ ರ ಫೆಬ್ರವರಿಯಲ್ಲಿ ಬರೆದಿರುವ ದಿನಚರಿಯಲ್ಲಿ ಜಯಪ್ರಕಾಶರು ಎರಡು ಪ್ರಮುಖ ವಿಷಯಗಳನ್ನು ನಮೂದಿಸಿದ್ದಾರೆ. ಒಂದು ಜೈಲಿನಲ್ಲಿ ಅವರು ಅನುಭವಿಸಿದ ಯಮಯಾತನೆಗೆ ಸಂಬಂಧಪಟ್ಟಿದ್ದರೆ ಮತ್ತೊಂದು 'ಆಗಸ್ಟ್ ಕ್ರಾಂತಿ'ಯ ಬಗ್ಗೆ ಗಾಂಧೀಜಿಯವರು ನಡೆದುಕೊಂಡ ಬಗೆಗಿನ ಅವರ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. 'ಆಗಸ್ಟ್ ಕ್ರಾಂತಿಯ'ನ್ನು ಹಿಂತೆಗೆದುಕೊಂಡ ಹೊಣೆಯನ್ನು ಗಾಂಧೀಜಿಯವರಾಗಲಿ, ಕಾಂಗ್ರೆಸ್ ಪಕ್ಷವಾಗಲಿ ಹೊರಲು ಸಿದ್ಧವಿರಲಿಲ್ಲ.

೧. ''ನನ್ನನ್ನು ಕಳೆದ ಸೆಪ್ಟಂಬರ್ ಹದಿನೆಂಟರಂದು ಅಮೃತ್‌ಸರದ ಬಳಿ ದಸ್ತಗಿರಿ ಮಾಡಲಾಯಿತು. ಅಜ್ಞಾತವಾಸದ ಅವಧಿಯ ಒಂದು ತಿಂಗಳ ತರುವಾಯ ಇಲ್ಲಿಯ ಕಛೇರಿಯಲ್ಲಿ ಹಾಜರುಪಡಿಸಲಾಯಿತು.... ಅನಂತರ ನನ್ನ 'ಇಂಟರಾಗೇಶನ್' (ಪ್ರಶ್ನಿಸಿ ಪರೀಕ್ಷಿಸುವುದು) ಪ್ರಾರಂಭವಾಯಿತು. ಪ್ರತಿದಿನ ನನ್ನನ್ನು ಅವರ ಮುಂದೆ ಹಾಜರು ಪಡಿಸಲಾಗುತ್ತಿತ್ತು.... ಬೆಳಿಗ್ಗೆ ಎಂಟು ಘಂಟೆಯಿಂದ ನಡು ರಾತ್ರಿಯವರೆಗೆ ನನ್ನನ್ನು ಪ್ರಶ್ನಿಸಲಾಗುತ್ತಿತ್ತು. ಅನೇಕ ರೀತಿಯಲ್ಲಿ ಹೆದರಿಸಿ ಬೆದರಿಸಿ ನೋಡಿದರು. ಯಾವುದೇ ಬಗೆಯ ಮನವಿಯನ್ನು ಸಲ್ಲಿಸುವುದಾಗಲೀ, ವಿರೋಧವನ್ನು ವ್ಯಕ್ತಪಡಿಸಲಾಗಲೀ ಅವಕಾಶ ಕೊಡಲಿಲ್ಲ. ಮುಂದೆ ನನಗೆ ಯಾತನೆಗಳನ್ನು ಕೊಡಲಾಯಿತು. ಆ ಯಾತನೆಗಳು ನನ್ನನ್ನು

ಎಷ್ಟರಮಟ್ಟಿಗೆ ಜರ್ಜರೀಕೃತನನ್ನಾಗಿ ಮಾಡುತ್ತಿದ್ದುವೆಂದರೆ ಅವುಗಳ ಬಗ್ಗೆ ಬರೆಯುವುದು ಕೂಡ ಕಷ್ಟ.''

೨. ''ಆಗಸ್ಟ್ ಕ್ರಾಂತಿಯ ಬಗ್ಗೆ ಗಾಂಧೀಜಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ ನಂತರದ ಕೆಲವು ವಾರಗಳಿಂದ ನನ್ನ ಮನಸ್ಸಿನಲ್ಲಿ ತೀವ್ರವಾದ ಕಹಿ ಭಾವನೆ ಮೂಡಿದೆ. ಕಹಿ ಭಾವನೆಯನ್ನು ಮೂಢಿಸಿಕೊಳ್ಳುವುದು ನಿರರ್ಥಕವೆಂದು ನನಗೆ ಗೊತ್ತಿದೆ. ಆದರೆ, ಬಹುಶಃ ನಾನು ಇಂಥ ವಿಚಾರಗಳನ್ನು ತುಂಬ ಗಂಭೀರವಾಗಿ ಪರಿಗಣಿಸುತ್ತೇನೆ.... ಇಂದಿಗೂ ನಾನು ಆ ಕಹಿ ಭಾವನೆಯಿಂದ ಮುಕ್ತನಾಗಿಲ್ಲ. ಅಂದಿನಿಂದಲೂ ಅದು ಹಗಲೂ-ರಾತ್ರಿ ನನ್ನನ್ನು ಕೊರೆದು ತಿನ್ನುತ್ತಿದೆ. ನಮ್ಮನ್ನು ಮೋಸಗೊಳಿಸಲಾಗಿದೆಯಾದ್ದರಿಂದ ನನಗೆ ಕಹಿಯ ಅನುಭವವಾಗುತ್ತಿದೆ. ವ್ಯಕ್ತಿಗತ ರೂಪದಿಂದ ಅಲ್ಲ ; ಏಕೆಂದರೆ ಹಿಂಸೆಯನ್ನು ಆಶ್ರಯಿಸಬೇಕೆಂದು ನಾನು ಬಹಿರಂಗವಾಗಿಯೇ ಕರೆಕೊಟ್ಟಿದ್ದೆ ಹಾಗೂ ಈ ಕಾರಣಕ್ಕಾಗಿ ಇದರ ಯಾವುದೇ ಅಸಫಲತೆಯ ಬಗೆಗಿನ ಹೊಣೆಗಾರಿಕೆಯನ್ನು ಹೊರಲು ನಾನು ಸಿದ್ಧನಾಗಿದ್ದೇನೆ. ಆದರೆ ನನಗೆ ಕಹಿ ಅನುಭವ ಉಂಟಾಗುತ್ತಿರುವುದಕ್ಕೆ ಕಾರಣವೇನೆಂದರೆ ಸಾವಿರಾರು ಮಂದಿ, ಲಕ್ಷಾಂತರ ಮಂದಿ ದೇಶಭಕ್ತರನ್ನು ಮೋಸಗೊಳಿಸಲಾಗಿದೆ.'' ಗಾಂಧೀಜಿಯವರ ಅನಿರೀಕ್ಷಿತ ನಿಲುವುಗಳಿಂದಾಗಿ ಸುಭಾಷ್‌ಚಂದ್ರಬೋಸ್, ಭಗತ್‌ಸಿಂಗ್ ಮುಂತಾದ ಅನೇಕ ರಾಷ್ಟ್ರವೀರರು ಇಂಥ ನೋವನ್ನು ಅನುಭವಿಸಿರುವುದು ಈಗ ಇತಿಹಾಸ.

೧೯೪೫ರಲ್ಲಿ ಜಯಪ್ರಕಾಶರನ್ನು ಆಗ್ರಾದ ಜೈಲಿಗೆ ಸಾಗಿಸಲಾಯ್ತು. ಸರ್ಕಾರದ ಹೋಂ ಮೆಂಬರ್ ಹಿಂಸೆ-ಅಹಿಂಸೆಗಳನ್ನು ಎತ್ತಿದಾಗ ಜಯಪ್ರಕಾಶರು ನಮ್ಮ ಗುರಿ ಸ್ವಾತಂತ್ರ್ಯ. ಅದು ಅಹಿಂಸೆಯಿಂದ ಬಂದರೆ ಒಳಿತೆ. ಹಿಂಸೆ ಅನಿವಾರ್ಯವಾದರೆ ಅದಕ್ಕೂ ಹಿಂದೆಗೆಯುವುದಿಲ್ಲ.'' ಎಂದು ಖಚಿತ ನಿಲುವನ್ನು ತಿಳಿಸಿದ್ದರು. ಅವರ ಸ್ವಾತಂತ್ರ್ಯದ ನಿಲುವು ನಿಚ್ಚಳವಾಗಿತ್ತು. ಏಪ್ರಿಲ್ ೧೧, ೧೯೪೬ ರಂದು ಜಯಪ್ರಕಾಶರ ಬಿಡುಗಡೆಯಾಯ್ತು. 'ಆಗಸ್ಟ್ ಕ್ರಾಂತಿಯ ವೀರ' 'ಅಗ್ರದೂತ'ನೆಂದು ಕರೆದು ನಾಡಿಗೆ ನಾಡೇ ಅಂದು ಕೊಂಡಾಡಿತು. ದಿಟ್ಟ ಹೋರಾಟದ ಫಲವಾಗಿ ಸ್ವಾತಂತ್ರ್ಯ ಪ್ರಾಪ್ತಿಯಾಗುವ ಹೊತ್ತಿಗೆ ಜಯಪ್ರಕಾಶರ ಹೆಸರು ದೇಶಭಕ್ತರ ಅಗ್ರಪಂಕ್ತಿಯಲ್ಲಿ ಸೇರಿತು.

''ಜನತೆಯ ಆಸೆ ಆಕಾಂಕ್ಷೆಗಳೇ ಮೈವೆತ್ತ ಮೂರ್ತಿ ಜಯಪ್ರಕಾಶ್. ಅವರ ಪ್ರತಿಯೊಂದು ಕ್ರಿಯೆ ಹಸಿದವರಿಗೆ ಅನ್ನವನ್ನು, ಬೆತ್ತಲಾದವರಿಗೆ ಬಟ್ಟೆಯನ್ನು ಕರುಣಿಸುತ್ತದೆ. ಪ್ರತಿಯೊಬ್ಬನೂ ಸ್ವತಂತ್ರವಾಗಿ ತಲೆ ಎತ್ತಿ ನಿಲ್ಲುವ ಸಮಾಜ ಕಾಣಬೇಕೆಂಬುದು ಅವರ ಹಂಬಲವಾಗಿತ್ತು.'' ಎನ್ನುವ ಶ್ರೀಕೃಷ್ಣಸಿನ್ಹರ ನುಡಿ ಜೆ.ಪಿ.ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ.

ಸ್ವಾತಂತ್ರ್ಯಾನಂತರ ಜಯಪ್ರಕಾಶರು ಅಧಿಕಾರಕ್ಕೆ ಆಸೆಪಡದೆ ಸರ್ವವನ್ನೂ ತ್ಯಾಗಮಾಡಿ ಸರ್ವೋದಯಕ್ಕಾಗಿ ತುಡಿದು ದುಡಿದು, ಹಿಡಿದ ಪಥ ಬಿಡದೆ ಸರ್ವೋದಯದ ಕಡೆಗೇ ನಡೆದು, ವಿನೋಬಾಜಿಯವರ ಭೂದಾನದ ಬೆಳಕಿನಲ್ಲಿ ಅಡಿ ಇಟ್ಟು, ಚಂಬಲ್ ಕಣಿವೆಯ ಢಕಾಯಿತರ ಕಲ್ಲು ಹೃದಯದಲ್ಲೂ ಕರುಣೆಯ ಚಿಲುಮೆಯನ್ನು ಚಿಮ್ಮಿಸಿ, ಸಮಗ್ರಕ್ರಾಂತಿಯ ಕನಸೊತ್ತು ಮುನ್ನಡೆದು, ಇಂದಿರಾಗಾಂಧಿಯ ತುರ್ತುಪರಿಸ್ಥಿತಿಯ

ಬೆಂಕಿಯಲ್ಲಿ ಬೆಂದು, ಸಂಪೂರ್ಣ ಕ್ರಾಂತಿಯ ಕಡಲಲ್ಲಿ ಈಜಿ 'ಜನತಾ ಸರ್ಕಾರ' ಅಧಿಕಾರಕ್ಕೆ ಬರುವಲ್ಲಿ ತಮ್ಮ ತನುಮನಗಳನ್ನು ತೇಯ್ದು ಕಡೆಗೂ ನಿರಾಸೆಯ ನಿಟ್ಟುಸಿರಿನೊಂದಿಗೆ ೧೯೭೯ರ ಅಕ್ಟೋಬರ್ ಏಳರಂದು ರಾತ್ರಿ ಮಲಗಿ ಎಂಟರ ಬೆಳಿಗ್ಗೆ ಇಲ್ಲವಾದ ಜಯಪ್ರಕಾಶ್ ನಾರಾಯಣರ ಬದುಕು ಹೋರಾಟ ಒಂದು ದುರಂತ ಗಾಥೆಯೇ ಸರಿ. ಆ ಅಪೂರ್ವ ವ್ಯಕ್ತಿಯನ್ನು ದಾದಾ ಧರ್ಮಾಧಿಕಾರಿಯವರ ಕಣ್ಣುಗಳ ಮೂಲಕ ನೋಡಿದರೆ ಅಲ್ಲಿ ಕಾಣುವುದು.

''ಜಯಪ್ರಕಾಶರು ಸ್ಫುರದ್ರೂಪಿಯೇನೂ ಅಲ್ಲ. ಆದರೆ ಅವರ ಮುಖ ಮುದ್ರೆಯಲ್ಲಿ ವಿಶಿಷ್ಟ ರೀತಿಯ ಮಧುರತೆ ಹಾಗೂ ಸುಭಗತೆಯ ಕಾಂತಿ ನೆಲೆ ನಿಂತಿದೆ. ನೀಲಕಮಲದಂತಹ ಶ್ಯಾಮವರ್ಣ ಆ ಸುಭಗತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅವರ ಸ್ವರದಲ್ಲಿ ವಿಚಿತ್ರ ವೈಭವ ಹಾಗೂ ಮಾಧುರ್ಯ ತುಂಬಿದೆ. ಶೈಲಿಯಲ್ಲಿ ಸುಭಗತೆ ಹಾಗೂ ಶೋಭನೀಯತೆ ಇದೆ. ಅವರ ಜೀವನದಲ್ಲಿ ವಿಲಾಸಕ್ಕಾಗಲೀ ಪ್ರಸಾಧನಗಳಿಗಾಗಲೀ ಸ್ಥಾನವಿಲ್ಲ. ಆದರೆ ಸದಭಿರುಚಿ ಹಾಗೂ ರಸಿಕತೆ ಸಾಕಷ್ಟಿದೆ.

ಅವರ ನಡೆ ನುಡಿ ಹಾಗೂ, ಹಾವ ಭಾವದಲ್ಲಿ ರಸಿಕತೆ ಮತ್ತು ಸದಭಿರುಚಿಯನ್ನೂ ಕಾಣಬಹುದು. ಅದ್ಭುತ ರಮ್ಯತೆಯೊಂದಿಗೇ ಕಾಮನಬಿಲ್ಲಿನಂತೆ ಮನ ಮೋಹಕವಾದ ವಿವಿಧತೆಯೂ ಇದೆ.

ಅವರ ಹೃದಯ ಕರುಣಾಮೃತದಿಂದ ತುಂಬಿ ತುಳುಕುತ್ತದೆ. ಎಂತಲೇ ಅದು ಬೆಣ್ಣೆಯಂತೆ ಮೃದು. ಅವರಲ್ಲಿ ಸಂತರಲ್ಲಿರುವಂತಹ ಶುಚಿತ್ವವಿದೆ, ಜೊತೆಗೆ ಬಾಲಸುಲಭವಾದ ಋಜುತ್ವ ಹಾಗೂ ಸರಳತೆ ಮನೆಮಾಡಿದೆ.

ಮಂತ್ರಮುಗ್ಧಗೊಳಿಸುವ ಅವರ ವ್ಯಕ್ತಿತ್ವ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರುತ್ತದೆ.''

★

ಹೋರಾಟ ಮತ್ತು ಸಾಧನೆ

ಭಾರತಕ್ಕೆ ಸ್ವಾತಂತ್ರ್ಯವೇನೋ ಬಂತು. ಆದರೆ ಅದರ ಬೆನ್ನ ಹಿಂದೆ ಭಾರತವನ್ನು ಬಲಹೀನಗೊಳಿಸುವ ದೌರ್ಭಲ್ಯದ ಬೇರುಗಳೂ ಬಂದುವು. ಸುಭಾಷ್‌ಚಂದ್ರ ಬೋಸರು ಗಾಂಧೀಜಿಯವರಲ್ಲಿದ್ದ ಐದು ದೌರ್ಭಲ್ಯಗಳನ್ನು ಗುರುತಿಸಿದ್ದರು.

೧. ಶತ್ರುಗಳು ಯಾರು ಎಂದು ಗಾಂಧಿಗೆ ಗೊತ್ತಿರಲಿಲ್ಲ

೨. ಯೋಜನೆಗಳನ್ನು ರೂಪಿಸಿಕೊಳ್ಳದಿರುವುದು

೩. ಅಂತಾರಾಷ್ಟ್ರೀಯ ಸಹಕಾರ ಕೇಳದಿದ್ದುದು

೪. ಬ್ರಿಟಿಷರನ್ನು ನಂಬುವ ಪ್ರವೃತ್ತಿ

೫. ರಾಜಕೀಯ ವ್ಯಕ್ತಿಯಾಗಿದ್ದುಕೊಂಡು ಅದೇ ಸಮಯದಲ್ಲಿ ದಾರ್ಶನಿಕನಾಗಿ ನಿಂತದ್ದು.

ಇದರಲ್ಲಿ ಬಹುಮುಖ್ಯವಾದದ್ದು ಶತ್ರುಗಳು ಯಾರು ಎಂದು ಗಾಂಧಿ ಗುರುತಿಸಿಕೊಳ್ಳುವಲ್ಲಿ ವಿಫಲರಾದದ್ದು.

ನೆಹರೂ ಸೇರಿದಂತೆ ಗಾಂಧಿಯ ಹಿಂದೆ ಇದ್ದವರು ಗುಡಿ ಕೈಗಾರಿಕೆಗಳ ಮೂಲಕ ಗ್ರಾಮ ಸ್ವರಾಜ್ಯದ ಹಂಬಲ ಹೊತ್ತು ನಡೆದವರಲ್ಲ . ಅವರು ಗಾಂಧಿಯ ಚರಕವನ್ನು ಬೆಂಬಲಿಸುತ್ತಾ ತಮ್ಮ ಅಂತರಂಗದಲ್ಲಿ ಬೃಹತ್ ಗಿರಣಿಗಳನ್ನು, ಉದ್ದಿಮೆಗಳನ್ನು ಅವಿಚಿಟ್ಟುಕೊಂಡಿದ್ದವರು. 'ಚರಕ'ವನ್ನು ಬೆಂಬಲಿಸುತ್ತಿದ್ದುದು ಮೇಲ್ನೋಟಕ್ಕೆ ಮಾತ್ರ, ಗಾಂಧೀಜಿಯವರನ್ನು ಹಾಗೂ ಜನಸಾಮಾನ್ಯರನ್ನು ಮರುಳು ಮಾಡಲು. ಅವರು ಗ್ರಾಮಸ್ವರಾಜ್ಯದ ಸೋಗಿನ ಬಂಡವಾಳ ಶಾಹಿಗಳೇ ಹೊರತು ನಿಜವಾದ 'ಗ್ರಾಮಸ್ವರಾಜ್ಯ' ಪ್ರತಿಪಾದಕರಲ್ಲ. ಗಾಂಧಿಗೆ ಹೊರಗಿನ ಶತ್ರುಗಳಂತೆ ಈ ಆಂತರಿಕ ಶತ್ರುಗಳ ಅರಿವಿಲ್ಲದಿದ್ದುದು ಒಂದು ದುರಂತವೇ. ಅವರ ಸುತ್ತ ಮುತ್ತಿಕೊಂಡಿದ್ದ ಸ್ವಾರ್ಥಿಗಳ ಅರಿವು ಆಗುವ ಹೊತ್ತಿಗೆ ಕಾಲಮಿಂಚಿ ಹೋಗಿತ್ತು. ಸ್ವಾತಂತ್ರ್ಯ ಪ್ರಾಪ್ತವಾಗುವ ಒಂದು ವರ್ಷಕ್ಕೂ ಮೊದಲು ಅಂದರೆ ೧೯೪೬ರ ಜುಲೈನಲ್ಲಿ ತಮ್ಮ ಆತ್ಮಕಥೆಯ ಒಂದು ದುರಂತಕಾರಿ ವಿದ್ಯಮಾನ ಎಂಬ ಟಿಪ್ಪಣಿಯಲ್ಲಿ ಗಾಂಧೀಜಿ ಹೀಗೆ ಬರೆಯುತ್ತಾರೆ.

''ಸಂವಿಧಾನ ಸಭೆಯಲ್ಲಿ ಇರಬಯಸುವ ವ್ಯಕ್ತಿಗಳ ಎಷ್ಟೊಂದು ಪತ್ರಗಳು ನನ್ನ ಟಪಾಲಿನಲ್ಲಿರುತ್ತವೆಂದರೆ ನನಗೆ ಹೆದರಿಕೆಯಾಗುತ್ತದೆ. ಬುದ್ಧಿಜೀವಿ ವರ್ಗ ಭಾರತದ ಸ್ವಾತಂತ್ರ್ಯಕ್ಕಿಂತ ವೈಯಕ್ತಿಕ ಸುಖಲೋಲುಪತೆಯ ಬಗ್ಗೆ ಹೆಚ್ಚು ಆತುರದಲ್ಲಿದೆ ಎಂಬ ಸಾರ್ವತ್ರಿಕ ಭಾವನೆಯ ಸೂಚಕವೋ ಇದು ಎಂದು ಸಂಶಯ ಬರುತ್ತಿದೆ''.

ಗಾಂಧಿ ಈ ಎಲ್ಲ ದ್ವಂದ್ವಗಳ ನಡುವೆ ನಲುಗಿದರು. ಆದಕಾರಣವೆ ನೆಹರೂ ಸೇರಿದಂತೆ ಅಧಿಕಾರ ದಾಹಿಗಳ ಹಿಡಿತ ಮೇಲಾದುದನ್ನು ಕಂಡ ಗಾಂಧಿ ಬ್ರಿಟಿಷರಿಂದ ಭಾರತಕ್ಕೆ ಅಧಿಕಾರ ಹಸ್ತಾಂತರವಾಗುವ ವೇಳೆಯಲ್ಲಿ ಬಹುದೂರದ ಕಲ್ಕತ್ತದಲ್ಲಿ ಇದ್ದುದು.

ಸುಭಾಷರಂತೆ ಇದನ್ನು ಸಮರ್ಥವಾಗಿ ಮನಗಂಡಿದ್ದ ಮತ್ತೊಬ್ಬ ವ್ಯಕ್ತಿ ಎಂದರೆ ಇಂಗ್ಲೆಂಡ್‌ನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ ಅವರು. ಸ್ವತಂತ್ರ ಭಾರತದ ಚಿತ್ರಣವನ್ನು ಸ್ಪಷ್ಟವಾಗಿ ಮನಗಂಡಿದ್ದ ಅವರು ಹೀಗೆ ಹೇಳಿದ್ದರು.

''ಸ್ವತಂತ್ರ ಭಾರತದಲ್ಲಿ ಅಧಿಕಾರ ಎನ್ನುವುದು ದಗಾಕೋರರ.
ಠಕ್ಕರ ಹಾಗೂ ನಿರಂಕುಶ ದರೋಡೆಕೋರರ ಕೈಗೆ ಹೋಗುತ್ತದೆ.
ಗಾಳಿಯೊಂದನ್ನು ಬಿಟ್ಟರೆ ಒಂದು ತುಂಡು ಬ್ರೆಡ್ಡಾಗಲೀ, ಸೀಸೆ
ನೀರಾಗಲೀ ತೆರಿಗೆಯಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ...
...ಕೆಲವು ಕಾಲಾನಂತರ ಈ ಜಳ್ಳು ಜನರ ಗುರುತೂ
ಉಳಿಯುವುದಿಲ್ಲ. ಅವರು ತಮ್ಮ ತಮ್ಮೊಳಗೇ ಹೊಡೆದಾಡುತ್ತಾರೆ.
ಈ ಬಹಿರಂಗ ಕಾದಾಟದಿಂದಾಗಿ ಭವ್ಯ ಭಾರತ ಕಳೆದು ಹೋಗುತ್ತದೆ''

ಇಂತಹ ಮುಳ್ಳಿನ ಕಗ್ಗಾಡಿನ ನಡುವೆ ಸರ್ವೋದಯದ 'ಕುಸುಮಬಾಲೆ'ಯನ್ನು ಕೈ ಹಿಡಿದು ನಡೆಸುವ ಹೊಣೆ ಮೃದು ಹೃದಯದ ಜಯಪ್ರಕಾಶ್ ನಾರಾಯಣರ ಪಾಲಿನದಾಗಿತ್ತು.

೧೯೪೬ರಲ್ಲಿಯೇ ಗಾಂಧೀಜಿ ಮನಗಂಡಿದ್ದಂತೆ ಕಾಂಗ್ರೆಸ್ ಪಕ್ಷದಲ್ಲಿದ್ದವರ ಅಧಿಕಾರ ದಾಹ ಹೆಚ್ಚಿ ಮೇರೆಮೀರಿ ಹೋಗುವ ಸಂದರ್ಭವನ್ನು ಕಂಡು ''ಕಾಂಗ್ರೆಸ್ ತನ್ನ ತೇಜಸ್ವಿ ಹಾಗೂ ಕ್ರಾಂತಿಕಾರಿ ಸ್ವರೂಪವನ್ನು ತ್ಯಜಿಸುತ್ತಿದೆ'' ಎಂದು ಜಯಪ್ರಕಾಶರು ಎಚ್ಚರಿಸಿದರು. ಈ ಮಾತು ಕಾಂಗ್ರೆಸ್ಸಿಗರಿಗೆ ಅಪ್ರಿಯವಾದುದು ಎಂಬುದನ್ನು ತಿಳಿದೂ ಅದನ್ನು ಹೇಳಲು ಹಿಂದೆಗೆಯಲಿಲ್ಲ. ಈ ಹಿಂದೆ ಮುಸ್ಲಿಂಲೀಗ್ ಪಕ್ಷ ಹಾಗೂ ಅದರ ನಾಯಕ ಜಿನ್ನಾ ಅವರನ್ನು ಕುರಿತು ಸಹ 'ಸಾಮ್ರಾಜ್ಯವಾದಿಗಳ ದಳ್ಳಾಳಿಗಳು' ಎನ್ನುವ ಕಟು ಸತ್ಯವನ್ನು ಪ್ರಕಟಿಸಿದ್ದರು. ಸೇವೆಯೊಂದನ್ನೇ ಗುರಿಯಾಗಿಸಿಕೊಂಡಿದ್ದ ಜಯಪ್ರಕಾಶರಿಗೆ ಇಂಥ ನೇರನುಡಿಗಳಿಂದಾಗಿ ಕಾಂಗ್ರೆಸ್ ಪಕ್ಷದಿಂದ ಬೇರಾಗಿ ನಿಲ್ಲುವ ಸಂಭವ ಹೆಚ್ಚಾಗಿ ಕಾಣತೊಡಗಿದುವು. ಇದನ್ನು ಮನಗಂಡ ಗಾಂಧಿ

''ಜಯಪ್ರಕಾಶ್, ನೀನು 'ಆಗಸ್ಟ್ ಕ್ರಾಂತಿ'ಯ ವೀರಯೋಧ, ನಿನ್ನ ಶೌರ್ಯದ ಲಾಭ ಕಾಂಗ್ರೆಸ್ಸಿಗೆ ಒದಗಬೇಕೆಂಬುದು ನನ್ನ ಇಚ್ಛೆ.'' ಎಂದರು.

''ಬಾಪೂಜಿ, ತಮ್ಮ ಆಜ್ಞೆಯಂತೆ ನಾನು ನಡೆದುಕೊಳ್ಳುತ್ತೇನೆ. ತಾವು ನೆಹರೂ ಅವರೊಂದಿಗೆ ಚರ್ಚಿಸಿ'' ಎಂದು ವಿನಯವಾಗಿಯೆ ಹೇಳಿದರು. ಜೆ.ಪಿ.ಯವರಿಗೆ ನೆಹರೂ ಅಂತರಂಗದ ಹಾಗೂ ವಿದ್ಯಮಾನಗಳ ಅರಿವಿತ್ತು. ಮಾರನೆಯದಿನ ಈ ವಿಚಾರವನ್ನು ಗಾಂಧಿ ನೆಹರೂ ಮುಂದಿಟ್ಟಾಗ-

''ಜಯಪ್ರಕಾಶರಿಗಿಂತಲೂ ಹಿರಿಯರು ಇದ್ದಾರಲ್ಲ. ಆಚಾರ್ಯ ನರೇಂದ್ರದೇವ ಮುಂತಾದವರು'' ಎಂದಾಗ ಗಾಂಧಿ ಸುಮ್ಮನಾದರು.

ಇದಕ್ಕಾಗಲೀ, ರಾಷ್ಟ್ರೀಯ ಸರ್ಕಾರದ ಮೊದಲ ಸಂಪುಟದಲ್ಲಿ ತಮ್ಮ ಹೆಸರು ಕಾಣಿಸದೆ ಇದ್ದಾಗಲಾಗಲೀ ಜಯಪ್ರಕಾಶ್ ಅಸಮಾಧಾನಗೊಳ್ಳಲಿಲ್ಲ. ಆದರೆ ಅಂತಹ ಸಂದರ್ಭದಲ್ಲಿ ಸಂಪುಟ ಕುರಿತು ''ಈಗ ರಚಿಸಲಾಗಿರುವ ಸಂಪುಟ ಸ್ವಾತಂತ್ರ್ಯ ಯೋಧರ, ರಾಷ್ಟ್ರಾಭಿಮಾನಿಗಳ ಸಂಪುಟವಾಗುವುದಕ್ಕೆ ಬದಲು ವಿವಿಧ ಧರ್ಮ ಹಾಗೂ ಜಾತಿಯವರನ್ನು ತೃಪ್ತಿಗೊಳಿಸುವಂಥ ಹೊಂದಾಣಿಕೆಯ ಸಂಪುಟವಾಗಿರುವುದು ರಾಷ್ಟ್ರದ ಹಿತದೃಷ್ಟಿಯಿಂದ ಅಪಾಯಕರ'' ಎಂದು ಎಚ್ಚರಿಕೆಯ ಮಾತನ್ನು ಹೇಳಲು ಹಿಂದೆಗೆಯಲಿಲ್ಲ. ಅಂತರಂಗದಲ್ಲಿ ಸರ್ವಾಧಿಕಾರವನ್ನು ಹಾಗೂ ತನ್ನ ಅಧಿಕಾರ ಭದ್ರತೆಯನ್ನು ಗಟ್ಟಿಯಾಗಿರಿಸಿಕೊಂಡಿದ್ದ ನೆಹರೂ ಇಂತಹ ಯಾವ ಹಿತವಚನವನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ.

ಸರ್ವೋದಯ :

ಜನವರಿ ೨೬, ೧೯೫೦ ರಂದು ಭಾರತ 'ಜಾತ್ಯಾತೀತ ಸಮಾಜವಾದಿ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ'ವಾಗಿ (ರಿಪಬ್ಲಿಕ್) ಘೋಷಿಸಿಕೊಂಡ ದಿನದಂದು ರಾಷ್ಟ್ರಕವಿ ಕುವೆಂಪು ಅವರು 'ಶ್ರೀಸಾಮಾನ್ಯ'ರ ದೀಕ್ಷಾಗೀತೆ' ಕವನವನ್ನು ರಚಿಸಿದರು. ಆ ಕವನದ ಪ್ರಾಣರೂಪದ ಸಾಲುಗಳಿವು. 'ಗಣರಾಜ್ಯ' ಎಂದು ಘೋಷಿಸಿಕೊಂಡ ಭಾರತ ರಾಷ್ಟ್ರದ ಉಸಿರು ಇದಾಗಿದೆ.

'ಶ್ರೀಸಾಮಾನ್ಯ'ವೆ ಭಗವನ್ ಮಾನ್ಯಂ;
'ಶ್ರೀಸಾಮಾನ್ಯ'ನೆ ಭಗವದ್ ಧನ್ಯಂ;
ಸಾಮಾನ್ಯತೆ ಭಗವಂತನ ರೀತಿ ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ!

ಕೊನೆಗಂಡಿತೊ ಓರೋರ್ವರ ಗರ್ವದ ಕಾಲ,
ಇದು ಸರ್ವರ ಕಾಲ !
''ಸರ್ವೋದಯ!'' ''ಸರ್ವೋದಯ !''
ಸರ್ವೋದಯ ಯುಗ ಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ !

ಈ ಸರ್ವೋದಯದ ಕನಸು ಸ್ವತಂತ್ರ ಭಾರತದ ನನಸಾಗುವ ಬದಲು ಅದು ದಿಕ್ಕುತಪ್ಪಿ ಅಧಿಕಾರ ದಾಹಿಗಳ, ಬಂಡವಾಳಶಾಹಿಗಳ ಪರವಾಲುವ ಸೂಚನೆಗಳು ಸ್ಪಷ್ಟವಾಗಿ ಬೆಳಕಿಗೆ ಬರತೊಡಗಿದವು. ಸಮಾಜವಾದದ ಬಗೆಗೆ ನೆಹರೂ ಅವರಿಗೆ ಒಲವಿದೆ ಎಂಬುದು ತೋರಿಕೆಗೆ ಮಾತ್ರ ಕಾಣುತ್ತಿತ್ತು. ಆದರೆ ಅವರು ಬಲಪಂಥೀಯ ಪಕ್ಷದ ಸಮರ್ಥ ಪ್ರತಿಪಾದಕರಾಗಿದ್ದರು. ವೈಭೋಗದ ಕನಸು ಕಾಣಹತ್ತಿದರು. ಅವರು ವೈಭೋಗಕ್ಕೆ ಬಲಿಯಾದ ಕಾರಣ ಔದ್ಯಮೀಕರಣ ಒಂದೇ ರಾಷ್ಟ್ರದ ಸಮಸ್ಯೆಗೆ ಪರಿಹಾರ ಎನ್ನುವ ದೃಢ

ನಿರ್ಧಾರಕ್ಕೆ ಬಂದರು. ಹೀಗಾಗಿ ನೆಹರೂ ಗ್ರಾಮ ಪುನರುತ್ಥಾನ, ಗ್ರಾಮ ಸ್ವರಾಜ್ಯದ ದೃಷ್ಟಿಯಿಂದ ದೂರ ಉಳಿದರು. ಕಾಂಗ್ರೆಸ್‌ನ ಆಳ್ವಿಕೆಯಲ್ಲಿ ಸರಳತೆ ಸೊನ್ನೆಯಾಗಿ ಭೋಗ ತನ್ನೆಲ್ಲ ಭಯಂಕರ ಸ್ವರೂಪಗಳಿಂದ ಬಾಯ್ದೆರೆಯಿತು.

ಇದಕ್ಕೆ ವಿರುದ್ಧವಾಗಿ 'ಸರ್ವೋದಯ' ಮಾರ್ಗ ಹಿಡಿದಿದ್ದ, ಶ್ರೀಸಾಮಾನ್ಯನ ಉದ್ಧಾರವನ್ನೇ ಉಸಿರಾಗಿಸಿಕೊಂಡಿದ್ದ ಜಯಪ್ರಕಾಶ್ ನಾರಾಯಣ್, ಡಾ॥ ರಾಮ ಮನೋಹರ ಲೋಹಿಯಾ, ಆಚಾರ್ಯ ಕೃಪಲಾನಿ ಮುಂತಾದವರು ಪ್ರಜಾಸಮಾಜವಾದಿ ಪಕ್ಷವನ್ನು ಸಂಘಟಿಸಿದರು. ಆಗ ನೆಹರೂ ಜಯಪ್ರಕಾಶರಿಗೆ ಪತ್ರವೊಂದನ್ನು ಬರೆದು ಪ್ರಜಾಸಮಾಜವಾದಿ ಪಕ್ಷ ಕಾಂಗ್ರೆಸ್ ಸರ್ಕಾರದೊಡನೆ ಸಹಕರಿಸುವಂತೆಯೂ, ನೀವೂ, ಅಶೋಕ ಮೆಹ್ತಾ ಮುಂತಾದವರು ಸಂಪುಟ ಸೇರುವಂತೆ ಕೇಳಿಕೊಂಡರು. ಅಧಿಕಾರದ ಆಮಿಷ ಒಡ್ಡುವ ನೆಹರೂ ಅವರ ಕುತಂತ್ರವನ್ನು ಚೆನ್ನಾಗಿ ಅರಿತಿದ್ದ ಜಯಪ್ರಕಾಶ್ ಮತ್ತು ಸಂಗಡಿಗರು ಕನಿಷ್ಠ ಕಾರ್ಯಕ್ರಮ ರೂಪಿಸಿಕೊಂಡಲ್ಲಿ ಮಾತ್ರ ಸಚಿವ ಸಂಪುಟ ಸೇರುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಹದಿನಾಲ್ಕು ಅಂಶಗಳನ್ನೊಳಗೊಂಡ ಒಂದು ಕಾರ್ಯಕ್ರಮವನ್ನು ಸೂಚಿಸಿದರು. ಅದು ಹೀಗಿದೆ.

೧. ರಾಜ್ಯಾಂಗದ ತಿದ್ದುಪಡಿ : –

(ಅ) ಸಾಮಾಜಿಕ ಪರಿವರ್ತನೆಗೆ ಇರುವ ಅಡಚಣೆಗಳ ನಿವಾರಣೆ

(ಆ) ರಾಜ ಮಹಾರಾಜರುಗಳಿಗೆ, ಉನ್ನತ ನೌಕರ ವರ್ಗಕ್ಕೆ ಕೊಡಲಾಗಿರುವ ರಕ್ಷಣೆಗಳ ತಿದ್ದುಪಡಿ.

೨. ಆಡಳಿತ ಪುನರ್ರಚನೆ : –

(ಅ) ಅಧಿಕಾರ ವಿಕೇಂದ್ರೀಕರಣ

(ಆ) ನ್ಯಾಯವಿತರಣಾ ರೀತಿಯ ಪುನರ್ರಚನೆ

(ಇ) ಭ್ರಷ್ಟಾಚಾರ ನಿರ್ಮೂಲನಕ್ಕೆ ಕಠಿಣ ಕ್ರಮಗಳು

೩. ರಾಜ್ಯಗಳ ಪುನರ್ ವಿಂಗಡಣೆ : –

(ಅ) ಹಲವು ರಾಜ್ಯಗಳೂ ಸೇರಿದಂತೆ ರಾಜ್ಯಪಾಲರ ನೇಮಕ

(ಆ) ಆಡಳಿತದ ವೆಚ್ಚ ತಗ್ಗಿಸುವುದು

೪. ವ್ಯವಸಾಯ ಭೂಮಿಯ ಪುನರ್ ವಿತರಣೆ

೫. ಉಳುವ ರೈತನಿಗೆ ಜಮೀನಿನ ಹಂಚಿಕೆ

೬. ಬ್ಯಾಂಕುಗಳ ಮತ್ತು ವಿಮಾ ಸಂಸ್ಥೆಗಳ ರಾಷ್ಟ್ರೀಕರಣ

೭. ಸರ್ಕಾರಿ ಸ್ವಾಮ್ಯದ ವ್ಯಾಪಾರೀ ಸಂಸ್ಥೆಗಳ ಅಭಿವೃದ್ಧಿ.

೮. ಸಾಮಾಜಿಕ ಹೊಣೆಗಾರಿಕೆಯುಳ್ಳ ಟ್ರೇಡ್ ಯೂನಿಯನ್‌ಗಳ ರಚನೆ.

೯. ಸಹಕಾರಿ ಸಂಘಗಳು, ಶ್ರಮಜೀವಿಗಳ ಸಂಘಗಳು ಹಾಗೂ ತಾಂತ್ರಿಕ ವಿಜ್ಞಾನ ಸಂಘಗಳು ನಡೆಸುವ ಸ್ವತಂತ್ರ ಯಂತ್ರೋದ್ಯಮ ಸಂಸ್ಥೆಗಳಿಗೆ ಪ್ರೋತ್ಸಾಹ.

೧೦. ಕಲ್ಲಿದ್ದಲು ಮತ್ತು ಲೋಹದ ಗಣಿಗಳ ರಾಷ್ಟ್ರೀಕರಣ

೧೧. ರಾಷ್ಟ್ರೀಕೃತ ಉದ್ಯಮಗಳಲ್ಲಿ ಕಾರ್ಮಿಕರಿಗೆ ಆಡಳಿತದ ಜವಾಬ್ದಾರಿ

೧೨. ಗೃಹಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗಳಿಗೆ ರಕ್ಷಣೆ

೧೩. ಆರ್ಥಿಕ ಸಮಾನತೆ ಜಾರಿಗೆ ತರಲು ಸಹಾಯಕವಾಗುವ ಕಾನೂನುಗಳು ಮತ್ತು ಕ್ರಮಗಳು.

(ಅ) ಸಂಬಳದಲ್ಲಿ ಇರುವ ಅಸಮಾನತೆಯನ್ನು ತಗ್ಗಿಸುವುದು

(ಆ) ಪರಮಾವಧಿ ಸಂಬಳ ತಗ್ಗಿಸುವುದು ಹಾಗೂ

(ಇ) ಕನಿಷ್ಠ ಸಂಬಳದ ಮಿತಿಯನ್ನು ಏರಿಸುವುದು.

೧೪. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸ್ವದೇಶಿಗೆ ಆದ್ಯತೆ ನೀಡುವುದು.

ಜನಪರವಾದ ಈ ಉದಾತ್ತ ವಿಚಾರಗಳನ್ನು ಅಳವಡಿಸಿಕೊಳ್ಳಲು ಅಧಿಕಾರರೂಢ ಕಾಂಗ್ರೆಸ್ ಸಿದ್ಧವಾಗಿರಲಿಲ್ಲ. ಜೊತೆಗೆ ಸಮಾಜವಾದಿಗಳು ಬಂದು ಬೀಡುಬಿಟ್ಟರೆ ತಮ್ಮ ಸ್ಥಾನಗಳಿಗೆ ಎಲ್ಲಿ ಚ್ಯುತಿ ಬಂದೀತೋ ಎನ್ನುವ ಶಂಕೆ, ಸ್ವಾರ್ಥಗಳು ಕಾಂಗ್ರೆಸ್ಸಿಗರನ್ನು ಕಾಡಿದ ಕಾರಣ ಸಮಾಜವಾದಿ ಪಕ್ಷದವರು ಹೊರಗುಳಿಯುವುದು ಅನಿವಾರ್ಯವಾಯ್ತು. ಜಯಪ್ರಕಾಶರಂಥ ಶುದ್ಧ ಚಾರಿತ್ರ್ಯದ, ಜನಪರ ಕಾಳಜಿಯ ಮಾರ್ಗದರ್ಶನ ರಾಷ್ಟ್ರಕ್ಕೆ ಇಲ್ಲವಾಯ್ತು. ಬ್ರಿಟಿಷರಿಗಿಂತ ಕ್ರೂರವಾಗುತ್ತಾ ಹೊರಟ ಆಡಳಿತಾರೂಢ ಕಾಂಗ್ರೆಸ್‌ನ ವಿರುದ್ಧ ಹೋರಾಡುವುದು ಹಾಗೆ ಹೋರಾಡುತ್ತಲೇ ತಮ್ಮ ಕನಸಿನ ಭಾರತ ಸಾಕಾರಗೊಳ್ಳುವ ಗುರಿಯತ್ತ ನಡೆದರು.

ವಿನೋಬ ಭಾವೆಯವರು ಪ್ರಾರಂಭಿಸಿದ್ದ ಭೂದಾನ ಚಳವಳಿ ರಾಷ್ಟ್ರದ ಆರ್ಥಿಕ ಪುನರ್ ರಚನೆಗೆ ಸೂಕ್ತವಾದ ಮಾರ್ಗ ಎಂದು ಜಯಪ್ರಕಾಶರಿಗೆ ಮನವರಿಕೆಯಾಯ್ತು. ಅಂತಹ ಪವಿತ್ರವಾದ ಕಾರ್ಯವನ್ನು ಕೈಗೊಳ್ಳಲು ನಿರ್ಧರಿಸಿದರು. ೧೯೫೨ ರಲ್ಲಿ ಆತ್ಮ ಶುದ್ಧಿಗಾಗಿ ಪುಣೆಯಲ್ಲಿ ೨೧ ದಿವಸಗಳ ಕಾಲ ನಿರಶನ ವ್ರತವನ್ನು ಕೈಗೊಂಡರು.

ಮಾರ್ಕ್ಸ್‌ನ ಭೌತಿಕ ವಸ್ತುವಾದದಿಂದ ನಿಧಾನವಾಗಿ ದೂರ ಸರಿಯ ಹತ್ತಿದರು. ಮಾನವನ ಸ್ವಾತಂತ್ರ್ಯಕ್ಕೆ ಆದ್ಯತೆ ಇರದ ಯಾವುದೇ ಸಿದ್ಧಾಂತಗಳು ಅವರಿಗೆ ಅಪ್ರಿಯವಾಗತೊಡಗಿದವು. ಮಾನವೀಯತೆಗೆ ಆದ್ಯತೆ ನೀಡುವ ವಿವೇಚನೆಯತ್ತ ಚಿಂತಿಸಿದರು.

ಪ್ರಯೋಗಶೀಲರಾದರು. ಆ ಮಾರ್ಗದಲ್ಲಿ ಮಾರ್ಕ್ಸ್‌ವಾದ ತಮಗೆ ಯಾವೊಂದು ಸಹಾಯವನ್ನೂ ಒದಗಿಸಲಾರದು ಎಂಬುದು ಖಚಿತವಾಯ್ತು.

ಚಾಂಡೀಲ್ ಸರ್ವೋದಯ ಸಮ್ಮೇಳನ ೧೯೫೩ರಲ್ಲಿ ಜರುಗಿತು. ಜಯಪ್ರಕಾಶರು ಅಲ್ಲಿ ಸರ್ವೋದಯ ಮಾರ್ಗವನ್ನು ತಮ್ಮ ಜೀವನದ ಧ್ಯೇಯವಾಗಿ ಸ್ವೀಕರಿಸಿದರು. ಸಮಾಜವಾದಿಯಾಗಿದ್ದ ಜಯಪ್ರಕಾಶರು ಸರ್ವೋದಯವಾದಿಯಾಗಿ ರೂಪುಗೊಂಡ ಬಗ್ಗೆ ಹೀಗೆ ಹೇಳಿದ್ದಾರೆ.

''ನನ್ನ ಜೀವನ ಯಾತ್ರೆ ಹೊರಗಿನವರಿಗೆ ಯಾವುದೋ ಕಠಿಣವಾದ ಬಳಸು ದಾರಿಯಲ್ಲಿ ಸಾಗಿಬಂದ ಅಸ್ಪಷ್ಟ ಅಸ್ಥಿರ ಅನ್ವೇಷಣೆಯಂತೆ ಕಂಡೀತು. ಆದರೆ ನಾನು ಸಿಂಹಾವಲೋಕನ ಮಾಡಿದಾಗ ನನಗೆ ಅದರಲ್ಲಿ ವಿಕಾಸದ ದಾರಿ ಒಂದೇಸಮನೆ ಹರಿದು ಬಂದಿರುವುದು ಕಾಣುತ್ತದೆ. ಅಲ್ಲಿದ್ದುದು ಕುರುಡುತನವಲ್ಲ ಹೊಸಹಾದಿಯ ಅನ್ವೇಷಣೆ. ಸ್ಪಷ್ಟವಾದ ಬೆಳಕಿನ ದಾರಿಯೊಂದು ಪ್ರಖರವಾಗಿ ಕಾಣಿಸುತ್ತಲೇ ಇತ್ತು. ಎಂದೂ ಅದು ಮರೆಯಾಗಲಿಲ್ಲ, ಕಳೆಗುಂದಲಿಲ್ಲ. ಎಷ್ಟೇ ಕಷ್ಟದ ದಾರಿಯಾಗಿದ್ದರೂ ಅದು ಗುರಿ ಎಡೆಗೆ ಸಾಗುವುದಕ್ಕಾಗಿಯೇ. ಇಂತಹ ದಾರಿಯಲ್ಲಿ ಕ್ರಮಿಸಿದುದಕ್ಕಾಗಿ ನನಗೆ ಯಾವ ವ್ಯಥೆಯೂ ಇಲ್ಲ. ಈಗ ನಾನು ನನ್ನ ನಿಶ್ಚಿತ ದಾರಿಯಲ್ಲಿ ದೃಢವಾಗಿ ಮುಂದೆ ಮುಂದೆ ಸಾಗಲು ನನಗೆ ಅದರಿಂದ ಸಹಾಯವೇ ಆಗಿದೆ.''

ಹೀಗೆ ಹೊಸ ಹಾದಿಯ ಅನ್ವೇಷಕರಾಗಿ ಸಾಗಿಬಂದ ಜಯಪ್ರಕಾಶರು ರಾಜಕೀಯ ಕ್ಷೇತ್ರದಿಂದ ದೂರಸರಿದು ಸರ್ವೋದಯ ಮಾರ್ಗದಲ್ಲಿ ಮುನ್ನಡೆದರು. ಅಧಿಕಾರ ದಾಹದಿಂದ ಮೌಲಿಕ ಸಿದ್ಧಾಂತಗಳು ಮಣ್ಣು ಪಾಲಾಗುತ್ತಿರುವುದು ಅವರಿಗೆ ಅಸಹನೀಯವಾಯ್ತು. ಪಕ್ಷಗಳು, ಪಂಥಗಳು, ಜಾತಿಗಳು, ಗುಂಪುಗುಂಪುಗಳಾಗಿ ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಪೊಳ್ಳುತನ ಅವರಿಗರಿವಾಯ್ತು. ಈ ಸಂಪ್ರದಾಯ ರೀತಿಯ ಕುರುಡು ಮಾರ್ಗವನ್ನು ವಿಕಾಸಶೀಲ ಲೋಕಶಕ್ತಿಯ ಆವಿಷ್ಕಾರಕ್ಕಾಗಿ ಮುರಿಯಬೇಕೆಂದು ಮನಸ್ಸು ಮಾಡಿದರು. ಪ್ರಜಾಪ್ರಭುತ್ವ ಸಮಾಜದ ಗುರಿಯಿಂದ ಅಧಿಕಾರ ವಿಕೇಂದ್ರೀಕರಣದ ಗುರಿ ತಲುಪಿದರು. ಪ್ರಜಾಪ್ರಭುತ್ವದ ಬಹುಮತದ ಸಂಖ್ಯಾ ರಾಕ್ಷಸನ ಹಾವಳಿಯನ್ನು ಮನಗಂಡ ಅವರು ಅದರ ಸ್ಥಾನದಲ್ಲಿ ಸರ್ವಸಮ್ಮತಿಯ ಸರ್ವೋದಯ ಮಾರ್ಗವನ್ನು ಕಾರ್ಯರೂಪಕ್ಕೆ ತರಲು ಸಂಕಲ್ಪಮಾಡಿದರು. ವ್ಯಕ್ತಿಸ್ವಾತಂತ್ರ್ಯ ಹಾಗೂ ಸಾಮಾಜಿಕ ನ್ಯಾಯ ಈ ಎರಡೂ ಗುರಿಗಳನ್ನು ಏಕಕಾಲದಲ್ಲಿ ಸರ್ವೋದಯದ ಮೂಲಕ ಸಾಧಿಸಬಹುದೆಂದು ಅವರಿಗೆ ಮನದಟ್ಟಾಯ್ತು.

ಭೂದಾನ ಚಳವಳಿ :

ಭೂದಾನ ಚಳವಳಿ ಅಹಿಂಸಾತ್ಮಕವಾಗಿ ಹಾಗೂ ನ್ಯಾಯೋಚಿತ ಮಾರ್ಗದಲ್ಲಿ ಹೃದಯ ಪರಿವರ್ತನೆಯ ಮೂಲಕ ಭೂಮಿಯ ಪುನರ್ವಿಂಗಡಣೆಗೆ ತನ್ಮೂಲಕ ಗ್ರಾಮೀಣ ಪ್ರದೇಶದ ಆರ್ಥಿಕ ಸುಧಾರಣೆ ಪ್ರೇರಣೆಯಾಗುವುದನ್ನು ಜಯಪ್ರಕಾಶರು ಅರಿತು ಕೊಂಡರು. ವಿನೋಬಾ ಅವರ ಭೂದಾನ ಚಳವಳಿಯ ಗುರಿಯೂ ಕೂಡ 'ಭೂದಾನ

ಯಜ್ಞದ ಮೂಲಕ ಗ್ರಾಮೋದ್ಯೋಗ ಪ್ರಧಾನವಾದ ಅಹಿಂಸಾತ್ಮಕ ಕ್ರಾಂತಿ' ಉಂಟು ಮಾಡುವುದೆ ಆಗಿದೆ ಎಂಬುದನ್ನು ಅರಿತು ಜಯಪ್ರಕಾಶರು ಸಮರ್ಪಿಸಿಕೊಂಡರು. ೧೯೫೪ ರಲ್ಲಿ ಬುದ್ಧ ಗಯೆಯಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಜಯಪ್ರಕಾಶರು ತಮ್ಮ 'ಜೀವನದಾನ' ವನ್ನು ಘೋಷಿಸಿದರು. ಸಮ್ಮೇಳನಾಧ್ಯಕ್ಷೆಯಾಗಿದ್ದ ಆಶಾದೇವಿ ಆರ್ಯನಾಯಕಂ ಅವರೂ ಪ್ರಭಾವಿತರಾಗಿ 'ಜೀವನದಾನ'ವನ್ನು ಘೋಷಿಸಿದರು. ಸಾವಿರಾರು ಸರ್ವೋದಯ ಕಾರ್ಯಕರ್ತರು ಉತ್ತೇಜಿತರಾದರು. ಭೂದಾನ ಯಜ್ಞದ ಅಧ್ವರ್ಯುವಾಗಿದ್ದ ವಿನೋಬಾ ಅವರು ''ಜಯಪ್ರಕಾಶರ ಶುದ್ಧ ಸಂಕಲ್ಪದೊಡನೆ ನನ್ನ ಹೃದಯ ಪ್ರತಿಜ್ಞೆಯನ್ನೂ ಪರಮಾತ್ಮನ ಸಾಕ್ಷಿಯಾಗಿ ಪುನರುಚ್ಚರಿಸುತ್ತೇನೆ; ಭೂದಾನ ಯಜ್ಞದ ಮೂಲಕ ಗ್ರಾಮೋದ್ಯೋಗ ಪ್ರಧಾನ ಅಹಿಂಸಾತ್ಮಕ ಕ್ರಾಂತಿಗಾಗಿ ನನ್ನ ಜೀವನವನ್ನೆ ಸಮರ್ಪಿಸುತ್ತೇನೆ'' ಎಂದು ಜಯಪ್ರಕಾಶರಿಗೆ ತಮ್ಮನ್ನು ಸಮರ್ಪಿಸಿಕೊಂಡು ಪತ್ರ ಬರೆದರು. ''ನನ್ನಂತಹ ಸಾಮಾನ್ಯನಿಗೆ ಈ ಮಹಾಪುರುಷನ ಸಮರ್ಪಣಾ ಪತ್ರವೇ ! ಪರಮಾತ್ಮನ ಹೆಸರಿನಲ್ಲಿ ನಾವೆಲ್ಲರೂ ವಿನೋಬಾಜಿಯವರಿಗೆ ಜೀವದ ದಾನ ಮಾಡಬೇಕಾಗಿದೆ'' ಎಂದು ನುಡಿದರು. ಅವರ ಜೀವನದ ಮರೆಯಲಾಗದ ಘಟನೆ ಇದಾಗಿದೆ.

ವಿನೋಬಾ ಅವರೊಡಗೂಡಿ ಜಯಪ್ರಕಾಶರು ಬಿಹಾರದ ಪ್ರತಿ ಹಳ್ಳಿಗೂ ಭೇಟಿ ಕೊಟ್ಟು ಭೂದಾನ, ಗ್ರಾಮದಾನ, ಗ್ರಾಮ ಸ್ವರಾಜ್ಯಗಳ ಸಂದೇಶಗಳನ್ನು ಮುಟ್ಟಿಸಿದರು. ಭೂದಾನ ಚಳವಳಿ ರಾಷ್ಟ್ರವ್ಯಾಪ್ತಿಯಾಯ್ತು. ಇಡೀ ದೇಶದಲ್ಲಿ ಭೂದಾನ ಚಳವಳಿಯ ಮೂಲಕ ಜನ ಸ್ವಯಂಪ್ರೇರಿತರಾಗಿ ನೀಡಿದ ಭೂಮಿ ಎಷ್ಟೆಂದರೆ ನಲವತ್ತೈದು ಲಕ್ಷ ಎಕರೆ. ಅದರಲ್ಲಿ ಇಪ್ಪತ್ತನಾಲ್ಕು ಲಕ್ಷ ಎಕರೆ ಬಿಹಾರ ರಾಜ್ಯ ಒಂದರಿಂದಲೇ ಬಂದಿತ್ತು. ಇದರಲ್ಲಿ ಹದಿನಾಲ್ಕು ಲಕ್ಷ ಎಕರೆ ಜಮೀನನ್ನು ಭೂರಹಿತ ರೈತರಿಗೆ ನ್ಯಾಯಯುತವಾಗಿ ಹಂಚಲಾಯ್ತು.

ಈ ಚಳವಳಿಯಿಂದ ಉತ್ತೇಜಿತವಾದ ಬಿಹಾರ ರಾಜ್ಯದಲ್ಲಿ ಶೇಕಡ ಎಪ್ಪತ್ತೈದರಷ್ಟು ಹಳ್ಳಿಗಳು ಗ್ರಾಮದಾನ ಸಂಕಲ್ಪ ಮಾಡಿದವು. ಜಯಪ್ರಕಾಶರು ಹದಿನಾರು ವರ್ಷಗಳ ಕಾಲ ಬಿಹಾರದಲ್ಲಿ ಅಖಂಡ ನಿಷ್ಠೆಯಿಂದ ಸರ್ವೋದಯ ಕಾರ್ಯ ಮಾಡಿದರು. ಇದರಿಂದಾಗಿ ಅವರಿಗೆ ಬಿಹಾರದ ಗ್ರಾಮ ಸಂಪರ್ಕ ಬೆಳೆಯಿತು. ಜನಗಳ, ಅವರ ಸಮಸ್ಯೆಗಳ ನಿಕಟ ಪರಿಚಯವಾಯ್ತು. ಗ್ರಾಮದಲ್ಲಿ ಸರ್ವೋದಯ ಚಳವಳಿ ಪ್ರಭಲವಾಗಿ ಬೆಳೆದರೂ ಬಿಹಾರದ ರಾಜಕೀಯ ವಾತಾವರಣ ಕಲುಷಿತವಾಗುತ್ತ ಬಂತು. ಅಹಿಂಸಾತ್ಮಕ ಜನತಾ ಆಂದೋಲನ ಸರ್ಕಾರದ ಒರಟು ಚರ್ಮಕ್ಕೆ ತಟ್ಟಲಿಲ್ಲ. ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳು ರಚನೆಯಾದಷ್ಟೇ ವೇಗದಲ್ಲಿ ಪತನವಾಗುತ್ತಾ ಬಂದವು. ಶಾಸಕರು, ಮಂತ್ರಿಗಳು, ಅಧಿಕಾರಿಗಳು, ಸಮಯಸಾಧಕರು, 'ಹುಚ್ಚಿ ಮದುವೆಯಲ್ಲಿ ಉಂಡವನೆ ಜಾಣ' ಎಂಬಂತೆ ಕಿತ್ತುತಿನ್ನಲಾರಂಭಿಸಿದರು. ಭ್ರಷ್ಟಾಚಾರ, ಲಂಚಕೋರತನ, ಶೋಷಣೆ ಉಗ್ರರೂಪ ತಾಳಿತು. ಆ ಪಕ್ಷ ಈ ಪಕ್ಷ ಎಂಬ ಭೇದಭಾವವಿಲ್ಲದೆ ಎಲ್ಲ ಪಕ್ಷಗಳೂ ಬಿಹಾರದಲ್ಲಿ ಅನೈತಿಕತೆ ತುಂಬಿ ತಾಂಡವವಾಡಲು ಕಾರಣರಾದರು. ಜನತೆಗೆ ದಿಕ್ಕುತೋಚದಾಯ್ತು. ಇದರಿಂದ ಜಯಪ್ರಕಾಶ್ ನೊಂದು ನಿಟ್ಟುಸಿರಿಟ್ಟರು.

ಪ್ರಜಾಪ್ರಭುತ್ವ ಮೌಲ್ಯಗಳ ಕುಸಿತ :

ಕಾಂಗ್ರೆಸ್ ದುರಾಡಳಿತದಿಂದ ರಾಷ್ಟ್ರ ಕಂಗಾಲಾಗುತ್ತ ಬಂತು. ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆಯಿತು. ಬಂಡವಾಳಶಾಹಿಗಳ ತಂಡವೇ ದಂಡು ಕಟ್ಟಿಕೊಂಡು ಹೊರಟಿತು. ರಾಜಕೀಯ ಪಕ್ಷಗಳು ಬಂಡವಾಳಶಾಹಿಗಳ ಕೈಗೊಂಬೆಯಾದರು. ಪ್ರಜಾಪ್ರಭುತ್ವದ ಮೌಲ್ಯಗಳು ಕುಸಿಯುತ್ತಾ ಬಂದವು. ನೆಹರೂ ಸುಖಲೋಲುಪತೆಯಿಂದ ಮೈಮರೆತು ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಟ್ಟರು. ''ಕಡೆಯದಾಗಿ ನೀವು ಹೆಚ್ಚು ದಿನ ಬದುಕಲಿ ಎಂದು ಪ್ರಾರ್ಥಿಸುತ್ತೇನೆ. ಏಕೆಂದರೆ, ನಿಮ್ಮನ್ನು '೧೯೪೭ರ ಮುಂಚಿನ ಮನುಷ್ಯನನ್ನಾಗಿ ಮಾರ್ಪಡಿಸುವ ಅವಕಾಶ ನನಗೆ ಸಿಗಬಹುದು'' ಎಂದು ಡಾ|| ರಾಮಮನೋಹರ ಲೋಹಿಯಾ ಅವರು ನೆಹರೂ ಅವರಿಗೆ ಅವರ ಅಪ್ರಾಮಾಣಿಕತೆಗೆ ನೊಂದು ಬರೆದರು. ಎಲ್ಲ ಮೌಲ್ಯಗಳನ್ನೂ ಗಾಳಿಗೆ ತೂರಿ ಕಾಂಗ್ರೆಸ್ ಅರಾಜಕತೆಗೆ ನಾಂದಿ ಹಾಡುತ್ತಿತ್ತು. ಇದನ್ನು ಕಂಡ ಆಚಾರ್ಯ ಕೃಪಲಾನಿ ಅವರು ೧೯೫೭ರಲ್ಲಿ ಕಾಂಗ್ರೆಸ್‌ನ ದುರಾಡಳಿತವನ್ನು ಕುರಿತು ಹೀಗೆ ಬರೆದರು.

''ಗೂಂಡಾಗಳೂ ಅಲ್ಲ, ಕಾಳಸಂತೆಕೋರರೂ ಅಲ್ಲ , ಕಮ್ಯುನಿಸ್ಟರೂ ಅಲ್ಲ ; ಆದರೆ ಕಾಂಗ್ರೆಸ್ಸಿಗರಾದ ನೀವು ಈ ಶೈಶವ ಪ್ರಜಾಪ್ರಭುತ್ವದ ಬದ್ಧ ವೈರಿಗಳಾಗಿದ್ದೀರಿ. ಭಾರತದಲ್ಲಿ ಪ್ರಜಾಪ್ರಭುತ್ವವೇನಾದರೂ ಅಳಿದು ಹೋದರೆ ಅದಕ್ಕೆ ಜವಾಬ್ದಾರರು ನೀವೇ ಆಗುತ್ತೀರಿ. ನೀವು ಒಂದು ದಿನ ಬದುಕಬಹುದು, ಅದಕ್ಕಿಂತ ಹೆಚ್ಚಾಗಿ ಅಲ್ಲ. ಆದರೆ ನಿಮ್ಮ ನಾಚಿಗೆಗೇಡಿತನಕ್ಕೆ ಇದು ಇತಿಹಾಸದ ತೀರ್ಪಾಗುತ್ತದೆ.''

ಒಂದು ಸ್ವತಂತ್ರ ರಾಷ್ಟ್ರದ ಪ್ರಾರಂಭಿಕ ನಾಯಕತ್ವ ಸಮರ್ಥ ನಾಯಕನ ಕೈಗೆ ಸಿಗದೆ ಹೋದರೆ ಎಂಥ ದುರಂತಗಳನ್ನು ಅನುಭವಿಸಬೇಕಾಗುತ್ತದೆ ಎನ್ನುವುದಕ್ಕೆ ಭಾರತವೇ ಸಾಕ್ಷಿಯಾಗಿದೆ.

ಅಧಿಕಾರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಬ್ರಿಟಿಷರ ಒಡೆದಾಳುವ ನೀತಿಯನ್ನು ಕಾಂಗ್ರೆಸ್ ಮೈಗೂಡಿಸಿಕೊಂಡಿತು. ಆನಂತರ ಅಧಿಕಾರಕ್ಕೆ ಬಂದ ಬೇರೆ ಪಕ್ಷಗಳೂ ಕೂಡ ಈ ರೋಗದಿಂದ ಪಾರಾಗದ್ದುದು ಈ ದೇಶದ ದೌರ್ಭಾಗ್ಯವೇ ಸರಿ.

ಗಾಂಧೀಜಿಯವರ ಗುರಿ ಸ್ವಾತಂತ್ರ್ಯ ಗಳಿಸುವುದಕ್ಕೆ ಸೀಮಿತವಾಗಿದ್ದು ಸ್ವಾತಂತ್ರ್ಯಾನಂತರ ಯಾವ ರೀತಿಯ ಆಳ್ವಿಕೆ, ಯಾರ ನೇತೃತ್ವದಲ್ಲಿ ಎಂಬ ಬಗ್ಗೆ ಸ್ಪಷ್ಟ ಯೋಜನೆಗಳಿರದ ಕಾರಣ ಸ್ವತಂತ್ರ ಭಾರತ ದಿಕ್ಕು ತಪ್ಪಿತು. ಸುಭಾಷ್‌ಚಂದ್ರ ಬೋಸ್‌ರಿಗೆ ಆಂತರಿಕ ಶತ್ರುಗಳ ಬಗ್ಗೆ ಸ್ಪಷ್ಟ ಅರಿವಿತ್ತು. ಸಾವಿರಾರು ವರ್ಷಗಳಿಂದ ಜಾತಿ, ಮತ, ಕೋಮು, ಭಾಷೆ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳಿಂದ ಗುಲಾಮ ಸ್ಥಿತಿಯಲ್ಲಿ ನರಳುತ್ತಿರುವ ಭಾರತವನ್ನು ಬಿಡುಗಡೆಗೊಳಿಸಬೇಕಾದರೆ, ಸ್ವಾತಂತ್ರ್ಯದ ಹೊಂಬೆಳಕಿನಲ್ಲಿ ಪುನರ್‌ನಿರ್ಮಾಣ ಮಾಡಬೇಕಾದರೆ ತ್ಯಾಗ ಮನೋಭಾವದ ಉಕ್ಕಿನ ಸರ್ವಾಧಿಕಾರಿಯೊಬ್ಬ ಕನಿಷ್ಠ ಇಪ್ಪತ್ತು ವರ್ಷಗಳ ಕಾಲ ಭಾರತವನ್ನು ಆಳಬೇಕು ಎಂಬ ಸ್ಪಷ್ಟ ನಿಲುವನ್ನು ಹೊಂದಿದ್ದರು. ಅದಕ್ಕಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದ್ದರು. ೧೯೪೪ರಲ್ಲಿ ತಾತ್ಕಾಲಿಕ

ಸರ್ಕಾರವನ್ನು ಘೋಷಿಸಿ ಎಂಟು ಜನ ಮಂತ್ರಿಗಳನ್ನು ನೇಮಿಸಿದ್ದರು. ಕೋಮುವಾದವನ್ನು ಹತ್ತಿಕ್ಕಲು ಸಮಿತಿ ರಚಿಸಿದ್ದರು. ಸುಭಾಷ್‌ರ ಯೋಜನೆಯಡಿ ನಡೆದಿದ್ದರೆ ಕಾಶ್ಮೀರದ ಸಮಸ್ಯೆ ಇರಲಿ ಭಾರತ-ಪಾಕಿಸ್ತಾನಗಳ ವಿಭಜನೆಯಾಗುತ್ತಿರಲಿಲ್ಲ. ಝಾನ್ಸಿರಾಣಿ ರೆಜಿಮೆಂಟಿನಲ್ಲಿ ಸಾವಿರಾರು ಮಹಿಳೆಯರನ್ನು ತೊಡಗಿಸಿದ್ದರು. ಭಾಷೆಯ ಬಗ್ಗೆ ಕೂಡ ಸ್ಪಷ್ಟ ನಿಲುವನ್ನು ಸುಭಾಷ್ ಹೊಂದಿದ್ದರು. ಹಿಂದೂಸ್ಥಾನಿಯನ್ನು ರಾಷ್ಟ್ರೀಯ ಭಾಷೆಯಾಗಿಸಬೇಕು, ಉರ್ದು ಮತ್ತು ಹಿಂದಿಯನ್ನು ಪ್ರತ್ಯೇಕಿಸುವುದು ಕೃತಕ ಎಂದಿದ್ದರು. ರೋಮನ್ ಲಿಪಿಯನ್ನು ನಮ್ಮ ಐಕ್ಯತೆಯ ಹಾಗೂ ಅಂತಾರಾಷ್ಟ್ರೀಯ ಸಂಪರ್ಕ ಭಾಷೆಯಾಗಿಸಬೇಕೆಂದಿದ್ದರು. 'ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಜೊತೆ ಎಂದೂ ಹೊಂದಾಣಿಕೆ ಮಾಡಿಕೊಳ್ಳದ ಹೋರಾಟ' ಎನ್ನುವ ನೇತಾಜಿ ಬ್ರಿಟಿಷರೊಂದಿಗೆ ಹೊಂದಾಣಿಕೆ ಎಂದರೆ ಮತ್ತೆ ಗುಲಾಮೀಯತೆಯ ಜೊತೆ ಹೊಂದಾಣಿಕೆ ಮಾಡಿಕೊಂಡಂತೆ ಎಂದು ಗುಡುಗುತ್ತಿದ್ದರು. ಇದು ನಿಜ ಎನ್ನುವಂತೆ ಬ್ರಿಟಿಷರು ತೊಲಗಿದರೂ ಅವರ ಇಂಗ್ಲೀಷ್ ಭಾಷೆ ತೊಲಗಲಿಲ್ಲ, ಅವರ ಸಂಸ್ಕೃತಿ ಕಾಲಕಳೆದಂತೆ ಕೊಂಚಕೊಂಚವೆ ಕಬಳಿಸುತ್ತಿದೆ.

ಈ ಅಪಾಯದ ವಿರುದ್ಧ ಜಯಪ್ರಕಾಶರು ದನಿ ಎತ್ತಿದರು. ಅಧಿಕಾರದ ಆಸೆ ಇರದ ಅವರಿಗೆ ಸಂಪುಟ ಸೇರುವ ಆಮಿಷ ಒಡ್ಡಿದಾಗ ಅರ್ಥಪೂರ್ಣ ಕಾರ್ಯಸೂಚಿ ನೀಡಿ ಅದನ್ನು ಅಳವಡಿಸಿಕೊಂಡರೆ ಸಂಪುಟ ಸೇರುತ್ತೇನೆ ಎಂದರು. ಈ ಯಾವುದನ್ನೂ ನೆಹರು ಒಪ್ಪುವ ಮನಸ್ಸು ಮಾಡಲಿಲ್ಲ.

''ಆಗಸ್ಟ್ ೧೫, ೧೯೪೭ರಂದು ಬ್ರಿಟಿಷ್ ಚಕ್ರಾಧಿಪತ್ಯದ ಬಾವುಟವನ್ನು ಕೆಳಗಿಳಿಸಿ ಧರ್ಮಚಕ್ರವನ್ನೊಳಗೊಂಡ ಮೂರು ಬಣ್ಣದ ಬಾವುಟವನ್ನು ಮೇಲೇರಿಸಿದಾಗಿನ ಒಂದು ಮಹತ್ವ ಸಂದರ್ಭವನ್ನು ಕಳೆದುಕೊಂಡೆವು. ಅಂದು ರಾಜಕೀಯ ಸ್ವಾತಂತ್ರ್ಯದ ಅಸ್ಥಿಪಂಜರ ಬಂತು. ಆದರೆ ಆರ್ಥಿಕ ಸ್ವಾತಂತ್ರ್ಯದ ರಕ್ತ ಮಾಂಸ ತುಂಬಿರಲಿಲ್ಲ. ಈ ಸ್ಮರಣೀಯ ದಿನದ ಒಂದು ವಾರದ ಮುನ್ನ ನಾನು ಸರ್ಕಾರಕ್ಕೆ ಹೇಳಿದೆ. ಭೂ ಒಡೆತನವನ್ನು ತೆಗೆದು ಹಾಕಲು ಘೋಷಣೆಯನ್ನು ಹೊರಡಿಸಿ ಎಂದು. ಈ ಚಾರಿತ್ರಿಕ ಸದವಕಾಶವನ್ನು ಕಳೆದುಕೊಳ್ಳಲಾಯ್ತು. ಈ ವಿಪತ್ಕಾರಕ ವಿಶ್ವಾಸಘಾತುಕತನವನ್ನು ಈ ಸ್ಮರಣೀಯ ದಿನದಂತೆಯೇ ಸ್ಮರಿಸಿಕೊಳ್ಳ ಬೇಕಾಗಿದೆ.'' ಡಾ|| ರಾಮಮನೋಹರ ಲೋಹಿಯಾ ಅವರ ಸಲಹೆಯೂ ಜಯಪ್ರಕಾಶ ನಾರಾಯಣರ ಸಲಹೆಯೂ ಉಳುವವರಿಗೇ ಭೂಮಿ ಎನ್ನುವ ತತ್ವದ ಮೇಲೆ ನಿಂತಿದೆ. ನೆಹರೂ ಔದ್ಯೋಗೀಕರಣಕ್ಕೆ ಒತ್ತುಕೊಟ್ಟಂತೆ ಸಾಮಾಜಿಕ ಬದಲಾವಣೆಗಳಿಗೆ ಗಮನ ಹರಿಸಲಿಲ್ಲ. ಬಂಡವಾಳಶಾಹಿಗಳಂತೆ ಭೂಮಾಲೀಕರು ಪ್ರಭಲವಾದರು. ಶ್ರೀಮಂತರು ಅತಿ ಶ್ರೀಮಂತರಾಗುವ, ಬಡವರು ಕಡುಬಡವರಾಗುವ ಸ್ಥಿತಿ ಗಟ್ಟಿಯಾಯ್ತು. ಈ ಎಲ್ಲ ಅನಿಷ್ಟ ಪರಂಪರೆಗಳನ್ನು ಕಂಡು ಸಹಿಸಲಾಗದ ಜಯಪ್ರಕಾಶರು, ಡಾ|| ಲೋಹಿಯಾ, ಆಚಾರ್ಯ ಕೃಪಲಾನಿ ಮುಂತಾದವರು ಕಾಂಗ್ರೆಸ್ ಆಡಳಿತದ ವಿರುದ್ಧ ಟೀಕೆ ಮಾಡಿದರೂ ನೆಹರು ದರ್ಪದ ಎದುರು ನಿಲ್ಲಲಾಗಲಿಲ್ಲ.

ಕಾಂಗ್ರೆಸ್‌ನ ಅನೀತಿಯುತ ಆಡಳಿತದಿಂದ ರೋಸಿಹೋದ ಜಯಪ್ರಕಾಶರು

ಸುಮ್ಮನೆ ಕೈಕಟ್ಟಿ ಕೂರಲಿಲ್ಲ. ಜನರ ನೋವು ನಲಿವಿನೊಂದಿಗೆ ನಿರಂತರ ತೊಡಗಿಸಿ ಕೊಳ್ಳುತ್ತಿದ್ದರು. ಮತೀಯ ಗಲಭೆಯಾಗಿರಲಿ, ಪ್ರಕೃತಿಯ ಪ್ರಕೋಪವಾಗಿರಲಿ, ಕ್ಷಾಮ, ಪ್ರವಾಹ ಬಿರುಗಾಳಿಯಿಂದಾದ ಅನಾಹುತಗಳಿರಲಿ, ನೊಂದ ಜನರ ಸೇವೆಗೆ ಜಯಪ್ರಕಾಶರು ಧಾವಿಸುತ್ತಿದ್ದರು. ಮುಜಫರಪುರದ ಮತೀಯ ದಂಗೆಯಾಗಿರಲಿ, ಬಿಹಾರದ ಕ್ಷಾಮವಾಗಿರಲಿ, ಇಲ್ಲಾ ಆಫ್ರಿಕಾದ ಜನತೆಯ ಕರುಣ ಆಕ್ರಂದನವಾಗಿರಲಿ ಜಯಪ್ರಕಾಶರ ಹೃದಯ ತುಡಿಯುತ್ತಿತ್ತು. ಸೇವೆಗಾಗಿ ಧಾವಿಸುತ್ತಿದ್ದರು. 'ಪಾನ್ ಆಫ್ರಿಕನ್ ಫ್ರೀಡಮ್ ಮೂಮೆಂಟ್' ಆಶ್ರಯದಲ್ಲಿ ಮೇ ೬, ೧೯೬೨ರಂದು ನಡೆದ ಶಾಂತಿಯುತ ಪ್ರದರ್ಶನದಲ್ಲಿ ಭಾಗವಹಿಸಲು ಅವರು ನೈರೊಬಿಗೆ ತೆರಳಿದ್ದು ಅವರ ಸೇವಾ ಮನೋಭಾವದ ಪ್ರತೀಕವಾಗಿದೆ. ಕಾರ್ಯಕ್ಷೇತ್ರ ವಿಶಾಲವಾದರೆ ಸಂಘಟನೆ ಸಡಿಲವಾಗುತ್ತದೆಂಬ ಅನುಭವದಿಂದ ತಮ್ಮ ಕಾರ್ಯಕ್ಷೇತ್ರವನ್ನು ಗಯಾ, ಪೂರ್ಣಿಮಾ ಹಾಗೂ ಸಂಥಾಲ್ ಪರಗಣ ಜಿಲ್ಲೆಗಳಿಗೆ ಸೀಮಿತಗೊಳಿಸಿಕೊಂಡರೂ ಅವರ ವ್ಯಕ್ತಿತ್ವದ ಪ್ರಭಾವ ಮಾತ್ರ ಆ ಜಿಲ್ಲೆಗಳಿಗೆ ಸೀಮಿತವಾಗಿರದೆ ಪುಣ್ಯಾಪರ್ವದಂತೆ ರಾಷ್ಟ್ರಾದ್ಯಂತ ಪಸರಿಸುತ್ತಿತ್ತು.

ನಾವು ಸ್ಮರಿಸಿಕೊಳ್ಳಬೇಕಾದ ಸಮಾರಂಭವೊಂದು ಮೈಸೂರಿನ ಇಲವಾಲದಲ್ಲಿ ನಡೆಯಿತು. ಅದು ನಡೆದದ್ದು ೧೯೫೭ರಲ್ಲಿ. ಅಖಿಲಭಾರತ ಗ್ರಾಮದಾನ ಪರಿಷತ್ತು ಆ ಕಾರ್ಯಕ್ರಮವನ್ನು ನಿಯೋಜಿಸಿತ್ತು. ರಾಷ್ಟ್ರದ ಅಗ್ರಪಂಕ್ತಿಯ ನಾಯಕರೂ ಸೇರಿದ್ದರು. ಡಾ|| ರಾಜೇಂದ್ರ ಪ್ರಸಾದ್, ಜವಹರಲಾಲ್ ನೆಹರೂ, ಕಾಂಗ್ರೆಸ್ ಅಧ್ಯಕ್ಷ ದೇಬರ್, ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಗಂಗಾಶರಣಸಿಂಹ, ಕಮ್ಯೂನಿಸ್ಟ್ ನಾಯಕ ನಂಬೂದರಿಪಾಡ್, ಜಯಪ್ರಕಾಶ ನಾರಾಯಣ ಜೊತೆಗೆ ಹನ್ನೊಂದು ರಾಜ್ಯಗಳ ಮುಖ್ಯ ಮಂತ್ರಿಗಳು, ಪ್ರತಿನಿಧಿಗಳು ಆಚಾರ್ಯ ವಿನೋಬಾ ಅವರ ಸಮ್ಮುಖದಲ್ಲಿ ಸಮಾವೇಶ ಗೊಂಡಿದ್ದರು. ಗ್ರಾಮಸ್ವರಾಜ್ಯದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಪರಿವರ್ತನೆಗೆ ಶ್ರಮಿಸಲು ಶಾಂತಿಯುತ ರಾಷ್ಟ್ರೀಯ ಸಂಕಲ್ಪವೊಂದು ಘೋಷಿತವಾಯಿತು.

''ರಾಜಕೀಯ ಕ್ಷೇತ್ರ—ಈ ಮಾರ್ಗವನ್ನು ಅಂಗೀಕರಿಸಿರುವುದರಿಂದ ರಾಷ್ಟ್ರದ ನೀತಿ ಧೋರಣೆಗಳೆಲ್ಲ ಇನ್ನು ಮುಂದೆ ಗ್ರಾಮಾಭಿಮುಖವಾಗಿ ಹರಿದು ಸರ್ವೋದಯ ಸಮಾಜ ನಿರ್ಮಾಣದೆಡೆಗೆ ಸಾಗಬೇಕು. ಅದು ಮಾನವ ಇತಿಹಾಸದ ಮುನ್ನಡೆಯಾಗುತ್ತದೆ, ಸಮಾಜವಾದದ ವಿಕಸಿತ ದರ್ಶನವಾಗುತ್ತದೆ'' ಎಂದು ಜಯಪ್ರಕಾಶರು ತಮ್ಮ ಆನಂದವನ್ನು ವ್ಯಕ್ತಪಡಿಸಿದರು.

ನೆಹರೂ ಅವರ ಪಂಚಾಯತ್ ರಾಜ್ಯ, ಸಾಮುದಾಯಿಕ ಅಭಿವೃದ್ಧಿ ಯೋಜನೆ ಗಳು, ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಗ್ರಾಮ ಜೀವನವನ್ನು ಪುನರ್ ರಚಿಸುವಂತೆ ರೂಪಿಸಬೇಕು ಎಂದು ನಿರ್ಣಯಿಸಲಾಯ್ತು. ಆ ದಿಸೆಯಲ್ಲಿ ಸರ್ವೋದಯ ಕಾರ್ಯ ಕರ್ತರು ಸಂಪೂರ್ಣ ಸಹಕಾರ ನೀಡುವ ಸಂಕಲ್ಪ ಮಾಡಿದರು. ಕೇಂದ್ರೀಕರಣ ಗೊಂಡಿದ್ದ ರಾಜಕೀಯ ಶಕ್ತಿ ವಿಕೇಂದ್ರೀಕರಣಗೊಂಡು ಗ್ರಾಮಸ್ವರಾಜ್ಯದ ಕಡೆ ಸಾಗುವ ಸೂಚನೆಗಳು ಕಂಡುಬಂದವು.

ಆದರೆ ಕನಸು ನನಸಾಗುವ ಬದಲು ಒಡೆದು ಚೂರುಚೂರಾಯಿತು. ಅಧಿಕಾರ ಸ್ಪರ್ಧೆ, ಪಕ್ಷರಾಜಕೀಯ, ಹಣದ ರಾಜಕೀಯ, ಚುನಾವಣಾ ರಾಜಕೀಯಗಳ ಚದುರಂಗದಾಟದಲ್ಲಿ ದಿಕ್ಕುಕೆಟ್ಟು ರಾಜಕೀಯ ಕ್ಷೇತ್ರ ಅನೀತಿ ಮಾರ್ಗ ಹಿಡಿಯಿತು. ಸುಂದರ ಯೋಜನೆಗಳು ಈ ಬಿರುಗಾಳಿಗೆ ಸಿಕ್ಕಿ ನುಚ್ಚುನೂರಾಗುವುದನ್ನು ನೆಹರೂ ಸ್ವತಃ ಕಂಡರು. ಬಂಡವಾಳಶಾಹಿ, ನೌಕರಶಾಹಿ, ಸೈನಿಕಶಾಹಿಗಳಿಗೆ ಶರಣುಹೋದ ರಾಜಕೀಯ ವ್ಯವಸ್ಥೆ ಅಸಹಾಯಕತೆಯಿಂದ ಕುರುಡಾಯ್ತು. ನಾಲ್ಕು ಯೋಜನೆಗಳ ನಂತರವೂ ಪ್ರಾಥಮಿಕ ಅವಶ್ಯಕತೆಗಳಿಗೆ ಪರಿಹಾರ ಕಾಣದಾಯ್ತು. ಆರ್ಥಿಕವಾಗಿ ಅಗಾಧ ಅಂತರ ಬೆಳೆದು ಶ್ರೀಮಂತ ಅತಿ ಶ್ರೀಮಂತನೂ ಬಡವ ಕಡುಬಡವನೂ ಆದ. ಸಮಾಜವಾದ ಮರೀಚಿಕೆಯಾಯ್ತು.

ಜಯಪ್ರಕಾಶರು ಈ ಕುರಿತು ಸಾಕಷ್ಟು ಬರೆದರು. ಪ್ರಧಾನಿಯೊಂದಿಗೆ ಚರ್ಚಿಸಿ 'ಸರ್ವೋದಯಕ್ಕೆ ಮರಳಿ, ಸರ್ವೋದಯ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಿ. ಇಲ್ಲದಿದ್ದರೆ ಭಾರತದ ಅಸಂಖ್ಯಾತ ಹಳ್ಳಿಗಳ ಜೀವನ ಶೋಷಣೆಯ ಕೂಪಗಳಾಗಿ ನರಕಸದೃಶವಾಗುತ್ತವೆ, ನಾಶದ ದವಡೆಗೆ ಸಾಗುತ್ತವೆ. ಸ್ವಾತಂತ್ರ್ಯದ ಜೀವನದಿ ಬತ್ತಿ ಒಣಗಿಹೋಗುತ್ತದೆ' ಎಂದು ಎಚ್ಚರಿಸಿದರು. ಈ ಸಂದೇಶವನ್ನು ಹಳ್ಳಿಹಳ್ಳಿಗಳಿಗೆ ಪಾದಯಾತ್ರೆ ಮಾಡಿ ಮನವರಿಕೆ ಮಾಡಿದರು. ಪ್ರತಿಯೊಂದು ಚುನಾವಣೆಯ ಸಮಯದಲ್ಲೂ ನಡೆಯುತ್ತಿದ್ದ ಅನೀತಿ ಅವ್ಯವಹಾರಗಳನ್ನು ಖಂಡಿಸಿದರು. ಪಕ್ಷಗಳ ಪೈಪೋಟಿಯಿಂದ ರಾಷ್ಟ್ರ ಅಧೋಗತಿಗೆ ಇಳಿಯುತ್ತಿರುವುದನ್ನು ತಿಳಿಯಾಗಿ ವಿವರಿಸಿದರು. ಆದರೆ ಅವರ ಕೂಗು ಅರಣ್ಯ ರೋಧನವಾಯ್ತು. ಜನತೆ ಕಿವಿ ಇದ್ದೂ ಕಿವುಡರಾದರೆ ಅಧಿಕಾರಿಗಳು, ರಾಜಕಾರಣಿಗಳು ಜಾಣ ಕಿವುಡರಾದರು. ಕ್ರೌರ್ಯ ಬೆಳೆಯುತ್ತಲೇ ಹೋಯ್ತು.

ಚಂಬಲ್ ಕಣಿವೆಗೆ ಚಿಮ್ಮಿದ ಬೆಳಕು :

ಈ ನಡುವೆ ೧೯೬೨ ರಿಂದ ೧೯೭೨ ರ ಅವಧಿಯನ್ನು ಜಯಪ್ರಕಾಶರ ಒಂದು ದಶಕದ ಜೀವನ ಪತಿತೋದ್ಧಾರಕ್ಕೆ ಮೀಸಲಾಗಿದೆ. ಸ್ವಭಾವತಃ ಯಾರೂ ದುಷ್ಟರಲ್ಲ. ಅನಿವಾರ್ಯ ಕಾರಣಗಳಿಂದ, ಘಟನೆಗಳಿಂದ, ಸಂದರ್ಭಗಳಿಂದ ಪ್ರೇರಿತರಾಗಿ ದುಷ್ಟ ಹಾದಿ ಹಿಡಿದವರ ಹೃದಯದಲ್ಲೂ ಕರುಣೆಯ ಹಣತೆ ಉರಿಯುತ್ತಿರುತ್ತದೆ. ಅದು ಪ್ರಕೃತಿ ಸಕಲರಿಗೂ ನೀಡಿರುವ ವರ. ಅದು ಎಂದೂ ನಂದುವುದಿಲ್ಲ. ಅದಕ್ಕೆ ಮಂಕು ಕವಿಯಬಹುದು ಅಷ್ಟೆ.. ಹಾಗೆ ಕವಿದ ಮಂಕನ್ನು ತೊಡೆದುಹಾಕಿದರೆ ಅದೂ ಕೂಡ ಬೆಳಕನ್ನು ಬೀರಬಲ್ಲದು. ಈ ಸತ್ಯವನ್ನು ಜಗತ್ತಿಗೆ ಬಂದ ಅನೇಕ ದಾರ್ಶನಿಕರು ತೋರಿಸಿಕೊಟ್ಟಿದ್ದಾರೆ. ಅಂತಹ ದಾರ್ಶನಿಕರಲ್ಲಿ ಪ್ರಮುಖ ಉದಾಹರಣೆ ಎಂದರೆ ಗೌತಮಬುದ್ಧ.

ಬುದ್ಧನ ಶಕ್ತಿಯನ್ನು ಒಳಗೊಳ್ಳಬೇಕಾದರೆ ಅಂತರಂಗದಲ್ಲಿ ಧ್ಯಾನಸ್ಥವಾಗ ಬೇಕಾಗುತ್ತದೆ. ಹೃದಯವನ್ನು ಕರುಣೆಯ ಕಡಲಾಗಿಸಿಕೊಳ್ಳಬೇಕಾಗುತ್ತದೆ. ಅವನು ಅದನ್ನು ಸಾಧಿಸಿದ್ದನಾದ ಕಾರಣ ಅವನ ದರ್ಶನ ಮಾತ್ರದಿಂದ ಕುಪ್ರಸಿದ್ಧ ಡಕಾಯಿತನಾಗಿದ್ದ

'ಅಂಗುಲೀಮಾಲ' ಹಸುಗೂಸಿನಂತೆ ಶರಣಾದ. ಅನೇಕ ಚಕ್ರವರ್ತಿಗಳೂ ಕೂಡ ಕತ್ತಿಯನ್ನು ಅವನ ಪದತಲದಲ್ಲಿ ಇರಿಸಿ ಹತ್ತಿಯಂತೆ ಹಗುರಾದರು.

ಸಕಲ ಜೀವರ ಒಳಿತನ್ನೇ ತಮ್ಮ ಉಸಿರಾಗಿಸಿಕೊಂಡು ನೊಂದು ಬೆಂದವರೊಂದಿಗೆ ಒಂದಾಗಿ ಅವರ ಏಳ್ಗೆಗಾಗಿ ತಪಿಸುತ್ತಿದ್ದ ಜಯಪ್ರಕಾಶರ ಜೀವನ ಬಹಿರಂಗದಲ್ಲಿ ಲೌಕಿಕವಾಗಿ ಕಂಡರೂ ಅಂತರಂಗದಲ್ಲಿ ತಪೋಮಯವಾಗಿ ಕರುಣೆಯ ಕಡಲಾಗಿತ್ತು. ವಿನೋಬಾ ಅವರ ಜೀವನ ಸ್ಫೂರ್ತಿಯ ಹಿನ್ನೆಲೆಯಲ್ಲಿ ಕಲ್ಲು ಹೃದಯದಲ್ಲೂ ಕರುಣೆಯ ಹೊನಲು ಹೊಮ್ಮಿಸುವ ಕೈಂಕರ್ಯದಲ್ಲಿ ತೊಡಗಿದರು. ಅದರ ಪರಿಣಾಮವಾಗಿ ಅವರ ನೈತಿಕ ಶಕ್ತಿಗೆ ಮಣಿದು ಭೂಗತ ನಾಗಾಗಳು ಶರಣು ಬಂದರೆ ನಕ್ಸಲೀಯರು ಹಾಗೂ ಚಂಬಲ್ ಕಣಿವೆಯ ದರೋಡೆಕೋರರು ಮನಃಪರಿವರ್ತನೆಯಾಗಿ ಶರಣಾದರು.

ಪ್ರತಿಯೊಂದು ರಾಷ್ಟ್ರಗಳೂ ದುಷ್ಟರ ದಮನಕ್ಕಾಗಿ ಕೋಟ್ಯಂತರ ರೂಪಾಯಿ ಗಳನ್ನು ಖರ್ಚುಮಾಡಿಯೂ ಯಶಸ್ವಿ ಆಗದಿರುವುದನ್ನು ನಾವು ಕಾಣುತ್ತಿದ್ದೇವೆ. ಕರ್ನಾಟಕ ಹಾಗೂ ತಮಿಳುನಾಡಿನ ಕುಪ್ರಸಿದ್ಧ ಕಾಡುಗಳ್ಳ ವೀರಪ್ಪನ್ ಇದಕ್ಕೆ ಜ್ವಲಂತ ಉದಾಹರಣೆ ಯಾಗಿದ್ದಾನೆ. ಎರಡೂ ರಾಜ್ಯಗಳ ಶ್ರಮದ ಜೊತೆಗೆ ಭಾರತದ ಗಡಿ ರಕ್ಷಣಾಪಡೆಗಳು (BSF) ಬಂದು ಹೋದರೂ ಅವನನ್ನು ಹಿಡಿಯಲಾಗಲಿಲ್ಲ ಎನ್ನುವುದು ಈ ಸಮಸ್ಯೆಯ ಘೋರ ಸ್ವರೂಪವನ್ನು ಮನದಟ್ಟು ಮಾಡುತ್ತದೆ. ಇಂತಹ ಕ್ರೂರ ಕಠಿಣ ಸಮಸ್ಯೆಗಳನ್ನು ವಿನೋಬಾ, ಜಯಪ್ರಕಾಶ ನಾರಾಯಣ್ ತಮ್ಮ ಶುದ್ಧ ಜೀವನದಿಂದ ಬರಬಹುದಾದ ನೈತಿಕ ಹಾಗೂ ಆತ್ಮ ಬಲದಿಂದ ಮಾಡಿ ತೋರಿಸಿದರು.

ಚಂಬಲ್‌ಕಣಿವೆ ಮಧ್ಯಪ್ರದೇಶ ರಾಜ್ಯದಲ್ಲಿರುವ ಕುಪ್ರಸಿದ್ಧಿಗೆ ಹೆಸರುವಾಸಿಯಾದ ಪ್ರದೇಶ. ಭಾರತಕ್ಕೆ ಅಪಕೀರ್ತಿ ತರುವ ಹೆಚ್ಚು ಡಕಾಯಿತಿ ನಡೆಯುವುದು ಆ ಪ್ರದೇಶದಲ್ಲೆ. ಮಾನ್‌ಸಿಂಗ್, ಮಾಧೋಸಿಂಗ್, ಲುಕ್ಕಾ ಮುಂತಾದವರು ಡಕಾಯಿತರಲ್ಲಿ ಹೆಸರುವಾಸಿ ಯಾದವರು. ಇವರ ಕೈಕೆಳಗೆ ಅಸಂಖ್ಯಾತ ಡಕಾಯಿತರ ಗುಂಪುಗುಂಪೇ ಕೆಲಸ ಮಾಡುತ್ತದೆ. ಮಧ್ಯಪ್ರದೇಶದ ಪ್ರತಿಯೊಂದು ಮನೆಯ ಒಬ್ಬ ರೈತ, ಒಬ್ಬ ಸೈನಿಕ ಒಬ್ಬ ಡಕಾಯಿತ ಇರುತ್ತಾನೆನ್ನುವುದು ಅಲ್ಲಿಯ ಪ್ರತೀತಿ. ಅಷ್ಟು ವ್ಯಾಪಕವಾಗಿದೆ ಅಲ್ಲಿ ಡಕಾಯಿತಿ.

ಡಕಾಯಿತರ ಪ್ರಾಭಲ್ಯವನ್ನು ತಗ್ಗಿಸಬೇಕೆಂಬ ಯತ್ನ ಬಾಬರನ ಕಾಲದಿಂದಲೂ ನಡೆಯುತ್ತಾ ಬಂದಿದೆ. ಆದರೆ ಅದು ಕುಗ್ಗುವ ಬದಲು ಹಿಗ್ಗುತ್ತಲೇ ಸಾಗಿದೆ. ಆಧುನಿಕ ಕಾಲದಲ್ಲೂ ಸರ್ಕಾರಗಳ ಅನುಚಿತ ಕಾರ್ಯಗಳಿಂದಾಗಿ ನಕ್ಸಲೀಯರು ಹುಟ್ಟಿಕೊಳ್ಳುತ್ತಿದ್ದಾರೆ. ದರೋಡೆ, ಕೊಲೆ, ಸುಲಿಗೆಗಳು ವ್ಯಾಪಕವಾಗುತ್ತಿವೆ. ಕುಸಿಯುತ್ತಿರುವ ನೈತಿಕತೆ, ಹೆಚ್ಚುತ್ತಿರುವ ಸ್ವಾರ್ಥ, ಅಧಿಕಾರದ ಆಸೆ, ಹಣದ ವ್ಯಾಮೋಹಗಳು ಇದಕ್ಕೆ ಪ್ರೇರಣೆಯಾಗಿವೆ. ಮುಖ್ಯ ವಾದದ್ದೆಂದರೆ ಅಸಮಾನತೆ.

೧೯೬೦ ಒಂದು ಪ್ರಮುಖ ವರ್ಷ. ಕ್ರೌರ್ಯ ಮತ್ತು ಕರುಣೆಗಳು ಮುಖಾ ಮುಖಿಯಾದ ವರ್ಷ. ಸಂತ ವಿನೋಬಾ ಅವರು ಡಕಾಯಿತ ನಾಯಕರನ್ನು ಮುಖತಹ

ಭೇಟಿ ಮಾಡಿದರು. ಅವರ ಸ್ಥಿತಿಯನ್ನು, ಕಷ್ಟಸುಖಗಳನ್ನು ಕಣ್ಣಾರೆ ಕಂಡರು. ಮಮತೆಯಿಂದ ಮಾತನಾಡಿಸಿದರು.

''ನಿಮ್ಮನ್ನು ಕಂಡು ಜನತೆ ಹಾಗೂ ಸರ್ಕಾರ ಭಯಭೀತವಾಗಿದೆ. ಪೊಲೀಸರು, ಮಿಲಿಟರಿಯವರು ನಿಮ್ಮನ್ನು ಕಾಡುಮೃಗಗಳಂತೆ ಬೇಟೆಯಾಡುತ್ತಿದ್ದಾರೆ. ನಿಮ್ಮನ್ನು ಹಿಡಿದುಕೊಟ್ಟವರಿಗೆ, ಹೊಡೆದುಹಾಕಿದವರಿಗೆ ಸಾವಿರಾರು, ಲಕ್ಷಾಂತರ ರೂಪಾಯಿಗಳ ಬಹುಮಾನಗಳನ್ನು ಸರ್ಕಾರ ಘೋಷಿಸಿದೆ. ಹೀಗೆ ಕದ್ದು ಬದುಕುವುದು ಒಂದು ಬದುಕೆ? ನಿಮ್ಮಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಸ್ಟೇನ್‌ಗನ್, ಬ್ರೆನ್‌ಗನ್, ಟೆಲಿಸ್ಕೋಪಿಕ್‌ಗನ್ ಮುಂತಾದವುಗಳಿವೆ. ಸದಾ ಯುದ್ಧ ಸನ್ನದ್ಧರಾಗಿಯೇ ಇರಬೇಕಾದ ಅನಿವಾರ್ಯ ಪರಿಸ್ಥಿತಿ ನಿಮ್ಮದಾಗಿದೆ. ನೀವು ಯುದ್ಧ ಸನ್ನದ್ಧರೂ ಆಗಿದ್ದೀರಿ. ಯಾವ ಕ್ಷಣದಲ್ಲಿ ಬೇಕಾದರೂ ನೀವು ನನ್ನ ಮೇಲೆ ಗುಂಡು ಹಾರಿಸಬಹುದು. ಆದರೂ ನಿಮ್ಮನ್ನು ಕಂಡು ನನಗೆ ಭಯವಾಗುತ್ತಿಲ್ಲ. ಬದಲಿಗೆ ಮರುಕವೇ ಆಗುತ್ತಿದೆ. ನೀವು ಜೀವಗಳ್ಳರಾಗಿ ಕಣಿವೆ ಬಿದ್ದು ಓಡಾಡುತ್ತಿದ್ದೀರಿ. ಮನೆ, ಮಠ, ಹೆಂಡತಿ ಮಕ್ಕಳನ್ನು ತೊರೆದು ಅನಾಥರಂತೆ ಜೀವಿಸುತ್ತಿದ್ದೀರಿ. ತಂದೆ ತಾಯಿಗಳಿದ್ದೂ ತಬ್ಬಲಿಗಳಾಗಿ ಬದುಕುತ್ತಿದ್ದೀರಿ. ಇದು ವೀರರು ಬದುಕುವ ಬಾಳಲ್ಲ, ಹೇಡಿಗಳ ಬಾಳು. ವೀರನಾದವನಿಗೆ ಸಾವು ಒಮ್ಮೆ ಮಾತ್ರ. ಹೇಡಿಯಾದವನಿಗೆ ಕ್ಷಣಕ್ಷಣವೂ ಸಾವು. ಆದ್ದರಿಂದ ನೀವು ವೀರರೋ ಹೇಡಿಗಳೋ ಎಂಬುದನ್ನು ನೀವೇ ನಿರ್ಧರಿಸಿ. ಒಂದು ತಪ್ಪು ಮಾಡಿ ಅದರಿಂದ ಪಾರಾಗಲು ನೂರು ತಪ್ಪುಗಳನ್ನು ಮಾಡುತ್ತಿದ್ದೀರಿ. ನೀವು ಧೈರ್ಯವಾಗಿ ಹೊರಬಂದು ಮಾಡಿರುವ ತಪ್ಪನ್ನು ಒಪ್ಪಿಕೊಂಡು ಕೊಡುವ ಶಿಕ್ಷೆಯನ್ನು ವೀರರಾಗಿ ಅನುಭವಿಸಿ. ಈ ನರಕ ಜೀವನದಿಂದ ಮುಕ್ತಿಪಡೆದು, ಯೋಗ್ಯ ಪ್ರಜೆಗಳಾಗಿ ಬದುಕಲು ತೀರ್ಮಾನ ತೆಗೆದುಕೊಳ್ಳಿ. ಇದರಿಂದ ನಿಮ್ಮ ತಂದೆ ತಾಯಿ, ಅಣ್ಣ ತಮ್ಮ, ಅಕ್ಕ ತಂಗಿ, ಬಂಧು ಬಳಗ ಇವರಿಗೆಲ್ಲ ಅಷ್ಟೇ ಏಕೆ ಭಾರತಮಾತೆಗೆ ಸಂತಸವಾಗುತ್ತದೆ''. ವಿನೋಬಾಜಿಯವರ ಮಾತುಗಳನ್ನು ಕೇಳಿ ಮೌನ ತಾಳಿದರು. ವಿನೋಬಾಜಿಯವರ ಒಣಕಲು ದೇಹದೊಳಗೆ ಬೆಳಗುತ್ತಿದ್ದ ಪ್ರೀತಿಯ ಹೊನಲನ್ನು ಕಂಡರು. ಡಕಾಯಿತ ತಂಡದ ಮುಖ್ಯಸ್ಥರು ಸಹಚರರೊಂದಿಗೆ ಆಡಳಿತಕ್ಕೆ ಶರಣಾಗಲು ಮುಂದೆ ಬಂದರು. ಹಾಗೆ ಶರಣಾದ ಇಪ್ಪತ್ತ ನಾಲ್ಕು ಜನ ಡಕಾಯಿತರ ಮನಃಪರಿವರ್ತನೆಯ ಪವಾಡವನ್ನು ಕಂಡ ಜಯಪ್ರಕಾಶ್ ಅವರು ಈ ಸಮಸ್ಯೆಯನ್ನು ಕೈಗೆತ್ತಿಕೊಂಡರು.

ನಕ್ಸಲೀಯರು ಜೂನ್ ಐದರಂದು ಜಿಲ್ಲಾ ಸರ್ವೋದಯ ಮಂಡಲಿಯ ಅಧ್ಯಕ್ಷರಾದ ಬದರೀನಾರಾಯಣ ಸಿಂಹ ಹಾಗೂ ಏಳರಂದು ಕಾರ್ಯದರ್ಶಿ ಗೋಪಾಲ ಮಿಶ್ರರನ್ನು ಕೊಲೆಮಾಡುವುದಾಗಿ ಪತ್ರಮುಖೇನ ತಿಳಿಸಿದ್ದರು. ಈ ಕಂಟಕವನ್ನು ಜಯಪ್ರಕಾಶರು ವರದಾನವೆಂದೇ ಭಾವಿಸಿ ಕಾರ್ಯತತ್ಪರರಾದರು. ನಕ್ಸಲೀಯರ ಮುಖ್ಯ ಕೇಂದ್ರಗಳಾಗಿದ್ದ ಪ್ರಹ್ಲಾದಪುರ ಹಾಗೂ ಛಪ್ರಾ ಪಂಚಾಯತ್ ಪ್ರದೇಶಗಳಲ್ಲಿ ಜಯಪ್ರಕಾಶ ನಾರಾಯಣ್ ಅವರು ತಮ್ಮ ಸಹಧರ್ಮಿಣಿ ಪ್ರಭಾದೇವಿಯವರೊಡಗೂಡಿ ಶಾಂತಿಯ ದೂತರಾಗಿ ಸಂಚರಿಸಿದರು. ನಕ್ಸಲೀಯರೊಂದಿಗೆ, ಅವರ ಕುಟುಂಬದವರೊಂದಿಗೆ,

ನಕ್ಸಲೀಯರಿಂದ ದೌರ್ಜನ್ಯಕ್ಕೊಳಗಾದ ಕುಟುಂಬಗಳವರೊಂದಿಗೆ ಸಂಪರ್ಕ ಬೆಳೆಸಿ ಅವರ ನೋವು ಸಂಕಟಗಳನ್ನು ಅರಿತುಕೊಂಡು ಸಾಂತ್ವನ ಹೇಳಿದರು. ನಾಲ್ಕುನೂರು ಚದರ ಮೈಲಿಯಲ್ಲಿ ಹರಡಿದ್ದ ಡಕಾಯಿತರ ಸಮೂಹಗಳನ್ನು ಸಂದರ್ಶಿಸಿ ಅವರೆಲ್ಲರ ಪರಿವರ್ತನೆಗೆ ಶ್ರಮಿಸಿದರು. ಅಸಂಖ್ಯಾತ ನಕ್ಸಲೀಯರು, ಡಕಾಯಿತರು ಶರಣಾದರು. ಬಂದೂಕುಗಳನ್ನು, ಎಲ್ಲ ಅಸ್ತ್ರಗಳನ್ನು ಅವರ ಪದತಲದಲ್ಲಿ ಸಮರ್ಪಿಸಿದರು. ಸರ್ಕಾರದ ಸಹಾಯದಿಂದ ಬಯಲು ಬಂದೀಖಾನೆ ನಿರ್ಮಾಣ ಮಾಡಿಸಿ ಶಿಕ್ಷೆಗೊಳಗಾದ ಡಕಾಯಿತರಿಗೆ ಉತ್ತಮ ಪ್ರಜೆಗಳಾಗಲು ಅಗತ್ಯವಾದ ಶಿಕ್ಷಣ ನೀಡಲು ವ್ಯವಸ್ಥೆಗೊಳಿಸಲಾಯಿತು. ಅವರಿಗಾಗಿ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಯ್ತು. ಡಕಾಯಿತರ ಮಕ್ಕಳಿಗೆ ವಸತಿ ಶಾಲೆಗಳನ್ನು ನಿರ್ಮಿಸಲಾಯ್ತು. ಇವುಗಳ ಮೇಲ್ವಿಚಾರಣೆಗಾಗಿ 'ಗಾಂಧಿ ಶಾಂತಿ ಪ್ರತಿಷ್ಠಾನ ಕೇಂದ್ರ'ವನ್ನು ತೆರೆಯಲಾಯ್ತು. ಈಗಲೂ ಈ ಸಂಸ್ಥೆ ಕಾರ್ಯನಿರತವಾಗಿದೆ.

ಈ ರೋಮಾಂಚಕಾರಿ ಅಭಿಯಾನದ ಒಂದು ಘಟನೆ ಮನನೀಯವಾಗಿದೆ. ಅದು ಜಯಪ್ರಕಾಶರ 'ಫೇಸ್ ಟು ಫೇಸ್' ಕೃತಿಯಲ್ಲಿ ಉಲ್ಲೇಖವಾಗಿದೆ.

೧೯೭೧ರ ಒಂದು ಮಧ್ಯಾಹ್ನ ನನ್ನ ಹೆಸರು 'ರಾಮಸಿಂಹ' ಎಂದು ಹೇಳಿಕೊಂಡ ವ್ಯಕ್ತಿ ಜಯಪ್ರಕಾಶಕರಿಗೆ 'ಚಂಬಲ್ ಕಣಿವೆಯ ದರೋಡೆಕಾರರು ನಿಮ್ಮ ಎದುರಿಗೆ ಆತ್ಮ ಸಮರ್ಪಣೆ ಮಾಡಬೇಕೆಂದಿದ್ದಾರೆ'' ಎಂದು ತಿಳಿಸಿದ. ''ವಿನೋಬ ಅವರನ್ನು ಕಾಣು'' ಎಂದರು ಜಯಪ್ರಕಾಶರು. ಇದಕ್ಕೆ ಒಪ್ಪದ ಆತ ಅವರನ್ನು ಅಡ್ಡಗಟ್ಟಿ ಹೇಳಿದ ''ಬಾಬೂಜಿ, ನನ್ನ ಮಾತು ಕೇಳಿ. ನೀವು ಈ ಸಮಸ್ಯೆಯನ್ನು ಕೈಗೆತ್ತಿಕೊಂಡರೆ ಅವರಿವರೆನ್ನದೆ ದಂಗೆ ಕೋರರೆಲ್ಲ ಆತ್ಮ ಸಮರ್ಪಣೆ ಮಾಡುತ್ತಾರೆ. ಈ ಕ್ಷೇತ್ರದಲ್ಲಿ ದರೋಡೆಕೋರರ ಸಮಸ್ಯೆ ಕೊನೆಗೊಳ್ಳುತ್ತದೆ.''

''ನೋಡಿ, ನಿಮ್ಮ ಮಾತುಗಳಲ್ಲಿ ನನಗೆ ನಂಬಿಕೆ ಇಲ್ಲ. ನಾನು ಈ ಮೊದಲು ಹೊತ್ತುಕೊಂಡಿದ್ದ ಹೊಣೆಗಳನ್ನೇ ಕೈಬಿಡುತ್ತಿದ್ದೇನೆ. ನಿಮ್ಮ ಈ ಮತ್ತೊಂದು ಹೊಣೆ ಹೊರಲು ನನ್ನಿಂದಾಗದು.''

''ಆದರೆ ಬಾಬೂಜಿ....''

''ವಿನೋಬಾ ಅವರ ಬಳಿಗೆ ಹೋಗಿ ಎಂದು ಹೇಳಿದೆನಲ್ಲ.''

''ಸರಿ, ನಿಮ್ಮನ್ನು ಕಾಣಲು ವಿನೋಬಾ ಅವರೂ ಹೇಳಿದ್ದಾರೆ.''

''ಏನೆಂದಿರಿ?''

''ಇದೂ ಸರ್ವೋದಯದ ಕೆಲಸವೇ ಅಲ್ಲವೆ?''

''ಅಲ್ಲ, ನೀವು ಹೋಗಿ''

''ಬಾಬೂಜೀ ನಾನೇ ಮಾಧೋಸಿಂಹ''

‘‘ನಿಮ್ಮನ್ನು ಹಿಡಿದುಕೊಟ್ಟರೆ ಒಂದೂವರೆ ಲಕ್ಷ ಇನಾಮು ಕೊಡುವುದಾಗಿ ಘೋಷಿಸಲಾಗಿದೆ’’

‘‘ಹೌದು, ಬಾಬೂಜಿ’’

‘‘ನೀವೇಕೆ ಇಂಥ ಅಪಾಯದ ಕ್ರಮವನ್ನು ಕೈಗೊಂಡಿರಿ ?’’

‘‘ನಿಮ್ಮ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ, ಆದ್ದರಿಂದ’’

ಜಯಪ್ರಕಾಶರಿಗೆ ಅನ್ಯಮಾರ್ಗವಿಲ್ಲದಾಯ್ತು. ಮಾಧೋಸಿಂಹ ಆ ಕ್ಷಣದಲ್ಲೆ ಜಯಪ್ರಕಾಶರಿಗೆ ಆತ್ಮಸಮರ್ಪಣೆ ಮಾಡಿಕೊಂಡ. ಆತನನ್ನು ತಮ್ಮ ಬಳಿಯೇ ಇರಿಸಿಕೊಂಡ ಜಯಪ್ರಕಾಶರು ಪ್ರಭಾವತಿಯವರನ್ನುಳಿದು ಈತನ ಸುಳಿವನ್ನು ಯಾರಿಗೂ ಹೇಳಲಿಲ್ಲ. ಮಾಧೋಸಿಂಹ ಮುಂದಿನ ಚರ್ಚೆಗೆ ಮುನ್ನುಡಿ ಹಾಕಿದ.

‘‘ವಿನೋಬಾಜಿ ಅವರು ಸಂತರು. ಅರವತ್ತರಲ್ಲಿ ಅವರು ಆತ್ಮಸಮರ್ಪಣೆಯ ಹೊಣೆಯನ್ನು ಹೊತ್ತುಕೊಂಡಿದ್ದರು.’’

‘‘ಆದರೆ ನಾನು ವಿನೋಬಾ ಅಲ್ಲ. ಒಬ್ಬ ಸಾಮಾನ್ಯ ಮನುಷ್ಯ. ನಿಮ್ಮ ಷರತ್ತುಗಳೇನು ಎಂಬುದನ್ನು ತಿಳಿಸಿ.’’

‘‘ಗಲ್ಲು ಶಿಕ್ಷೆಯೊಂದನ್ನು ಬಿಟ್ಟು ಏನು ಶಿಕ್ಷೆಯನ್ನು ಬೇಕಾದರೂ ವಿಧಿಸಲಿ. ಇದಿಷ್ಟೇ ನಮ್ಮ ಇಚ್ಛೆ’’

ಮಾಧೋಸಿಂಹನ ಷರತ್ತೂ ಉಚಿತವಾದುದಾಗಿತ್ತು. ಆದ್ದರಿಂದ ಜಯಪ್ರಕಾಶರು ಸಂಧಾನದ ಹೊರೆಹೊತ್ತರು. ಗಯಾದ ಆಶ್ರಮದಲ್ಲಿ ಅವನನ್ನು ಅಡಗಿಸಿ ಇಟ್ಟರು. ಕೇಂದ್ರ ಗೃಹಮಂತ್ರಿ, ಮಧ್ಯಪ್ರದೇಶ, ರಾಜಾಸ್ಥಾನದ ಮುಖ್ಯಮಂತ್ರಿಗಳೊಂದಿಗೆ ಪತ್ರಿಸಿ ಸಂಧಾನದ ಮೂಲಕ ಸಮಸ್ಯೆಯನ್ನು ಸುಗಮವಾಗಿ ಇತ್ಯರ್ಥಪಡಿಸಿದರು.

೧೯೭೨ರ ಏಪ್ರಿಲ್ ೧೪ರಂದು ಸಾರ್ವಜನಿಕ ಸಭೆಯಲ್ಲಿ ಮೋಹರಸಿಂಹ, ಪಂಚಮಸಿಂಹ, ಸರೂಪಸಿಂಹ, ತಿಲಕಸಿಂಹ ಮತ್ತು ನರೇಶಸಿಂಹರ ದಳದ ಎಂಭತ್ತೆರಡು ಮಂದಿ ೧೬ರಂದು ಮಾಧೋಸಿಂಹ, ಮಾಖನಸಿಂಹ, ಜಗಜೀತ್‌ಸಿಂಹ, ಕಲ್ಯಾಣಸಿಂಹ, ರೂಪಸಿಂಹ, ಜಿಯಾಲಾಲ್, ಹರಿವಿಲಾಸ್ ಮುಂತಾದವರ ತಂಡದ ಎಂಭತ್ತೊಂದು ಮಂದಿ, ೧೭ರಂದು ಗ್ವಾಲಿಯರ್‌ನಲ್ಲಿ ನಾಥೂ ಸಿಂಹನ ತಂಡದವರು ಜಯಪ್ರಕಾಶರ ಸಮ್ಮುಖದಲ್ಲಿ ಶರಣಾದರು.

ಸಂದರ್ಶಿಸಿದ ಬಿ.ಬಿ.ಸಿ.ಯವರಿಗೆ ಮಾಧೋಸಿಂಹ ಹೇಳಿದ ‘‘ಜಯಪ್ರಕಾಶರು ಬಾಬೂಜಿ ಮಾತ್ರವಲ್ಲ ಅವರು ಜಯದ ಪ್ರಕಾಶ. ಅಹಿಂಸೆ, ಪ್ರೇಮ ಹಾಗೂ ಸಹಾನುಭೂತಿಗಳ ಸಾಕಾರ ಮೂರ್ತಿ. ಅವರು ಕೇವಲ ಜಯಪ್ರಕಾಶರಲ್ಲ, ಮನುಕುಲದ ಬೆಳಕು.’’

ಸಂಪೂರ್ಣ ಕ್ರಾಂತಿ

ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ?

ಕುವೆಂಪು.

ಸ್ವಾತಂತ್ರ್ಯ ಬಂದು ಇಪ್ಪತ್ತೆಂಟು ವರ್ಷಗಳು ಕಳೆದರೂ ಭಾರತದ ಕನಸು ನನಸಾಗುವ ಬದಲು ಒಡೆದು ಛಿದ್ರಛಿದ್ರವಾಯ್ತು. ಆಳುವ ಪಕ್ಷಗಳ ದುರಾಡಳಿತ, ಸ್ವಾರ್ಥ, ಸ್ವಜನಪಕ್ಷಪಾತಗಳಿಂದ ಭ್ರಷ್ಟಾಚಾರ ಬೃಹದಾಕಾರವಾಗಿ ಬೆಳೆಯಹತ್ತಿತ್ತು. ಅಧಿಕಾರಶಾಹಿ ಕ್ರೂರವಾಯ್ತು. ರಾಜಕೀಯ, ಭ್ರಷ್ಟಾಚಾರದೊಂದಿಗೆ ಕೈಜೋಡಿಸಿತು. ಒಂದು ಕಡೆ ಶ್ರೀಮಂತಿಕೆಯ ಲೋಲುಪತೆ ತಾಂಡವವಾಡುತ್ತಿದ್ದರೆ ಮತ್ತೊಂದು ಕಡೆ ಬಡತನದ ಬೇಗೆಯಿಂದ ಜನ ಕಂಗಾಲಾದರು. ಬೆಲೆಯೇರಿಕೆಯ ಭಾರದಿಂದ ಬೆನ್ನು ಬಾಗಿತ್ತು. ಕಛೇರಿಗಳಲ್ಲಿ, ಬ್ಯಾಂಕುಗಳಲ್ಲಿ, ಟಿಕೆಟ್ಟು ಕೊಳ್ಳುವಲ್ಲಿ ಎಲ್ಲೆಂದರಲ್ಲಿ ಲಂಚದ ಹಾವಳಿ. ಶಿಕ್ಷಣ ಸಂಸ್ಥೆಗಳು ಸುಲಿಗೆಯ ತಾಣಗಳಾಗಿ ಪರಿಣಮಿಸಿದುವು. ಯುವಜನತೆಯ ಭವಿಷ್ಯ ಅಂಧಕಾರದಲ್ಲಿ ಮುಳುಗಿತು. ಕೇವಲ ಗುಲಾಮತನದ ಶಿಕ್ಷಣ! ನಿರುದ್ಯೋಗ ಕೇಕೆಹಾಕಿ ಕುಣಿಯ ಹತ್ತಿತು.

''ಬಡತನ ತೊಲಗಿಸಿ, ಉದ್ಯೋಗ ನಿರ್ಮಿಸಿ' ಘೋಷಣೆಗಳನ್ನು ಮುಗಿಲು ಮುಟ್ಟುವಂತೆ ಕೂಗಲಾಯ್ತು. ಭೂಹೀನತೆ ತಪ್ಪಿಸುವುದಕ್ಕಾಗಿ ಭೂಮಿತಿ ಶಾಸನಗಳು ಬಂದರೂ ಮೊದಲಿಗಿಂತ ಹೆಚ್ಚು ರೈತರು ಭೂ ಹೀನರಾಗಿದ್ದಾರೆ. ಯೋಜನೆಗಳ ಹೆಸರಿನಲ್ಲಿ ಶ್ರೀಮಂತರಿಗೆ ಕೆಂಪು ಹಾಸು ಹಾಸಿ ಸಣ್ಣಸಣ್ಣ ರೈತರಿಂದ ಭೂಮಿಯನ್ನು ಕಿತ್ತುಕೊಂಡು ಒಕ್ಕಲೆಬ್ಬಿಸಿದ್ದಾರೆ. ಪ್ರಾಥಮಿಕ ಅವಶ್ಯಕತೆಗಳೂ ಇಲ್ಲದೆ ಜನ ಕಂಗಾಲಾಗಿದ್ದಾರೆ. ವಿದ್ಯಾರ್ಥಿ ಸಮೂಹ ಅಶಾಂತಿಯ ಕಡಲಲ್ಲಿ ಮುಳುಗಿದೆ. ಒಂದು ಕಡೆ ಗಗನಚುಂಬಿ ಕಟ್ಟಡಗಳ ಅಟ್ಟಹಾಸದ ಕೂಗು ಇನ್ನೊಂದುಕಡೆ ಹಸಿದ ಹೊಟ್ಟೆಗಳ ಆರ್ತನಾದ! ಹಳ್ಳಿಗಳು ರಾಜಕೀಯ ಪಕ್ಷಗಳ ಚದುರಂಗದಾಟಕ್ಕೆ ಸಿಕ್ಕಿ ಎಲ್ಲೆಲ್ಲೂ ಗಲಭೆ, ದೊಂಬಿ, ಘರ್ಷಣೆಗಳು. ಸ್ವತಂತ್ರ ಭಾರತದ ದಾರುಣ ಪರಿಸ್ಥಿತಿಯ ಅಲೆಯ ಹೊಡೆತ!

ಕರೆಯುತಿವೆ ಕೈ ಬೀಸಿ ಅಲೆಗಳಿಂದು
ಹೇಗಿರಲಿ ನಾನು ದಡದಲ್ಲೆ ನಿಂದು?

ವಿವಿಧ ಸಮಸ್ಯೆಯ ಅಲೆಗಳು ಕೈಬೀಸಿ ಕರೆಯುತ್ತಿವೆ. ಹೀಗಿರುವಲ್ಲಿ ದಡದಲ್ಲಿ ನಿಂತಿರುವುದಾದರೂ ಹೇಗೆ? ನಾನು ಈ ಸಮಸ್ಯೆಗಳಿಂದ ದೂರವಾಗಿ ಮೂಕ ಪ್ರೇಕ್ಷಕನಾಗಿ ನಿಂತಿರಲಾರೆ. ಸಮಾಜವನ್ನು ಕೊಚ್ಚಿ ಹಾಕುತ್ತಿರುವ ಈ ಪ್ರವಾಹದ ವಿರುದ್ಧ ಧುಮುಕಿ ಈಜ ಬಯಸುತ್ತೇನೆ ಎಂದು ವೀರ ಪ್ರತಿಜ್ಞೆ ಮಾಡಿದ ಜಯಪ್ರಕಾಶರು ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಧುಮುಕಿದರು.

ಭಾರತದಂತ ಕೃಷಿ ಪ್ರಧಾನ ದೇಶದಲ್ಲಿ ಸಮಾಜವಾದದ ಸ್ವರೂಪ ಹೇಗಿರಬೇಕು? ಅದನ್ನು ಸಾಕಾರಗೊಳಿಸುವುದು ಹೇಗೆ ? ಈ ಕುರಿತು ಸಮಾಜವಾದಿ ಅಥವಾ ಸಾಮ್ಯಾವಾದಿಯ ಹತ್ತಿರ ಉತ್ತರವಿದೆಯೆ? ಸಮಾಜವಾದದ ಹೆಸರಿನಲ್ಲಿ ದೇಶದ ಆರ್ಥಿಕ ತಂತ್ರವನ್ನು ಹಾಳುಗೆಡವಲಾಗುತ್ತಿದೆ. ಬಡವರ ಸಮಸ್ಯೆಗಳೂ ಬಗೆಹರಿಯಲಿಲ್ಲ, ಶೋಷಣೆ ನಿಲ್ಲಲಿಲ್ಲ, ಅಸಮಾನತೆ ಅಳಿಯಲಿಲ್ಲ, ಬಡತನ ನಿರ್ಮೂಲನವಾಗಲಿಲ್ಲ, ಬೆಲೆಯೇರಿಕೆ ತಗ್ಗಲಿಲ್ಲ. ಇದಕ್ಕೆ ನಕಲಿ ಅಥವಾ ಭ್ರಷ್ಟ ಸಮಾಜವಾದವೇ ಕಾರಣ. ಸರ್ಕಾರ ನಡೆಸುವ ಎಲ್ಲ ಉದ್ದಿಮೆಗಳೂ ನಷ್ಟ ಅನುಭವಿಸುತ್ತವೆ. ಅಕಸ್ಮಾತ್ ಲಾಭ ಬಂದರೆ ಅಧಿಕಾರಿಗಳ ಬಂಗಲೆಗಳಿಗೆ ಅವರ ಲೋಲುಪತೆಗೆ ಖರ್ಚಾಗಿ ಹೋಗುತ್ತದೆ.

ಭಾರತ ಒಂದು ರಾಷ್ಟ್ರ, ಪ್ರಾಂತ ಪ್ರಾಂತಗಳ ನಡುವೆ ವಸ್ತು ಸಾಗಾಣಿಕೆಗೆ ನಿರ್ಬಂಧಗಳೇಕೆ ಇರಬೇಕು? ಸರಿಯಾದ ಸಮಾಜವಾದದ ವ್ಯಾಪಾರ ವ್ಯವಸ್ಥೆ ಇಡೀ ರಾಷ್ಟ್ರದಲ್ಲಿ ಜಾರಿಗೆ ಬರಬೇಕು. ಇಲ್ಲವಾದರೆ ಖಾಸಗಿ ವ್ಯಾಪಾರ ವ್ಯವಸ್ಥೆ ಇರಬೇಕು. ಆದರೆ ಈ ಎರಡರ ಕಲಬೆರಕೆ ನಮ್ಮ ರಾಷ್ಟ್ರದಲ್ಲಿದೆ. ಇದರಿಂದ ಸುಲಿಗೆ ಜಾಸ್ತಿಯಾಗಿ ಸಮಾಜವಾದಕ್ಕೆ ಕಳಂಕ ತಟ್ಟಿದೆ.

ಇಂದು ಸಮಾಜವಾದ ಇಲ್ಲವಾಗಿದೆ. ಸರ್ಕಾರ ಎಲ್ಲ ಹೆಜ್ಜೆಗಳನ್ನು ಸಮಾಜವಾದದ ಹೆಸರಿನಲ್ಲೇ ಇಡುತ್ತದೆ. ಆದರೆ ಅದರ ಪರಿಣಾಮ ಮಾತ್ರ ವಿರುದ್ಧವಾಗಿರುತ್ತದೆ. ರಾಷ್ಟ್ರದ ಬವಣೆ ಮಾತ್ರ ತಪ್ಪಿಲ್ಲ. ಈಗಿರುವುದು ಸಮಾಜವಾದವಲ್ಲ, ಅಧಿಕಾರಶಾಹಿ. ಅಧಿಕಾರ ಶಾಹಿಯ ಹುಚ್ಚು ಕಾರುಬಾರು ನಡೆದಿದೆ. ದೆಹಲಿಯಿಂದ ಹಿಡಿದು ಹಳ್ಳಿಯವರೆಗೆ ಇಡೀ ದೇಶದಲ್ಲಿ ಭ್ರಷ್ಟಾಚಾರ ಹರಡಿಕೊಂಡಿದೆ. ಭ್ರಷ್ಟ ಆಡಳಿತದಲ್ಲಿ ರಾಷ್ಟ್ರೀಕರಣ ಫಲ ನೀಡಬಲ್ಲುದೆ? ಭ್ರಷ್ಟ ರಾಜಕೀಯ ಮುಖಂಡರೂ, ಭ್ರಷ್ಟ ಅಧಿಕಾರಿಗಳೂ ಮತ್ತು ಭ್ರಷ್ಟ ವ್ಯಾಪಾರಿಗಳೂ ಒಂದಾಗಿಬಿಟ್ಟಿದ್ದಾರೆ. ಇಂಥ ಪರಿಸ್ಥಿತಿ ಇರುವಾಗ ಯಾವ ಯೋಜನೆಗಳೂ ಫಲಪ್ರದವಾಗುವುದಿಲ್ಲ.

ದೇಶದ ಪರಿಸ್ಥಿತಿ ದಿನದಿನಕ್ಕೂ ಹದಗೆಡುತ್ತಿದೆ. ಜನತೆಯ ಎದೆಗಳಲ್ಲಿ ಅಸಂತೋಷ, ವಿದ್ರೋಹ ಭಾವನೆಗಳು, ರೋಷ, ಕ್ರೋಧಗಳು ಸಿಡಿದೇಳುವುದು ಅನಿವಾರ್ಯ. ಹೀಗೆ ಹಿಂಸೆಗಳು ಎಲ್ಲಕಡೆ ನಡೆಯುತ್ತಿದ್ದರೆ ಪ್ರಜಾತಂತ್ರದ ಉಸಿರುಕಟ್ಟುತ್ತದೆ. ಪ್ರಜಾತಂತ್ರದ ಸ್ಥಾನದಲ್ಲಿ ಸರ್ವಾಧಿಕಾರ ಸ್ಥಿರವಾಗಿ ಬಿಡುತ್ತದೆ.

ಈಗ ನಮ್ಮಲ್ಲಿರುವ ಪ್ರಜಾತಂತ್ರದ ಚೌಕಟ್ಟಿನಲ್ಲಿರುವ ಸಂವಿಧಾನಾತ್ಮಕ ಪದ್ಧತಿಯಿಂದ ಜನತೆಯ ಸಮಸ್ಯೆಗಳ ನಿವಾರಣೆಗೆ ಉತ್ತರ ಸಿಗುವುದಿಲ್ಲ. ನಮ್ಮ ಚುನಾವಣಾ ಕಾನೂನಿನಲ್ಲಿ ಅನೇಕ ದೋಷಗಳಿವೆ, ಛಿದ್ರಗಳಿವೆ. ಸುಧಾರಣೆ ಆಗಬೇಕೆಂಬ ವಿಚಾರ ಬಹಳ ವರ್ಷಗಳಿಂದಲೂ ಇದೆ. ಆದರೆ ಅಧಿಕಾರರೂಢವಾದ ಪಕ್ಷ ಮತ್ತು ಸರ್ಕಾರ ಈ ದಿಸೆಯಲ್ಲಿ ಏನನ್ನೂ ಮಾಡಿಲ್ಲ. ನನಗೆ ಈ ಬಗ್ಗೆ ಅಭಿರುಚಿ ಇತ್ತು , ಆದ್ದರಿಂದ ನಾನು ಚುನಾವಣಾ ಸುಧಾರಣಾ ಸಮಿತಿಯ ಸದಸ್ಯನಾಗಿದ್ದೆ. ವರದಿ ನೀಡಿದೆ. ಇದಾಗಿ ಏಳು

ವರ್ಷಗಳು ಕಳೆದಿವೆ. ಅದು ಹಾಗೇ ಬಿದ್ದಿದೆ. ರಾಜಕೀಯ ಭ್ರಷ್ಟಾಚಾರದಿಂದ ದೇಶ ಮುಕ್ತವಾಗಲು ನಾನು ಕೆಲವು ಸಲಹೆಗಳನ್ನು ವರದಿಯಲ್ಲಿ ಸೂಚಿಸಿದ್ದೇನೆ. ಚುನಾವಣಾ ಪದ್ಧತಿಯಲ್ಲೂ ಅನೇಕ ಸುಧಾರಣೆಗಳಾಗಬೇಕೆಂದು ತಿಳಿಯಪಡಿಸಿದ್ದೇನೆ.

ಭ್ರಷ್ಟಾಚಾರದ ಮೂಲ :

ಎಲ್ಲಾ ಭ್ರಷ್ಟಾಚಾರದ ಮೂಲ ರಾಜಕೀಯ ಭ್ರಷ್ಟಾಚಾರದಲ್ಲಿ ಅಡಗಿದೆ. ಇದರಿಂದಾಗಿ ಈ ರೋಗ ವ್ಯಾಪಿಸದ ಅಂಗವೇ ಇಲ್ಲ. ಜನಜೀವನದಲ್ಲಿ ಮನೆಮನೆಗೂ ವ್ಯಾಪಿಸಿದೆ. ಲಂಚವಿಲ್ಲದೆ ಕೊಂಚವೂ ಸಾಗುವುದಿಲ್ಲ. ಈ ಬಗ್ಗೆ ಅಧ್ಯಯನ ಮಾಡಿ ಲೇಖನ ಬರೆದೆ, ಜನರೊಂದಿಗೆ ಮಾತನಾಡಿದೆ. ಈ ಸಮಸ್ಯೆಗೆ ಪರಿಹಾರದ ಮಾರ್ಗಕ್ಕಾಗಿ ಹುಡುಕಾಡಿದೆ. ಮನಮನದಲ್ಲಿ ತುಂಬಿರುವ ಭ್ರಷ್ಟಾಚಾರವನ್ನು ಒಮ್ಮೆಲೇ ಓಡಿಸುವುದು ಸಾಧ್ಯವಿಲ್ಲ. ಅದರ ಮೂಲಬೇರು ಎಲ್ಲಿದೆ ಎಂಬುದನ್ನು ಮೊದಲು ಕಂಡುಹಿಡಿಯಬೇಕು. ಅದು ನನಗೆ ಹೊಳೆಯಿತು. ವ್ಯಾಪಾರದಲ್ಲಿ, ಉದ್ಯೋಗದಲ್ಲಿ, ಜನಜೀವನದಲ್ಲಿ ಭ್ರಷ್ಟಾಚಾರ ತುಂಬಿರುವುದು ನಿಜ. ಆದರೆ ಎಲ್ಲಿಯವರೆಗೆ ರಾಜಕೀಯದಲ್ಲಿ, ಶಾಸನದಲ್ಲಿ, ಅಧಿಕಾರದಲ್ಲಿ ಭ್ರಷ್ಟಾಚಾರ ಇರುತ್ತದೆಯೋ ಅಲ್ಲಿಯವರೆಗೆ ಅದರ ನಿರ್ಮೂಲನ ಸಾಧ್ಯವಿಲ್ಲ. ಮೊದಲು ಈ ರಾಜಕೀಯ ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಬೇಕು.

ಜವಹರಲಾಲರ ಆಡಳಿತದಲ್ಲಿ ಭ್ರಷ್ಟಾಚಾರ ಇರಲಿಲ್ಲವೇ? ನಿಸ್ಸಂಶಯವಾಗಿ ಇತ್ತು. ಆದರೆ ಇಂದಿರಾ ಅವರ ಕಾಲದಲ್ಲಿ ಇದು ಉಲ್ಬಣಗೊಂಡಿದೆ. ದೇಶದ ಕೋಟ್ಯಂತರ ರೂಪಾಯಿ ಎಲ್ಲಿಗೆ ಹೋಗಿಬಿಟ್ಟಿತು ? ಯಾರ ಜೇಬಿಗೆ ಸೇರಿಬಿಟ್ಟಿದೆ ? ಅದು ಎಷ್ಟು ದೊಡ್ಡ ಜೇಬಿರಬೇಕು ! ಆ ಹಣ ಜನತೆಗಾಗಿ, ಕುಡಿಯುವ ನೀರಿಗಾಗಿ, ಪ್ರಾಥಮಿಕ ಶಾಲೆಗಳಿಗಾಗಿ, ಓಡಾಡುವ ರಸ್ತೆಗಳಿಗಾಗಿ ಇಂಥ ಮೂಲಭೂತ ಅವಶ್ಯಕತೆಗಳಿಗಾಗಿ ಖರ್ಚಾಗಿದ್ದರೆ ಎಷ್ಟು ಒಳಿತಾಗುತ್ತಿತ್ತು . ಬಡತನ ನೋವು ಸಂಕಟಗಳಿಂದ ಜನರ ಹೃದಯದಲ್ಲಿ ಅಸಂತೋಷ ಮತ್ತು ಹಿಂಸೆ ತಾಂಡವವಾಡುತ್ತಿದೆ. ಹಳ್ಳಿಯ ಬಡ ಜನರು ಪ್ರಾಣ ಉಳಿಸಿಕೊಳ್ಳಲು ತಮ್ಮ ಮಕ್ಕಳನ್ನು ಮಾರುತ್ತಿದ್ದಾರೆ. ಬಡತನದಿಂದ ನರಳಿ ಬೇಸತ್ತು ಬೈನೀ ಕ್ಷೇತ್ರದ ಇಡೀ ಕುಟುಂಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದೆ. ಪ್ರಾಯದ ಹೆಣ್ಣು ಮಕ್ಕಳಿಗೆ ಮದುವೆ ಮಾಡಲಾಗದೆ ಅನೇಕ ದುಸ್ಥಿತಿಗಳು ಪ್ರಾಪ್ತವಾಗಿವೆ. ಮನೆಮನೆಯಲ್ಲಿ ಬೆಂಕಿ ಹತ್ತಿಕೊಳ್ಳುತ್ತಿದೆ. ಈ ಬೆಂಕಿಯಿಂದ ದೇಶ ಉರಿದು ಬೂದಿಯಾಗದಂತೆ ನೋಡಿಕೊಳ್ಳಬೇಕು.

ನಾನು ಇಡೀ ದೇಶದಲ್ಲಿ ಬೆಂಕಿ ಹಚ್ಚುತ್ತಿದ್ದೇನೆ ಎಂಬ ಆರೋಪವನ್ನು ನನ್ನ ಮೇಲೆ ಹೊರಿಸಲಾಗಿದೆ. ಅದು ನನ್ನ ಕೆಲಸವಲ್ಲ . ಬೆಂಕಿನಂದಿಸುವುದು ನನ್ನ ಕೆಲಸ. ಬೆಂಕಿ ಅಧಿಕಾರದಲ್ಲಿ ಕುಳಿತಿರುವವರ ಕುರ್ಚಿಯ ಕೆಳಗೇ ಇದೆ. ಅದು ಅವರಿಗೆ ತಿಳಿಯದಿರುವುದು ದುರದೃಷ್ಟಕರ. ಬಿಸಿ ಹೆಚ್ಚಾದಾಗ ತಿಳಿದೀತು.

ಸಮಸ್ಯೆಗಳು ಇಂದಿನವಲ್ಲ. ಬ್ರಿಟಿಷರು ಇದ್ದ ಕಾಲದಲ್ಲೂ ಇದ್ದುವು. ನಂತರ ಸ್ವತಂತ್ರ ಭಾರತದ ಆಡಳಿತ ಹಿಡಿದ ನೆಹರೂ ಕಾಲದಲ್ಲೂ ಇದ್ದುವು. ಈಗ ಇಂದಿರಾ

ಗಾಂಧಿಯವರ ಕಾಲದಲ್ಲೂ ಇದೆ. ಆದ ಕಾರಣ ಯಾವ ವ್ಯಕ್ತಿಯೊಡನೆಯೂ ನನ್ನ ಜಗಳವಿಲ್ಲ. ಆದರೆ ಹೋರಾಟವಿದೆ. ಆ ಹೋರಾಟವಾದರೋ ವ್ಯಕ್ತಿಗಳ ವಿರುದ್ಧದ ಹೋರಾಟವಲ್ಲ; ಅದು ನೀತಿಗಳ ವಿರುದ್ಧ, ಸಿದ್ಧಾಂತಗಳ ವಿರುದ್ಧ, ಕಾರ್ಯನಿರ್ವಹಿಸುವ ರೀತಿ-ನೀತಿಗಳ ವಿರುದ್ಧ.

ವಿದೇಶಾಂಗ ನೀತಿಯ ಬಗ್ಗೆ ನನಗೆ ವಿರೋಧವಿತ್ತು. ಉದಾಹರಣೆಗೆ ಹಂಗೇರಿ, ಟಿಬೆಟ್, ಚೀನಾ ಇತ್ಯಾದಿ ದೇಶಗಳ ಬಗ್ಗೆ ಇದ್ದ ವಿದೇಶಾಂಗ ನೀತಿಯ ವಿಚಾರದಲ್ಲಿ ನೆಹರೂ ಜೊತೆ ಮತಭೇದವಿತ್ತು. ಆದರೆ ಇಂದಿರಾಗಾಂಧಿಯವರೊಡನೆ ದೇಶದ ಒಳನೀತಿಗಳ ಬಗ್ಗೆಯೂ ಮತಭೇದವಿದೆ. ಇದು ರಾಕ್ಷಸಾಕಾರವಾಗಿ ಬೆಳೆದು ಎಲ್ಲರನ್ನೂ ನುಂಗಿಬಿಡುವ ಪರಿಸ್ಥಿತಿ ಪ್ರಾಪ್ತವಾಗಿದೆ. ಘರ್ಷಣೆ ಎನ್ನುವುದು ಅನಿವಾರ್ಯವಾಗಿದೆ. ಆದರೆ ಆಗದಿರುವುದೇ ಆಶ್ಚರ್ಯ. ಅದಕ್ಕೆ ಕಾರಣ ಜನರಲ್ಲಿರುವ ಸಹನಾ ಶಕ್ತಿ. ಅದಕ್ಕೂ ಒಂದು ಮಿತಿ ಇದೆ. ಮಿತಿಮೀರಿದಾಗ ಯಾವ ಅಣೆಕಟ್ಟೆಗಳೂ ಪ್ರವಾಹವನ್ನು ತಡೆಯಲು ಸಾಧ್ಯವಾಗುವುದಿಲ್ಲ.

ಗುಜರಾತಿನ ಬೆಳಕು :

ಸ್ವರಾಜ್ಯದಲ್ಲಿ ಅನೇಕ ಹೋರಾಟಗಳು ನಡೆದಿವೆ. ಕೆಲವೆಡೆ ರೈತರ ಸಂಘರ್ಷ, ಕೆಲವೆಡೆ ಕಾರ್ಮಿಕ ಯೂನಿಯನ್‌ಗಳ ಹರತಾಳ ಮತ್ತೆ ಕೆಲವೆಡೆ ವಿದ್ಯಾರ್ಥಿ ಯೂನಿಯನ್‌ಗಳ ಗಲಭೆಗಳು ಇತ್ಯಾದಿ. ಇವುಗಳ ಹೋರಾಟ ಸೀಮಿತ ಉದ್ದೇಶಕ್ಕಾಗಿ.

ಅಲಹಾಬಾದ್, ಲಕ್ನೋ ಅಥವಾ ಬನಾರಸ್ ಇಲ್ಲಾ ದೇಶದ ಇನ್ನಾವುದೇ ಭಾಗದಲ್ಲಾಗಲೀ ನಡೆದಿರುವ ವಿದ್ಯಾರ್ಥಿ ಚಳವಳಿಗಳು ವಿದ್ಯಾರ್ಥಿ ಜೀವನಕ್ಕೆ, ಪರೀಕ್ಷೆಗಳಿಗೆ, ಶಿಕ್ಷಣಕ್ಕೆ, ಹಾಸ್ಟೆಲುಗಳಿಗೆ, ಫೀಸುಗಳಿಗೆ ಮಾತ್ರ ಸಂಬಂಧಪಟ್ಟಂತೆ ನಡೆದಿವೆ. ಆದರೆ ಮೊಟ್ಟ ಮೊದಲಬಾರಿಗೆ ಇಂತಹ ಬೇಡಿಕೆಗಳನ್ನೂ ಮೀರಿ ವಿದ್ಯಾರ್ಥಿಗಳು ರಾಷ್ಟ್ರದ ಬೇಡಿಕೆಗಳಿಗಾಗಿ, ದೇಶದ ಜನತೆಯ ಬೇಡಿಕೆಗಳಿಗಾಗಿ, ಇಡೀ ಗುಜರಾತಿಗಾಗಿ ಸಂಘರ್ಷ ಹೂಡಿದ್ದರ ಶ್ರೇಯಸ್ಸು ಗುಜರಾತಿನ ವಿದ್ಯಾರ್ಥಿಗಳಿಗೇ ಸಲ್ಲಬೇಕು. ಇಡೀ ರಾಷ್ಟ್ರಕ್ಕಾಗಿ, ಗುಜರಾತಿಗಾಗಿ ಗುಜರಾತಿನಿಂದ ಬಂದ ಬೆಳಕು ಅದು.

ಗುಜರಾತಿನ ಮಂತ್ರಿಮಂಡಲ ಭ್ರಷ್ಟವಾಗಿದೆ. ಭ್ರಷ್ಟಾಚಾರ ದೂರವಾಗಬೇಕಾದರೆ ಈ ಮಂತ್ರಿಮಂಡಲ ರಾಜೀನಾಮೆ ನೀಡಬೇಕು, ಏರಿರುವ ಬೆಲೆಗಳು ಇಳಿಯಬೇಕು, ನಿರುದ್ಯೋಗ ನಿವಾರಣೆಯಾಗಬೇಕು ಈ ಮೂರೂ ವಿಷಯಗಳು - ಭ್ರಷ್ಟಾಚಾರ ಬೆಲೆ ಯೇರಿಕೆ, ನಿರುದ್ಯೋಗ-ಕೇವಲ ಗುಜರಾತಿನ ವಿದ್ಯಾರ್ಥಿಗಳ ಸಮಸ್ಯೆಗಳಲ್ಲ, ಇವು ರಾಷ್ಟ್ರದ ಸಮಸ್ಯೆಗಳು, ಭಾರತೀಯ ಸಮಾಜದ್ದು. ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ತರಬೇಕೆಂಬ ನಾಲ್ಕನೆಯ ಬೇಡಿಕೆಯನ್ನು ಇಟ್ಟುಕೊಂಡು ಬಿಹಾರ ಯುವಕರು ಹೋರಾಟಕ್ಕಿಳಿದರು.

ಈ ಆಂದೋಲನ ರಾಜಕೀಯದಲ್ಲಿರುವವರ, ಅಧಿಕಾರದಲ್ಲಿರುವವರ ಸುಧಾರಣೆಗಾಗಿ ಮಾತ್ರ ಅಲ್ಲ, ಇಡೀ ವಾತಾವರಣ ಹಿತವಾಗುವಂತೆ ಮಾಡುವ ನೈತಿಕ ಕ್ರಾಂತಿಗಾಗಿ. ಪರೀಕ್ಷೆಯಲ್ಲಿ ಕಾಪಿ ಹೊಡೆವ, ಜೇಬಿನಲ್ಲಿ ಚಾಕು ಚೂರಿ ಇಡುವ ವಿದ್ಯಾರ್ಥಿಗಳೂ ಇದ್ದಾರೆ. ಪರೀಕ್ಷೆಯ ಮೇಲಧಿಕಾರಿಗಳಿಗೆ ಚಾಕು ತೋರಿಸುತ್ತಾರೆ. ಹೆದರಿಸಿ ಬೆದರಿಸಿ ಹಣದ ಆಮಿಷ ತೋರಿಸಿ ಅಂಕಗಳನ್ನು ಹಾಕಿಸಿಕೊಳ್ಳುವವರೂ ಇದ್ದಾರೆ. ವಿದ್ಯಾರ್ಥಿಗಳಂತೆ ಇಂಥ ಶಿಕ್ಷಕರೂ ಇದ್ದಾರೆ. ಇಂದಿನ ವ್ಯವಸ್ಥೆ ಎಲ್ಲರನ್ನೂ ಅಪ್ರಾಮಾಣಿಕರನ್ನಾಗಿ ಮಾಡುತ್ತಿದೆ, ಭ್ರಷ್ಟರನ್ನಾಗಿಸುತ್ತಿದೆ. ಇದರಿಂದ ಉದ್ಭವವಾಗುತ್ತಿರುವ ಜನತೆಯ ಅಸಂತೋಷ, ದುಃಖ, ದುಮ್ಮಾನ, ಕಷ್ಟ, ರೋಷ, ಕ್ರೋಧ ಈ ಎಲ್ಲವೂ ಶಮನವಾಗುವ ಶಾಂತಿ ಮಾರ್ಗವನ್ನು ಹುಡುಕಬೇಕು. ಈ ವ್ಯವಸ್ಥೆಯನ್ನು ಬದಲಿಸಬೇಕು. ಒಂದು ವ್ಯಾಪಕ ನೈತಿಕ ಉತ್ಥಾನದ ಆಂದೋಲನ ಆಗಬೇಕು.

ನಾವು ಸಮಿತಿಗಳನ್ನು ರಚಿಸಿಕೊಂಡು ಈ ವಿಷಯಗಳನ್ನು ಕುರಿತು ಚರ್ಚಿಸಿ ವರದಿಗಳನ್ನು ಇಂದಿರಾಗಾಂಧಿಗೆ ಕಳುಹಿಸಿದೆವು. ಅದರಲ್ಲಿ ಸುಪ್ರೀಂ ಕೋರ್ಟ್ ಕುರಿತಂತೆ ಜನತೆಯ ಮೂಲಭೂತ ಹಕ್ಕುಗಳು, ಭ್ರಷ್ಟಾಚಾರ ನಿರ್ಮೂಲನ ಕುರಿತಂತೆ ಆರು ಸಲಹೆಗಳಿದ್ದುವು. ಇದರ ಬಗ್ಗೆ ಯಾರೂ ಗಮನ ಕೊಡಲಿಲ್ಲ. ಆರು ವರ್ಷಗಳಿಂದ 'ಆಂಟಿ ಡಿಫೆಕ್ಷನ್ ಬಿಲ್' ಏಕೆ ಕೊಳೆಯುತ್ತಾ ಬಿದ್ದಿದೆ ? ಲೋಕ ಪಾಲ ಬಿಲ್ಲು ಆರು ವರ್ಷಗಳಿಂದ ಏಕೆ ನೆನೆಗುದಿಗೆ ಬಿದ್ದಿದೆ ? ಅಧಿಕಾರದಲ್ಲಿರುವವರ ಬಿಲ್ಲು ಪಾಸು ಮಾಡಬೇಕೆಂದರೆ ನಿರಾಯಾಸವಾಗಿ ಪಾಸುಮಾಡಿಬಿಡುತ್ತಾರೆ. ಅವಕ್ಕೆ ಸೆಲೆಕ್ಟ್ ಕಮಿಟಿಯೂ ಬೇಡ, ಸಾರ್ವಜನಿಕ ಅಭಿಪ್ರಾಯವೂ ಬೇಡ. ಪಾಸಾಗಿಬಿಡುತ್ತದೆ. ಏಕೆಂದರೆ ಅವರಿಗೆ ಬಹುಮತವಿದೆ. ಇವರಿಗೆ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸುವ ಇಚ್ಛೆ ಇದ್ದರೆ ಈವರೆಗೆ ಏಕೆ ಉಪಾಯವನ್ನು ಹುಡುಕಲಿಲ್ಲ ? ಸಂತಾನಂ ಕಮಿಟಿ ವರದಿ, ವಾಂಛೂ ಕಮಿಟಿ ವರದಿ, ಆಡಳಿತ ಸುಧಾರಣಾ ಸಮಿತಿ ವರದಿ-ಇವೆಲ್ಲವೂ ಸರ್ಕಾರಿ ವರದಿಗಳೆ - ಹೋಗಲಿ ಇವನ್ನಾದರೂ ಜಾರಿಗೆ ತಂದಿದ್ದಾರೆಯೆ ? ಈ ಕುರಿತು ನಾವು ಯೋಚಿಸಬೇಕು.

ಇಂದಿರಾಗಾಂಧಿಯವರ ಸರ್ಕಾರದೊಂದಿಗೆ ನೀವು ಏಕೆ ಸಹಕರಿಸುವುದಿಲ್ಲ ಎಂದು ನನ್ನನ್ನು ಕೇಳುತ್ತಾರೆ. ಯಾವ ವಿಚಾರದಲ್ಲಿ ಸಹಕರಿಸಬೇಕು ? ಭ್ರಷ್ಟಾಚಾರದೊಂದಿಗೆ ? ನಾನು ಇಂದಿರಾಗಾಂಧಿಯವರೊಂದಿಗೆ ಮಾತನಾಡಿದೆ. ಸಮಾಧಾನವಿರಲಿ ಅಸಂತೋಷವಾಯ್ತು. ಈ ವಿಷಯಗಳಲ್ಲಿ ಆಕೆಗೆ ಆಸಕ್ತಿ ಇಲ್ಲ. ಮಾಡಬೇಕೆಂಬ ಇಚ್ಛೆ ಇಲ್ಲ. ಬಹುಶಃ ಅವರಿಗೆ, ಅವರ ಪಾರ್ಟಿಯವರಿಗೆ ಇಂದಿನ ವ್ಯವಸ್ಥೆಯಿಂದ ಲಾಭವಾಗಬಹುದು.

ಅಂತಿಮವಾಗಿ ನಾನೊಂದು ನಿರ್ಣಯಕ್ಕೆ ಬಂದೆ. ಜನತೆ ತನ್ನ ಹೋರಾಟವನ್ನು ತಾವೇ ಹೋರಾಡಬೇಕು. ಭ್ರಷ್ಟಾಚಾರ ನಿರ್ಮೂಲನಕ್ಕಾಗಲೀ, ಚುನಾವಣಾ ಪದ್ಧತಿಯನ್ನು ಸುಧಾರಿಸುವುದಕ್ಕಾಗಲೀ ಅಥವಾ ಸಾರ್ವಜನಿಕವಾದ ಬೇರಾವುದೇ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಲೀ ಸ್ವಯಂ ಜನತೆಯೇ ಹೋರಾಡಬೇಕು. ಜನಸಂಘರ್ಷವಾಗಬೇಕು. ಈ ಸಂಘರ್ಷ ಶಾಂತಿಯುತವಾಗಿರಬೇಕು ಪಕ್ಷಾತೀತವಾಗಿರಬೇಕು. ಇದರ

ಮುಂದಾಳುಗಳು ನವಭಾರತ ನಿರ್ಮಾಣದ ಹೊಣೆಹೊತ್ತ ವಿದ್ಯಾರ್ಥಿಗಳು, ಯುವ ಶಕ್ತಿಗಳು ಆಗಿರಬೇಕು. ರಾಷ್ಟ್ರನಿರ್ಮಾಣಕ್ಕೆ ಸಂಬಂಧಿಸಿದ ಈ ಮಹತ್ವ ಕಾರ್ಯದಲ್ಲಿ ನಾವುಗಳೆಲ್ಲ ಭಾಗಿಗಳಾಗಬೇಕು. ಈ ಸಂಘರ್ಷ ಯಾವುದೇ ವ್ಯಕ್ತಿ ಅಥವಾ ಪಕ್ಷದ ವಿರುದ್ಧ ಅಲ್ಲ, ಎಲ್ಲರನ್ನೂ ಕಿತ್ತು ತಿನ್ನುತ್ತಿರುವ ವ್ಯವಸ್ಥೆಯ ವಿರುದ್ಧ. ಈ ಸಂಘರ್ಷ ಸರ್ಕಾರ ಉರುಳಿಸಲು ಅಲ್ಲ, ಅನಿಷ್ಟ ವ್ಯವಸ್ಥೆಯನ್ನು ಬದಲಿಸುವ ಸಂಪೂರ್ಣ ಕ್ರಾಂತಿಗಾಗಿ.

ಕಾಲದ ಕರೆ ಇದಾಗಿದೆ :

ಇದು ಅವರಿವರು ಯೋಜಿಸಿ ಮಾಡುವ ವ್ಯವಸ್ಥಿತ ಸಂಘರ್ಷವಲ್ಲ. ಕಾಲದ ಕರೆ ಇದಾಗಿದೆ. ಜಯಪ್ರಕಾಶ ನಾರಾಯಣ ತಡೆದರೂ ಇದು ನಿಲ್ಲುವುದಿಲ್ಲ. ಏಕೆಂದರೆ ವಿದ್ಯಾರ್ಥಿಗಳಲ್ಲಿ ಅಶಾಂತಿ ಇದೆ. ಅದಕ್ಕೆ ಕಾರಣ ಶಿಕ್ಷಣದ ಸಮಸ್ಯೆಗಳು. ಶಿಕ್ಷಣದ ನಂತರ ನಿರುದ್ಯೋಗದ ಕತ್ತಲೆ ಕವಿದಿದೆ. ಪ್ರಜೆಗಳು ಬೆಲೆಯೇರಿಕೆಯ ಬೀಸುಗಲ್ಲಿಗೆ ಸಿಕ್ಕಿ ನಲುಗಿದ್ದಾರೆ. ಭ್ರಷ್ಟಾಚಾರವಿದೆ. ಲಂಚಗುಳಿತನವಿದೆ. ಆದ್ದರಿಂದ ಆಂದೋಲನ ನಾಲ್ಕು ಧ್ಯೇಯ ಘೋಷಗಳಿಂದ ಹೊರಟಿದೆ.

೧. ಭ್ರಷ್ಟಾಚಾರ ನಿರ್ಮೂಲನವಾಗಬೇಕು

೨. ನಿರುದ್ಯೋಗ ನಿವಾರಣೆಯಾಗಬೇಕು.

೩. ಬೆಲೆಯೇರಿಕೆಯನ್ನು ತಡೆಯಬೇಕು.

೪. ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು.

ಇದು ಈಡೇರಬೇಕಾದರೆ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ಈ ನಾಲ್ಕು ಬೇಡಿಕೆಗಳಲ್ಲಿ ಇಡೀ ಸಮಾಜದ ಭವಿಷ್ಯ ಅಡಗಿದೆ. ಆದ್ದರಿಂದ ಇದು ಸಂಪೂರ್ಣಕ್ರಾಂತಿ.

ಭ್ರಷ್ಟಾಚಾರ :

ಇವುಗಳನ್ನು ಕುರಿತು ಕೊಂಚ ವಿಷದವಾಗಿ ಚರ್ಚಿಸೋಣ. ಭ್ರಷ್ಟಾಚಾರ ಕೇವಲ ನೈತಿಕ ಪ್ರಶ್ನೆಯಲ್ಲ. ಅದು ಬಡವರ ಅನ್ನಕ್ಕೂ ಸಂಬಂಧ ಪಟ್ಟುದಾಗಿದೆ. ಬಡವರ ಕಲ್ಯಾಣಕ್ಕೆಂದು ಪಂಚವಾರ್ಷಿಕ ಯೋಜನೆಗಳನ್ನು ಹಮ್ಮಿಕೊಳ್ಳಲಾಯ್ತು. ಜೊತೆಗೆ ಇತರ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೋಟ್ಯಂತರ ರೂಪಾಯಿಗಳನ್ನು ತೊಡಗಿಸಲಾಯ್ತು. ಇದು ನಿಜವಾಗಿ ಯೋಜನೆಗಳಿಗೇ ಖರ್ಚಾಗಿದ್ದರೆ ಬಡತನ ತಗ್ಗುತ್ತಿತ್ತು. ಆದರೆ ಅದು ಹಾಗೆ ಆಗಿಲ್ಲ, ಎಂದರೆ ಹಣ ಎಲ್ಲಿ ಹೋಯ್ತು ? ನೈತಿಕ ಪ್ರಶ್ನೆಯಂತೆ ಭ್ರಷ್ಟಾಚಾರಕ್ಕೂ ಬಡವರ ಅನ್ನಕ್ಕೂ ಸಂಬಂಧವಿದೆ. ಸರ್ಕಾರದ ಖರ್ಚಿನ ಅರ್ಧದಷ್ಟು ಭ್ರಷ್ಟಾಚಾರದಲ್ಲಿ ಪೋಲಾಗುತ್ತಿದೆ. ಇಲ್ಲ ಇದು ಮುಕ್ಕಾಲು ಪಾಲು ಎಂದು ಅಧಿಕಾರಿಗಳೇ ಹೇಳುತ್ತಾರೆ.

ಇತ್ತೀಚಿನವರೆಗೆ ಮಂತ್ರಿಮಂಡಲದಲ್ಲಿದ್ದ ಮಂತ್ರಿಯೊಬ್ಬರು ಹೇಳಿದರು ''ಜಯಪ್ರಕಾಶ್ ಜೀಯವರೇ ನಾವು ಈ ವ್ಯವಸ್ಥೆಯ ಒಳಗಿದ್ದೇವೆ. ಏನೇನು ನಡೆಯುತ್ತಿದೆ.

ಹೇಗೆ ಹಣ ಮಾಡಿಕೊಳ್ಳಲಾಗುತ್ತಿದೆ ಇತ್ಯಾದಿ ಎಲ್ಲವನ್ನೂ ನಾವು ಬಲ್ಲೆವು. ಇದನ್ನೆಲ್ಲಾ ಪ್ರಧಾನ ಮಂತ್ರಿಯವರಿಗೆ ತಿಳಿಸಲು ಯಾವ ಸಮಿತಿಯ ಅವಶ್ಯಕತೆಯೂ ಇಲ್ಲ. ಪ್ರಧಾನ ಮಂತ್ರಿಯವರಿಗೂ ಇವೆಲ್ಲ ಗೊತ್ತಿದೆ ಎಂಬ ನಂಬಿಕೆ ನಮಗಿದೆ. ಏಕೆಂದರೆ ಹಣ ಅವರ ಬಳಿಗೇ ಹೋಗುತ್ತದೆ. ಚುನಾವಣೆ ಹೋರಾಡಲು ಅವರಿಗೆ ಕೋಟ್ಯಂತರ ರೂಪಾಯಿಗಳು ಬೇಕು [1]. ಮಂತ್ರಿಗಳಿಗೆ ಯಾರು ಹಣ ನೀಡುತ್ತಾರೆ ? ಜನರು ಪ್ರಧಾನ ಮಂತ್ರಿಗಳಿಗೇ ಹಣ ನೀಡುತ್ತಾರೆ. ಇದು ವ್ಯಾಪಾರ. ಒಂದು ಲಕ್ಷ ಕೊಟ್ಟರೆ ನೀವು ಹತ್ತು ಲಕ್ಷ ಗಳಿಸಬಹುದು.'' ಈ ಕಾರಣ ಸರ್ಕಾರ ಕಾಳಸಂತೆ ಕೋರರ ವಿರುದ್ಧ ದಿಟ್ಟವಾಗಿ ವರ್ತಿಸಲು ಸಾಧ್ಯವಿಲ್ಲ.

ಈ ಭ್ರಷ್ಟಾಚಾರವೆನ್ನುವುದು ಕೇವಲ ಮಂತ್ರಿಗಳ ಗುತ್ತಿಗೆಯಾಗಿ ಉಳಿದಿಲ್ಲ , ವ್ಯಾಪಾರದಲ್ಲಿ, ಉದ್ಯೋಗದಲ್ಲಿ, ನಗರಸಭೆಗಳಲ್ಲಿ ಭ್ರಷ್ಟಾಚಾರ ಇದೆ. ಶಿಕ್ಷಣ ಸಂಸ್ಥೆಗಳಲ್ಲಿ ಇದೆ. ವಿದ್ಯಾರ್ಥಿಗಳೂ ಭ್ರಷ್ಟರಾಗಿದ್ದಾರೆ. ಅದು ಇಲ್ಲದ ಜಾಗವಿಲ್ಲ. ನಮ್ಮಲ್ಲಂತೂ ಮೇಲ್ವಿಚಾರಕರ ಎದುರಿನಲ್ಲೆ ವಿದ್ಯಾರ್ಥಿಗಳು ಕಾಪಿ ಹೊಡೆಯುತ್ತಾರೆ. ಕೇಳಿದರೆ ಚಾಕು ಚೂರಿ ತೆಗೆಯುತ್ತಾರೆ. ಇಂಥ ವಿದ್ಯಾರ್ಥಿಗಳು ಭ್ರಷ್ಟಾಚಾರದ ವಿರುದ್ಧ ಆಂದೋಲನ ಮಾಡಿದರೆ ಏನು ಶಕ್ತಿ ಇದ್ದೀತು ? ಆದ್ದರಿಂದ ಭ್ರಷ್ಟಾಚಾರ ಎದುರಿಸುವವನು ಮೊದಲು ತಾನು ಸದಾಚಾರಿಯಾಗಿರಬೇಕು.

ಭ್ರಷ್ಟಾಚಾರವನ್ನು ಕುರಿತು ತಿಳಿಸುವುದು, ಪ್ರಚಾರ ಮಾಡುವುದು, ಲೇಖನ ಬರೆಯುವುದು, ಸೆಮಿನಾರುಗಳನ್ನು ಮಾಡುವುದರಿಂದ ಏನೂ ಆಗುವುದಿಲ್ಲ. ಅಧಿಕಾರದಲ್ಲಿ ಇರುವವರು ಆಡಳಿತ ಪೀಠಗಳಲ್ಲಿ ಕುಳಿತಿರುವವರು ಈಗಿರುವ ಚುನಾವಣಾ ಪದ್ಧತಿಯಿಂದ ಲಾಭ ಗಳಿಸಲು ಬಯಸುತ್ತಾರೆ. ಅವರು ಈ ವ್ಯವಸ್ಥೆಯಲ್ಲಿ ಯಾವ ತರಹದ ಬದಲಾವಣೆಗಳನ್ನೂ ತರಬಯಸುವುದಿಲ್ಲ. ಇತರ ಪಾರ್ಟಿಗಳಿಗೂ ಈಗಿರುವ ಚುನಾವಣಾ ಪದ್ಧತಿಯಿಂದ ಲಾಭ ಸಿಗುತ್ತಿರಬಹುದು. ಅವರೂ ಬದಲಾವಣೆ ಬಯಸುತ್ತಾರೆಂದು ನಿರೀಕ್ಷಿಸುವಂತಿಲ್ಲ . ಒಳ್ಳೆಯ ಮತ್ತು ಕೆಟ್ಟ ಜನರು ಎಲ್ಲಾ ಕಡೆಯೂ ಇದ್ದಾರೆ. 'ಪ್ರೇಮ ಮತ್ತು ಯುದ್ಧದಲ್ಲಿ ಎಲ್ಲವೂ ನ್ಯಾಯವೇ' ಎಂಬ ಇಂಗ್ಲೀಷ್ ಗಾದೆಯೊಂದಿದೆ. ಇಂಥ ಪರಿಸ್ಥಿತಿಯಲ್ಲಿ ಜನ ಏನು ಮಾಡಬೇಕು ?

ಕಳ್ಳಸಂಗ್ರಹ ಮಾಡುವ ಶ್ರೀಮಂತ ರೈತರನ್ನು ನಾವು ಹಿಡಿಯಬಾರದೆ ? ಅವರು ಕಳ್ಳಸಂಗ್ರಹ ಮಾಡಲು ಬಿಟ್ಟು ಬಿಡುವುದೆ ? ಜನಕ್ಕೆ ಅನ್ನ ಸಿಗದಿರುವಾಗ ಬೆಲೆ ಏರುತ್ತದೆ. ಆಗ ಮಾತ್ರ ನೀವು ಮಾರುತ್ತೀರ ? ಹಣದ ಪೆಟ್ಟಿಗೆ ತುಂಬಿಸಿಕೊಳ್ಳುವುದೇ ನಿಮ್ಮ ಗುರಿಯೆ ? ಜನ ಸತ್ತರೂ ನಿಮಗೆ ಸಂಬಂಧವಿಲ್ಲವೆ ? ನೀವು ಭಾರತದಲ್ಲಿ ವಾಸಿಸುತ್ತಿದ್ದೀರೋ ಅಥವಾ ಎಲ್ಲಿ ?

---

[1] ಬಿರ್ಲಾ ಘನಶ್ಯಾಮದಾಸ್ ದಳ್ಳಾಳಿ. ತನ್ನ ಹನ್ನೆರಡನೇ ವಯಸ್ಸಿನಲ್ಲಿ ಆ ವೃತ್ತಿಗೆ ತೊಡಗಿಸಿಕೊಂಡಿದ್ದವ. ದಳ್ಳಾಳಿಗಳು ಎಂದರೆ ತಮಗೆ ಗಿಟ್ಟದಲ್ಲದೆ ಏನೊಂದನ್ನೂ ಮಾಡದ ಮನೋಧರ್ಮದವರು. ಈ ಬಿರ್ಲಾ ಸಂಸ್ಥೆಗಳು ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವ ತನಕದ ಅವಧಿಯಲ್ಲಿ ಕಾಂಗ್ರೆಸ್‌ಗೆ, ಗಾಂಧಿಗೆ ಒಟ್ಟು ೨೦ ಕೋಟಿ ಹಣವನ್ನು ನೀಡಿದ್ದುವು ಎಂಬ ವರದಿ ವಿಶ್ವಕೋಶದಲ್ಲಿ ದಾಖಲಾಗಿದೆ. **ಜಹೊನಾ.**

ಜನಶಕ್ತಿ ಇನ್ನು ತಡೆಯುವುದಿಲ್ಲ. ಆಂದೋಲನ ಆರಂಭವಾಗುತ್ತದೆ. ಈ ಜನ ಶಕ್ತಿಯ ನೇರ ಸಂಬಂಧವನ್ನು ಜನತೆಯ ಜೀವನ್ಮರಣ ಸಮಸ್ಯೆಗಳೊಡನೆ ಸೇರಿಸಬೇಕು. ಸಗಟು ವ್ಯಾಪಾರಿಗಳೂ ಮತ್ತು ಮಿಲ್ ಮಾಲೀಕರೂ ಭ್ರಷ್ಟರಾದರೆ ನಾವು ಅವರನ್ನು ಹಿಡಿಯುತ್ತೇವೆ. ಲೂಟಿ ಮಾಡುವುದಿಲ್ಲ, ಬೆಂಕಿ ಹಚ್ಚುವುದಿಲ್ಲ, ಆದರೆ ಅವರ ಅಂಗಡಿಗಳ ಸಾಮಾನುಗಳನ್ನು ಪೊಲೀಸಿನವರು ಬಂದರೂ ಅವರ ಎದುರಿನಲ್ಲೇ ನಿರ್ಧರಿತ ಬೆಲೆಗೆ ಮಾರುತ್ತೇವೆ. ಆ ಹಣವನ್ನು ಅವರಿಗೆ ಅಲ್ಲಿಯೇ ಕೊಟ್ಟುಬಿಡುತ್ತೇವೆ. ಈ ರೀತಿ ಕಳ್ಳಮಾರಾಟ ತಪ್ಪಬಹುದು.

ಕಳ್ಳಮಾರಾಟ, ಸಂಗ್ರಹ ಮತ್ತು ಭ್ರಷ್ಟಾಚಾರ ಇರಬಾರದು. ಇದು ಆಗ ಬೇಕೆಂದರೆ ಸಮಾಜದ ನಿಷ್ಠ ಜಾಗೃತ ಜನ ಮತ್ತು ಸಂಸ್ಥೆಗಳು ಸಮಾಜದ ಕಾವಲು ಗಾರರಾಗಿ ಪಹರೆ ಮಾಡಬೇಕು. ಹೀಗೆ ಮಾಡದೆ ಭ್ರಷ್ಟಾಚಾರ ದೂರವಾಗುವುದಿಲ್ಲ. ಆದ್ದರಿಂದ ಹಳ್ಳಿಹಳ್ಳಿಯಲ್ಲೂ, ಊರೂರಿನಲ್ಲೂ , ಎಲ್ಲಾ ಬಡಾವಣೆಗಳಲ್ಲೂ ಇಂಥ ಸಮಿತಿಗಳು ರಚನೆಯಾಗಬೇಕು. ಭ್ರಷ್ಟಾಚಾರದ ಸ್ಥಾನವನ್ನು ಶಿಷ್ಟಾಚಾರ ಆಕ್ರಮಿಸುವ ವರೆಗೆ ಜನ ಹೋರಾಡಬೇಕು.

ನಿರುದ್ಯೋಗ :

ದೊಡ್ಡ ದೊಡ್ಡ ಕಾರ್ಖಾನೆಗಳನ್ನು ತೆರೆಯುವುದರಿಂದ ನಿರುದ್ಯೋಗ ನಿವಾರಣೆ ಯಾಗುತ್ತದೆಯೆ ? ಸಭೆಯೊಂದರಲ್ಲಿ ನಾನು ಒಂದು ವಿಚಾರ ಹೇಳಿದೆ. ಪ್ರಸಿದ್ಧ ಅರ್ಥ ಶಾಸ್ತ್ರಜ್ಞರಾದ ವಿ.ಕೆ. ಆರ್. ವಿ. ರಾವ್ ಅವರೂ ಕೂಡ ಅದನ್ನೇ ಹೇಳಿದರು. ನಮ್ಮಿಬ್ಬರನ್ನೂ ಸಮರ್ಥಿಸುತ್ತಾ ನೆಹರೂ 'ಪ್ರೊ|| ರಾವ್ ಮತ್ತು ಜಯಪ್ರಕಾಶ್ ಇಬ್ಬರೂ ಹೇಳಿರುವುದು ಸರಿ' ಎಂದರು. ನಮ್ಮೆದುರಿನಲ್ಲಿ ಎರಡು ಉದಾಹರಣೆಗಳಿವೆ. ಒಂದು ಬಿಹಾರದ್ದು ಮತ್ತೊಂದು ಪಂಜಾಬಿನದು. ಬಿಹಾರದಲ್ಲಿ ಅತಿ ದೊಡ್ಡ ಕಾರ್ಖಾನೆಗಳಿವೆ, ಕಬ್ಬಿಣ ಇದೆ, ಸಿಮೆಂಟ್ ಇದೆ. ಹೆವಿ ಇಂಜನಿಯರಿಂಗ್ ಇದೆ. ಇಷ್ಟಿದ್ದರೂ ಇಡೀ ದೇಶದಲ್ಲಿ ಕಡು ಬಡತನ ವಿರುವುದು ಬಿಹಾರದಲ್ಲೆ. ಮತ್ತೊಂದು ಕಡೆ ಪಂಜಾಬ್ ಪ್ರಾಂತವಿದೆ. ಅಲ್ಲಿ ಒಂದಾದರೂ ಬೃಹತ್ ಕೈಗಾರಿಕೆ ಇಲ್ಲ. ಅದರೆ ಅದು ದೇಶದಲ್ಲಿಯೇ ಸಂಮೃದ್ಧ ಪ್ರದೇಶ ವಾಗಿದೆ. ಆದ್ದರಿಂದ ನಿರುದ್ಯೋಗ ನಿವಾರಣೆಗೆ ಕಾರ್ಖಾನೆಗಳನ್ನು ತೆರೆಯುವುದೊಂದೇ ಮಾರ್ಗವಲ್ಲ. ಆಯಾಯ ಸ್ಥಳಗಳಲ್ಲಿ ಸಿಗುವ ಸಂಪನ್ಮೂಲಗಳನ್ನು ಬಳಸಿಕೊಂಡು ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಜನಜೀವನದಲ್ಲಿ ಚೈತನ್ಯವನ್ನು ಮೂಡಿಸ ಬಹುದು. ಅದಕ್ಕೆ ಶಿಕ್ಷಣದಲ್ಲಿಯೂ ತಕ್ಕ ಮಾರ್ಪಾಟು ಆಗಬೇಕಾಗಿದೆ.

ಬೆಲೆಯೇರಿಕೆ :

ಬೆಲೆಯೇರಿಕೆಗೆ ಅನೇಕ ಕಾರಣಗಳಿವೆ. ರಾಷ್ಟ್ರೀಯ ಕಾರಣಗಳು, ಅಂತಾರಾಷ್ಟ್ರೀಯ ಪರಿಸ್ಥಿತಿಗಳು ಹಾಗೂ ಭ್ರಷ್ಟಾಚಾರ ಮುಖ್ಯವಾದುವು. ಭಾರತ ಸರ್ಕಾರದ ತಪ್ಪಾದ ಮತ್ತು ದೋಷಪೂರ್ಣವಾದ ಆರ್ಥಿಕ ನೀತಿಗಳು ಹಾಗೂ ತಪ್ಪು ಯೋಜನೆಗಳು ಬಹುಮಟ್ಟಿಗೆ

ಕಾರಣವಾಗಿವೆ. ಇದರಿಂದ ಕಾಳಸಂತೆ, ಲಾಭಕೋರತನಕ್ಕೆ ಪ್ರಚೋದನೆಯಾಗುತ್ತಿದೆ. ಇದು ಕೊನೆಗೊಳ್ಳಬೇಕು. ಹೌದು ಹೇಗೆ ?

ಜನಸಂಘರ್ಷ ಸಮಿತಿಗಳು ರಚನೆಯಾಗಬೇಕು. ಅವರು ವ್ಯಾಪಾರಿಗಳಿಗೆ ಹೇಳಬೇಕು ''ನೋಡಿ ನೀವು ನಮ್ಮ ಸೋದರರು. ಅಂಗಡಿ ನಡೆಸಿ ವ್ಯಾಪಾರ ಮಾಡಿ. ಆದರೆ ನೀವು ಸರಿಯಾದ ರೀತಿ ನಡೆಸಿ, ಈಗ ಜನ ಎಚ್ಚೆತ್ತಿದೆ. '' ಹೀಗೆ ಹೇಳುವ ಜನಶಕ್ತಿಯನ್ನು ನಿರ್ಮಿಸಬೇಕು. ಅವಶ್ಯಕತೆಯ ವಸ್ತುಗಳನ್ನು ಕುರಿತಂತೆ ಜನತೆ ಸಗಟು ವ್ಯಾಪಾರಿಗಳು, ಸಣ್ಣ ವ್ಯಾಪಾರಿಗಳು, ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳು ಜೊತೆಗೂಡಿ ಬೆಲೆ ನಿರ್ಧರಿಸಿ ಆ ಬೆಲೆಗೇ ಮಾರಾಟವಾಗುವಂತೆ ನೋಡಿಕೊಳ್ಳಬೇಕು. ಪಡಿತರ ಅಂಗಡಿಗಳಿಗೆ ವಿತರಿಸುವ ಪಟ್ಟಿ ಸಂಘರ್ಷ ಸಮಿತಿಗಳಲ್ಲಿ ಇರಬೇಕು.

ನ್ಯಾಯಬೆಲೆ ಅಂಗಡಿಗಳಲ್ಲಿ ಎಷ್ಟು ಪಡಿತರ ಕೋಟಾ ಕಾರ್ಡುಗಳಿವೆ ಎಂಬುದನ್ನು ಪತ್ತೆ ಮಾಡಲು ಸರ್ಕಾರಿ ಅಧಿಕಾರಿಗಳ, ವಿದ್ಯಾರ್ಥಿಗಳ ಮತ್ತು ಜನ ಸಂಘರ್ಷ ಸಮಿತಿ ಪ್ರತಿನಿಧಿಗಳ ಸಂಯುಕ್ತ ಸಮಿತಿಗಳ ರಚನೆಯಾಗಬೇಕು. ಇವು ಜಾಗೃತ ದಳಗಳ ರೀತಿ ಕೆಲಸ ಮಾಡಬೇಕು. ನಿಗಧಿತ ಬೆಲೆಗೆ ಮಾರಾಟ, ಅಭಾವದ ಕೊರತೆ, ಕಳ್ಳಸಾಗಾಣಿಕೆ ಇವುಗಳನ್ನು ಸೇವಕ ದಳಗಳು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಜೊತೆಗೆ ಸರ್ಕಾರದ ನೀತಿಗಳಿಂದಾಗುವ ತೊಂದರೆಗಳನ್ನು ಅಧಿಕಾರಿಗಳ ಪ್ರಜಾಪ್ರತಿನಿಧಿಗಳ ಗಮನಕ್ಕೆ ತಂದು ಸರಿಪಡಿಸುವ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು.

ಶಿಕ್ಷಣ :

ಇಂಗ್ಲೀಷರ ಶಿಕ್ಷಣ ಪದ್ಧತಿಯೇ ಇಂದೂ ಮುಂದುವರೆದಿದೆ.[೧] ಎಲ್ಲೋ ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಸಣ್ಣಪುಟ್ಟ ಬದಲಾವಣೆಗಳಾಗಿವೆ. ಆದರೆ ಯಾವ ಕ್ರಾಂತಿಕಾರಿ ಬದಲಾವಣೆಯೂ ಆಗಲಿಲ್ಲ. ಡಿಗ್ರಿ ನೌಕರಿಗಾಗಿ ಎನ್ನುವಂತಾಗಿದೆ. ಯಾರೇ ಪ್ರಧಾನಮಂತ್ರಿಯಾದರೂ ಎಲ್ಲರಿಗೂ ನೌಕರಿ ಕೊಡಲಾರ. ಮಾವೋ ಯುವಕರಿಗೆ ''ಹೊಲಗಳಿಗೆ ಮತ್ತು ಕಾರ್ಖಾನೆಗಳಿಗೆ ಹೋಗಿ ಅಲ್ಲಿ ಕಲಿಯಿರಿ, ತಿಳಿದುಕೊಳ್ಳಿ. ಅದೇ ನಿಮ್ಮ ವಿಶ್ವವಿದ್ಯಾಲಯ'' ಎಂದು ಹೇಳಿದರು[೨]. ಮಹಾತ್ಮ ಗಾಂಧೀಜಿಯವರೂ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಬೇಕು. ಅವರಲ್ಲಿ ಆತ್ಮವಿಶ್ವಾಸ ಮೂಡಬೇಕು[೩]. ಅಂತಹ ಶಿಕ್ಷಣ ಬೇಕು ಎಂದು

೧. ಈಗಿನ ವಿಶ್ವವಿದ್ಯಾನಿಲಯ ಲೋಪದೋಷಗಳ ಕಂತೆ. ಅದು ಗುಮಾಸ್ತರನ್ನು ಉತ್ಪತ್ತಿ ಮಾಡುವ ಯಂತ್ರವಲ್ಲದೆ ಮತ್ತೇನೂ ಅಲ್ಲ. - **ವಿವೇಕಾನಂದ.**

೨. ನಿಜವಾದ ವಿದ್ಯೆಯನ್ನು ಪ್ರಕೃತಿಯೊಡನೆ ಬೆರೆತು ಕಲಿಯಬೇಕು. ಜ್ಞಾನವನ್ನು ಹಾಗೆ ಸಂಪಾದನೆ ಮಾಡಬೇಕು. ಹಾಗಲ್ಲದೆ ನೀನು ಒಬ್ಬ ಪಂಡಿತನ ಮನೆಯಲ್ಲಿ ಕಲಿತರೂ ಜೀವನವಿಡೀ ಮಾನವ ಕಪಿಯಂತಾಗುವೆ. - **ವಿವೇಕಾನಂದ.**

೩. ಯಾವ ವಿದ್ಯೆಯಿಂದ ನಾವು ಗುಣವಂತರಾಗಬಲ್ಲೆವೋ, ಬುದ್ಧಿಶಕ್ತಿ ವೃದ್ಧಿಯಾಗಬಲ್ಲದೋ, ದೃಢಚಿತ್ತರಾಗಬಲ್ಲೆವೋ ಹಾಗೂ ಯಾವುದರಿಂದ ನಾವು ನಮ್ಮ ಕಾಲ ಮೇಲೆ ನಿಲ್ಲಬಲ್ಲವರಾಗುವೆವೋ ಅಂತಹ ವಿದ್ಯೆ ನಮಗೆ ಬೇಕು. - **ವಿವೇಕಾನಂದ.**

ಹೇಳಿದ್ದರು. ಇಂದಾದರೋ ''ನೌಕರಿ ಕೊಡಿ, ನೌಕರಿ ಕೊಡಿ, ಗುಲಾಮತನ ಕೊಡಿ, ಗುಲಾಮತನ ಕೊಡಿ'' ಎನ್ನುವಂತಹ ಶಿಕ್ಷಣವೇ ನಡೆದಿದೆ. ನಾವು ಗುಲಾಮರಾಗ ಬೇಕಾಗಿಲ್ಲ, ದೇಶಕ್ಕಾಗಿ ಉತ್ಪಾದನೆಯನ್ನು ಸಂಘಟನೆಯನ್ನು ಮಾಡಬೇಕಾಗಿದೆ. ಪ್ರಾಧ್ಯಾಪಕರೂ ಕೂಡ ಈ ಬಗ್ಗೆ ಜವಾಬ್ದಾರಿಯಿಂದ ವಿಚಾರಮಾಡಬೇಕು. ಏಕೆಂದರೆ ಅವರು ಈ ಕ್ಷೇತ್ರದಲ್ಲಿ ತಜ್ಞರು, ಹೆಚ್ಚು ತಿಳಿದ ಅನುಭವಿಗಳು.

ನಾನೂ ಶಿಕ್ಷಣದ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ವಿದ್ಯಾರ್ಥಿಗಳನ್ನು ಒಳಗೊಂಡಂತೆ ಅನೇಕರನ್ನು ಭೇಟಿಯಾಗಿ ಚರ್ಚಿಸುತ್ತಲೇ ಇದ್ದೇನೆ. ಬಹುಪಾಲು ಜನರು ಕೇವಲ ಡಿಗ್ರಿಗಾಗಿ ಓದುತ್ತಾರೆ. ಸಾರ್ಥಕ ಶಿಕ್ಷಣದ ಕಡೆ ಅವರು ಗಮನ ಹರಿಸುವುದಿಲ್ಲ. ಬಹು ಮಟ್ಟಿನ ವಿದ್ಯಾರ್ಥಿಗಳು ತಮ್ಮ ದಿನಗೂಲಿ ವೇತನಕ್ಕಾಗಿ ಮಾತ್ರ ಓದುತ್ತಾರೆ. ಶಿಕ್ಷಕರ, ತಂದೆ ತಾಯಿಗಳ, ಪೋಷಕರ ದೃಷ್ಟಿಯೂ ಇದೇ ಆಗಿದೆ. ಇದು ಕೇವಲ ಬದುಕಿಗಾಗಿ, ಸಾರ್ಥಕ ಬದುಕಿಗಾಗಿ ಅಲ್ಲ.

ನಾನು ಎರಡು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಅವುಗಳೆಂದರೆ-

೧. ಡಿಗ್ರಿಗಳನ್ನೆ ನಿಲ್ಲಿಸಿಬಿಡುವುದು ಅಥವಾ

೨. ಡಿಗ್ರಿಗಳಿಗೂ ಮತ್ತು ಸಂಬಳಕ್ಕೂ ಇರುವ ಸಂಬಂಧವನ್ನು ತಪ್ಪಿಸುವುದು.

ಈ ಎರಡರಲ್ಲಿ ಒಂದನ್ನು ಮಾಡುವವರೆಗೂ ಶಿಕ್ಷಣದಲ್ಲಿ ಮಹತ್ವದ ಬದಲಾವಣೆ ತರಲು ಸಾಧ್ಯವಿಲ್ಲ. ನೌಕರಿ ಕೊಡುವವರು - ಅದು ಸರ್ಕಾರಿ ಕ್ಷೇತ್ರವಾಗಲಿ ಅಥವಾ ಖಾಸಗೀ ಕ್ಷೇತ್ರವಾಗಲಿ - ತಮಗೆ ಅಗತ್ಯವಿರುವ ಕೆಲಸಕ್ಕೆ ಅನುಗುಣವಾಗಿ ವಿಶಿಷ್ಟ ಪರೀಕ್ಷೆಗಳನ್ನು ಅವರೇ ನಡೆಸಬಹುದು. ಉದ್ಯೋಗ ನೀಡಿದ ನಂತರ ತರಬೇತಿ ವ್ಯವಸ್ಥೆ ಯನ್ನೂ ಮಾಡಬಹುದು.

ಡಿಗ್ರಿಗಳನ್ನು ಕೊಡುವುದನ್ನು ನಿಲ್ಲಿಸುವುದು ತೀರಾ ಹೊಸ ಕ್ರಾಂತಿಕಾರಿ ವಿಚಾರವಲ್ಲ. ಈಗಿನ ಪರಿಸ್ಥಿತಿಯಲ್ಲಿ ಇದು ಬಹಳ ಅಗತ್ಯವಾದ ಕೆಲಸ. ಈ ಡಿಗ್ರಿಯ ಬದಲು ಏನು ಇರುತ್ತದೆ ? ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಎಷ್ಟು ವರ್ಷಗಳು ಇದ್ದ, ಎಷ್ಟು ಘಂಟೆಗಳು ತರಗತಿಯಲ್ಲಿ ಇದ್ದ, ಅಂಗಡಿ, ಕಾರ್ಖಾನೆ, ಕಛೇರಿ ಮತ್ತು ಹೊಲದಲ್ಲಿ ಎಷ್ಟುದಿನ ಕೆಲಸ ಮಾಡಿದ ಎನ್ನುವ ಕುರಿತು ಪ್ರಮಾಣ ಪತ್ರ ನೀಡುವ ಪದ್ಧತಿ ಜಾರಿಗೆ ಬರಬೇಕು. ಯಾವ ವಿಷಯದಲ್ಲಿ ಅವನಿಗೆ ವಿಶೇಷ ಆಸಕ್ತಿ ಇದೆ ಎಂಬುದೂ ಅದರಲ್ಲಿ ನಮೂದಿತವಾಗಬೇಕು. ಅವನ ಯೋಗ್ಯತೆ, ಕಾರ್ಯಕುಶಲತೆಯನ್ನು ಪರೀಕ್ಷಿಸಿ ಕಂಡುಕೊಳ್ಳುವುದು ಕೆಲಸ ಕೊಡುವವರ ಜವಾಬ್ದಾರಿಗೆ ಬಿಡಬೇಕು. ಒಂದು

---

೪. ಯಾವುದರಿಂದ ಜನರು ಉದ್ಯೋಗಕ್ಕೆ ಹುಡುಕಿಕೊಂಡು ಅಲೆಯುವುದರ ಬದಲು ತಮಗೆ ಸಾಕಾಗುವಷ್ಟನ್ನು ಸಂಪಾದಿಸಿ ಕಷ್ಟಕಾಲಕ್ಕೆ ಕೊಂಚ ಉಳಿಸುವಷ್ಟನ್ನು ಸಂಪಾದಿಸಬಹುದೋ ಅಂತಹ ಶಿಕ್ಷಣ ಅವಶ್ಯಕ. - ವಿವೇಕಾನಂದ.

ವೇಳೆ ವಿದ್ಯಾರ್ಥಿ ಯಾದವನು ಸ್ವಂತ ಉದ್ಯೋಗವನ್ನು ನಡೆಸುವ ಯೋಜನೆಯನ್ನು ಹಾಕಿಕೊಂಡರೆ ಅವನಿಗೆ ವಿಶ್ವವಿದ್ಯಾಲಯ ಹಾಗೂ ಜ್ಞಾನ ನೀಡುವ ಇತರ ಮಾಧ್ಯಮ ಗಳಾದ ಕಾರ್ಖಾನೆ, ಕಛೇರಿ ಮತ್ತು ವ್ಯವಸಾಯ ಕ್ಷೇತ್ರಗಳು ಅಗತ್ಯವಾದ ಜ್ಞಾನ ಮತ್ತು ಕೌಶಲವನ್ನು ಕಲಿಸಲು ಸಹಾಯ ಮಾಡಬೇಕು. ಇವುಗಳಿಗೆ ಯಾವ ಶೈಕ್ಷಣಿಕ ಪದವಿಗಳ ಅವಶ್ಯಕತೆಯೂ ಇಲ್ಲ ಎಂಬುದು ಸ್ಪಷ್ಟ.

ಹಾಗೆ ನೋಡಿದರೆ ಆಂದೋಲನವೇ ಒಂದು ಮಹಾ ವಿಶ್ವವಿದ್ಯಾಲಯ. ವಿದ್ಯಾರ್ಥಿಗಳಿಗೆ ಇಲ್ಲಿ ಸಿಗುವ ಸ್ವಯಂ ಶಿಕ್ಷಣವೇ ಅತ್ಯಂತ ಮಹತ್ವಪೂರ್ಣವಾದುದು. ಈ ಆಂದೋಲನ ಪ್ರತ್ಯಕ್ಷ ಜೀವನ. ಶಾಲೆ-ಕಾಲೇಜುಗಳಲ್ಲಿ ಯಾವುದನ್ನು ಓದಿ ಕಲಿಯ ಲಾರರೋ ಅದನ್ನು ಇಲ್ಲಿ ಕಲಿಯುತ್ತಾರೆ. ಉದಾಹರಣೆಗೆ ವಿದ್ಯಾರ್ಥಿಗಳು ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಿದ್ದಾರೆ ಎಂದರೆ ಭ್ರಷ್ಟಾಚಾರ ಏತಕ್ಕಾಗಿ ಇದೆ? ಅದು ಹೇಗೆ ನಿರ್ಮಾಣ ವಾಗುತ್ತದೆ ? ಅದನ್ನು ಹೋಗಲಾಡಿಸುವ ಬಗೆ ಹೇಗೆ ? ಈ ಕುರಿತು ತಿಳಿದವರಿಂದ ತಿಳಿವ ಅವಕಾಶವಾಗುತ್ತದೆ. ಹೇಗೆ ನಿರ್ಮೂಲನ ಮಾಡಬೇಕೆಂದು ಅಧ್ಯಯನ ಮಾಡುತ್ತಾರೆ. ಬೆಲೆ ಏರಿಕೆ ಇದ್ದರೆ ಅದು ಏತಕ್ಕಾಗಿ ಇದೆ ? ಅದನ್ನು ದೂರ ಮಾಡುವ ಬಗೆ ಹೇಗೆ ? ಅರ್ಥ ಶಾಸ್ತ್ರಜ್ಞರ ಅಭಿಪ್ರಾಯಗಳು ಈ ಬಗ್ಗೆ ಇವೆ. ಅವುಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರಬೇಕು. ಇದೇ ರೀತಿ ನಿರುದ್ಯೋಗ, ಚುನಾವಣಾ ಪದ್ಧತಿಗಳು, ವಿವಿಧ ಕಾನೂನುಗಳು ಮತ್ತು ಅವುಗಳಲ್ಲಿಯ ದೋಷಗಳು, ಈ ದೋಷಗಳನ್ನು ದೂರಮಾಡುವ ಉಪಾಯ ಗಳು ಇವುಗಳನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು. ಸ್ಕೂಲು ಮತ್ತು ಕಾಲೇಜುಗಳಲ್ಲಿ ಈ ಶಿಕ್ಷಣ ದೊರೆಯುವುದಿಲ್ಲ.

ವಿಷಯ ಪಟ್ಟಿಗಳಿಗನುಸಾರವಾಗಿ ನಾವು ವಿದ್ಯಾರ್ಥಿಗಳಿಗೆ ನೆರವಾಗಬೇಕು. ಇದಲ್ಲದೆ ಬಯಲು ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಅವರಿಗೆ ಶಿಕ್ಷಣ ನೀಡುವ ಯೋಜನೆ ಗಳನ್ನು ರೂಪಿಸಿಕೊಳ್ಳಬೇಕು. ಆಂದೋಲನದ ಅನುಭವದಿಂದ ವಿದ್ಯಾರ್ಥಿಗಳ ಶಿಕ್ಷಣ ಪಕ್ವ ವಾಗುತ್ತದೆ, ಪೂರ್ಣವಾಗುತ್ತದೆ.

ನಮ್ಮದು ಪ್ರಜಾತಂತ್ರ :

ನಮ್ಮದು ಹಿಂದುಳಿದ ದೇಶ. ಆದಕಾರಣ ಇಲ್ಲಿ ಅಧಿಕಾರಕ್ಕೆ, ಸರ್ಕಾರಕ್ಕೆ ಹಾಗೂ ಮಠಪೀಠಗಳಿಗೆ ಮಹತ್ವ ಜಾಸ್ತಿ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ರಾಜಕಾರಣಕ್ಕೆ ನಮ್ಮಷ್ಟು ಮಹತ್ವವನ್ನು ಕೊಡುವುದಿಲ್ಲ. ಇಲ್ಲಿ ಅಧಿಕಾರ ಸ್ಥಾನಮಾನಗಳು ಗೌರವದ ಪ್ರಶ್ನೆ ಯಾಗಿದ್ದರೆ ಅಲ್ಲಿ ಅವು ಜವಾಬ್ದಾರಿ ಸ್ಥಾನಗಳು ಅಷ್ಟೆ.

ನಮ್ಮದು ಹಿಂದುಳಿದ ರಾಷ್ಟ್ರವಾದರೂ ನಾವು ಪ್ರಜಾತಂತ್ರವನ್ನು ಅಳವಡಿಸಿ ಕೊಂಡಿದ್ದೇವೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಪ್ರಜಾತಂತ್ರವು ಸರಿಯಾದ ಮಾರ್ಗ ದಲ್ಲಿ ಹೋಗುವಂತೆ ಮಾಡಲು ಪ್ರಭಲವಾದ ಹಾಗೂ ಅಷ್ಟೇ ಪರಿಣಾಮಕಾರಿಯಾದ ವಿರೋಧ ಪಕ್ಷ ಇರುತ್ತದೆ. ಹಿಂದುಳಿದ ರಾಷ್ಟ್ರಗಳಲ್ಲಿ ಅದರ ಕೊರತೆ ಹೆಚ್ಚಾಗಿದೆ.

ಅಮೆರಿಕಾದ ಅಧ್ಯಕ್ಷ ನಿಕ್ಸನ್ ಭ್ರಷ್ಟಾಚಾರ ಮಾಡಿದ, ಅವನ ಮೇಲೆ ಅಪರಾಧದ ಆರೋಪ ಹೊರಿಸುವ ಸ್ಥಿತಿ ಬಂತು. ಆದರೆ ಇಲ್ಲಿ ಯಾರ ಮೇಲೂ ಆರೋಪ ಹೊರಿಸುವ ಹಾಗಿಲ್ಲ. ಅಮೆರಿಕಾದಲ್ಲಿ ಒಂದು ವಾಟರ್‌ಗೇಟ್ ಆಗಿದ್ದಕ್ಕೆ ಎಷ್ಟು ಬದಲಾವಣೆ ಆಯಿತು. ಇಲ್ಲಾದರೋ ಹಗಲೂ ರಾತ್ರಿ ವಾಟರ್‌ಗೇಟ್‌ಗಳು ನಡೆಯುತ್ತಿರುತ್ತವೆ. ಕೇಳುವವರೇ ಇಲ್ಲ. ಅಲ್ಲಿ ಎರಡು ಪಕ್ಷಗಳು ಪೈಪೋಟಿಯಿಂದ ಕೆಲಸಮಾಡಿದರೆ ಇಲ್ಲಿ ಕೇಳುವವರೇ ಇಲ್ಲ. ಲೆಕ್ಕವಿಲ್ಲದಷ್ಟು ಪಕ್ಷಗಳು. ಕಾಂಗ್ರೆಸ್ ಬಹುದೊಡ್ಡ ಆನೆ. ಮಿಕ್ಕವು ಸಣ್ಣ ಸಣ್ಣ ಪಕ್ಷಗಳು. ಇವೂ ಐಕ್ಯದಿಂದಿಲ್ಲ. ಈ ಸಮತೋಲನವಿಲ್ಲದ ರಾಜನೈತಿಕ ಪದ್ಧತಿಯಲ್ಲಿ ಅದನ್ನು ತಿದ್ದಬಲ್ಲ ಒಂದು ಶಕ್ತಿಯೇ ಇಲ್ಲ.

ಎರಡನೆಯದು ಪ್ರಜಾಭಿಪ್ರಾಯ. ಅಮೆರಿಕಾದಲ್ಲಿ ಅವರವರ ಚುನಾವಣಾ ಕ್ಷೇತ್ರದಲ್ಲಿ ಪಕ್ಷಗಳ ಕುರಿತು ಅವರ ಸಾಮರ್ಥ್ಯ, ನಿಲುವುಗಳ ಕುರಿತು ಪ್ರಜಾಭಿಪ್ರಾಯ ಕ್ರೋಢೀಕೃತವಾಗುತ್ತದೆ. ಅಲ್ಲಿಯ ಪ್ರತಿಯೊಬ್ಬನ ಕಿವಿಯೂ ತನ್ನ ಚುನಾವಣಾ ಕ್ಷೇತ್ರದಲ್ಲಿ ಜಾಗೃತವಾಗಿರುತ್ತದೆ. ಇಲ್ಲಿ ಅದರ ಲಕ್ಷ್ಯವೇ ಇಲ್ಲ. ಪ್ರಜಾಭಿಪ್ರಾಯ ಎಂಬುದು ಇಲ್ಲವೇ ಇಲ್ಲ.

ಮೂರನೆಯದು ಪತ್ರಿಕೆಗಳ ಪಾತ್ರ. ಪ್ರಜಾತಂತ್ರದಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದು. ಸ್ವತಂತ್ರವಾದ ಸಾಹಸ ಪ್ರವೃತ್ತಿಯ ಪತ್ರಿಕೆಗಳು ಇಲ್ಲವೇ ಇಲ್ಲ ಎನ್ನುವಷ್ಟು ಶೂನ್ಯ ಆವರಿಸಿದೆ. ಅಂಥ ಪರಿಸ್ಥಿತಿಯಲ್ಲೂ ನಿರ್ಭೀತಿಯಿಂದ ಬರೆಯುವವರು ಇದ್ದಾರೆ. ಆದರೆ ಅವರ ಮೇಲೆ ಎಲ್ಲಿಲ್ಲದ ಒತ್ತಡ, ಪ್ರಭಾವ ಬೀಳುತ್ತದೆ. ಜಾಹಿರಾತು ನಿಂತು ಹೋಗುತ್ತದೆ. ಮಾನ್ಯತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಪ್ರದೀಪ ಪತ್ರಿಕೆ ಮನ್ನಣೆ ಪಡೆಯಲಿಲ್ಲ , ಜಾಹಿರಾತು ನಿಂತು ಹೋಯಿತು. ಸರ್ಚ್‌ಲೈಟ್ ಪತ್ರಿಕೆಯದೂ ಇದೇ ಸ್ಥಿತಿ. ಭಾರತದಲ್ಲಿ ಸ್ವತಂತ್ರ ಪತ್ರಿಕೆಗಳು ಇಲ್ಲ. ಅವು ಬಂಡವಾಳ ಶಾಹಿಗಳ ಹಿಡಿತ ದಲ್ಲಿವೆ. ಸ್ವತಂತ್ರ ಪತ್ರಿಕೆಗಳಿಲ್ಲದೆ ಪ್ರಜಾತಂತ್ರ ನಡೆಯುವುದೆಂತು ? ವಾಷಿಂಗ್‌ಟನ್ ಪೋಸ್ಟ್, ನ್ಯೂಯಾರ್ಕ್ ಟೈಂಸ್‌ನಂಥ ಪತ್ರಿಕೆಗಳು ಅಧ್ಯಕ್ಷ ನಿಕ್ಸನ್ ನಂತವರನ್ನು ಉಸಿರಾಡ ದಂತೆ ಮಾಡಿದವು. ಯಾರೂ ಅವರ ತಂಟೆಗೆ ಹೋಗುವುದಕ್ಕಾಗುವುದಿಲ್ಲ. ಅವರ ಜಾಹಿರಾತುಗಳನ್ನು ನಿಲ್ಲಿಸುವುದಕ್ಕಾಗಲೀ, ಮಾನ್ಯತೆ ರದ್ದು ಮಾಡುವುದಕ್ಕಾಗಲೀ ಯಾರಿಗೂ ಧೈರ್ಯವಿಲ್ಲ. ಸರ್ಕಾರದ ಜಾಹಿರಾತುಗಳ ಮೇಲೆ ಆ ಪತ್ರಿಕೆಗಳು ಅವಲಂಬಿತವಾಗಿಯೂ ಇಲ್ಲ. ಏಕೆಂದರೆ ಅಭಿವೃದ್ಧಿ ಹೊಂದಿದ ಸಮಾಜ ಅದು.

ನಾಲ್ಕನೆಯದು ವಿದ್ವತ್ತಿನ ಮನ್ನಣೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಇದೊಂದು ದೊಡ್ಡಶಕ್ತಿ . ಕಿಸಿಂಜರ್ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಬಂದು ಒಂದು ಸರ್ಕಾರದ ವಿದೇಶಾಂಗ ಕಾರ್ಯದರ್ಶಿಗಳಾಗುತ್ತಾರೆ. ಶಕ್ತಿಶಾಲಿಯಾದ ಪ್ರೊಫೆಸರ್ ಅವರು. ಕಾರ್ಯದರ್ಶಿಯ ಕಾರ್ಯ ನಿಂತರೆ ಮರಳಿ ವಿಶ್ವವಿದ್ಯಾಲಯಕ್ಕೆ ಹೋಗುತ್ತಾರೆ. ಗಾಲ್‌ಬ್ರೈತ್ ಭಾರತದಲ್ಲಿ ರಾಯಭಾರಿಯಾಗಿದ್ದರು. ಅವರು ಮರಳಿ ಹಾರ್ವರ್ಡ್‌ಗೆ ಹಿಂದಿರುಗಿದರು. ಇಂಥ ಜನರು ಏನಾದರೂ ಹೇಳಿದರೆ ಇಡೀ ದೇಶದ ಮೇಲೆ

ಪ್ರಭಾವ ಬೀರುತ್ತದೆ. ನಮ್ಮ ದೇಶದಲ್ಲಿ ? ವಿದ್ಯಾರ್ಥಿಗಳಲ್ಲಿ ಸ್ವಲ್ಪ ಧೈರ್ಯವಿದೆ. ಶಿಕ್ಷಕರಲ್ಲಿ ಧೈರ್ಯವಿಲ್ಲ. ಇಲ್ಲಿಯ ವಿಶ್ವವಿದ್ಯಾಲಯಗಳು ಆಡಳಿತ ವ್ಯವಸ್ಥೆಯ ಅಂಗಗಳು. ಆಂದೋಲನಕ್ಕೆ ಬೆಂಬಲ ಕೊಟ್ಟರೆ ಉದ್ಯೋಗ ಹೋಗಿಬಿಡುತ್ತದೆಂಬ ಭಯ. ಹಾಗಾಗಿ ಶಾಸನದ ಹಾಗೂ ಜನತೆಯ ನಡುವಿನ ಸಂರಚನೆಯ ಕೊರತೆ ನಮ್ಮ ದೇಶದಲ್ಲಿದೆ. ಜನ ಓಟು ಹಾಕುವುದನ್ನು ಬಿಟ್ಟರೆ ಮತ್ತೇನನ್ನೂ ಮಾಡಲು ಸಾಧ್ಯವಿಲ್ಲ. ಇದರಿಂದಾಗಿ ಸಚಿವರೂ, ಶಾಸಕರೂ ನಿರಂಕುಶರೂ ಸ್ವೇಚ್ಛಾಚಾರಿಗಳೂ ಆಗಿಬಿಡುತ್ತಾರೆ. ಚುನಾವಣೆಯಲ್ಲಿ ಭ್ರಷ್ಟಾಚಾರ ಇರುವುದರಿಂದ ಇವರು ಯಾವುದಕ್ಕೂ ಹೆದರುವುದಿಲ್ಲ.

ಚುನಾವಣೆಯ ಸಂದರ್ಭದಲ್ಲಿ ಬಡತನ ತೊಲಗಿಸಿ ಎಂಬ ಸಮಾಜವಾದದ ಘೋಷಣೆಯನ್ನು ಕೂಗುತ್ತಾರೆ, ಜೊತೆಗೆ ಕಾಳಸಂತೆ ಖದೀಮರಿಂದ ಲೆಕ್ಕಕ್ಕೆ ಸಿಗದ ಕೋಟ್ಯಂತರ ರೂಪಾಯಿಗಳನ್ನು ಪಕ್ಷದ ಬೊಕ್ಕಸಕ್ಕೆ ಸಂಗ್ರಹಿಸುತ್ತಾರೆ. ನಾನು ಅನೇಕ ವರ್ಷಗಳಿಂದ ಹೇಳುತ್ತಲೇ ಬಂದಿದ್ದೇನೆ. ಈ ಚುನಾವಣಾ ಪದ್ಧತಿಯಲ್ಲಿ ಆಮೂಲಾಗ್ರ ಪರಿವರ್ತನೆ ಆಗಬೇಕು, ಚುನಾವಣಾ ವೆಚ್ಚ ಕಡಿಮೆಯಾಗಬೇಕು. ಬಡವರೂ ಸ್ಪರ್ಧಿಸಲು ಅವಕಾಶ ಇರಬೇಕು ಎಂದು. ಇತ್ತ ಯಾರ ಗಮನವೂ ಹರಿಯುವುದಿಲ್ಲ.

ಚುನಾವಣೆ ಬಂದಾಗಲೆಲ್ಲಾ ಜನತೆ ಮತದಾನ ಮಾಡಬೇಕು. ಇಲ್ಲಿಯ ಜನರಿಗೆ ಇರುವ ಅಧಿಕಾರ ಅದೊಂದೇ, ಮುಗಿಯಿತು. ಇದನ್ನು ಬಿಟ್ಟು ಅವರಿಗೆ ಮತ್ತಾವ ಸ್ಥಾನವೂ ಇಲ್ಲ. ಯಾವ ನಾಗರಿಕ ಅಧಿಕಾರವೂ ಇಲ್ಲ. ಆ ಅಧಿಕಾರವನ್ನೂ ನಮ್ಮಿಂದ ಕಿತ್ತುಕೊಳ್ಳಲಾಗುತ್ತಿದೆ. ಕಾರಣ ಚುನಾವಣೆಗಳು ಮುಕ್ತವಾತಾವರಣದಲ್ಲಿ ಪ್ರಾಮಾಣಿಕವಾಗಿ ನಡೆಯುವುದಿಲ್ಲ, ನ್ಯಾಯವಾಗಿಯೂ ಇಲ್ಲ ಅಥವಾ ಸ್ವತಂತ್ರವಾಗಿಯೂ ಇಲ್ಲ.

ಮೊಟ್ಟ ಮೊದಲನೆಯದೆಂದರೆ ನಮ್ಮ ದೇಶದ ಚುನಾವಣೆಯ ಕಾನೂನು ಅಪೂರ್ಣವಾಗಿದೆ. ಅದು ಭ್ರಷ್ಟಾಚಾರಕ್ಕೆ ಎಡೆಕೊಡುವಂಥದ್ದೂ ಆಗಿದೆ. ಈ ಚುನಾವಣಾ ಕಾನೂನು ಬದಲಾಗಬೇಕೆಂದು ಅನೇಕ ವರ್ಷಗಳಿಂದ ಹೇಳುತ್ತಿದ್ದರೂ ಕೇಂದ್ರದಲ್ಲಿ ಅಧಿಕಾರದಲ್ಲಿರುವವರು ಕಿವಿಗೊಡುವುದೇ ಇಲ್ಲ.

ನಮ್ಮ ಈ ಪ್ರಜಾತಂತ್ರದಲ್ಲಿ ಪ್ರಾಣವಿಲ್ಲ , ರಕ್ತವಿಲ್ಲ , ಮಾಂಸವಿಲ್ಲ , ಕೇವಲ ಎಲುಬು ಮಾತ್ರ ಇದೆ. ಒಂದು ರಾಜ್ಯಾಂಗವಿದೆ, ಕಾನೂನಿದೆ ಅಲ್ಲಿಗೆ ಮುಗಿಯಿತು. ರಾಜ್ಯಾಂಗಕ್ಕೆ ಅನುಗುಣವಾಗಿ ರಾಜ್ಯಗಳಿಗೆ ಸ್ವಾಯತ್ತತೆ ಇರುವುದು ಕೇವಲ ಕಾನೂನಿನಲ್ಲಿ ಮಾತ್ರ. ಮುಖ್ಯಮಂತ್ರಿಯನ್ನು ಆರಿಸುವುದು ಶಾಸಕರಲ್ಲ , ಹೈಕಮ್ಯಾಂಡ್! ಮಂತ್ರಿಗಳ ಪಟ್ಟಿಯನ್ನೂ ಅವರೇ ಕಳಿಸುತ್ತಾರೆ. ಇದು ರಾಜ್ಯಾಂಗಕ್ಕೆ ಸಂಬಂಧಪಟ್ಟದ್ದರೆ ಪಕ್ಷಗಳ ಕಥೆಯೂ ಅದೇ ಆಗಿದೆ. ರಾಜ್ಯ, ಜಿಲ್ಲೆ, ತಾಲ್ಲೂಕುಗಳ ಪಕ್ಷದ ಅಧ್ಯಕ್ಷನ ಆಯ್ಕೆಯೂ ದೆಹಲಿಯಿಂದಲೆ. ಜನತಂತ್ರಕ್ಕೆ ಅರ್ಥವಿದೆಯೆ ?

ನಮ್ಮ ಪಕ್ಷದಲ್ಲಿ ಭ್ರಷ್ಟಾಚಾರವಿಲ್ಲ, ಚುನಾವಣೆಯಲ್ಲಿ ನಮ್ಮ ಪಕ್ಷ ಭ್ರಷ್ಟಾಚಾರ ಮಾಡುವುದಿಲ್ಲ , ನಮ್ಮ ಪಕ್ಷ ಕಪ್ಪು ಹಣ ಪಡೆಯುವುದಿಲ್ಲ ಎಂದು ಎದೆಯ ಮೇಲೆ

ಕೈಯಿಟ್ಟು ಹೇಳುವ ಧೈರ್ಯ ಯಾವುದಾದರೂ ಪಕ್ಷಕ್ಕೆ ಇದೆಯೇ ? ಅಧಿಕಾರದಲ್ಲಿರುವ ಪಕ್ಷಕ್ಕೆ ಹೆಚ್ಚು ಕಪ್ಪು ಹಣ ಸಿಗುತ್ತಿರಬಹುದು. ಅಧಿಕಾರದಲ್ಲಿಲ್ಲದ ಪಕ್ಷಕ್ಕೆ ಕಡಿಮೆ ಹಣ ಸಿಗುತ್ತಿರಬಹುದು ಅಷ್ಟೆ , ಹೆಚ್ಚಿನ ವ್ಯತ್ಯಾಸ ಏನೂ ಇಲ್ಲ.

ಒಮ್ಮೆ ಆರಿಸಿ ಕಳುಹಿಸಿದ ಪ್ರತಿನಿಧಿಗಳ ಮೇಲೆ ನಮಗೆ ನಂಬಿಕೆ ಹೋಗಿಬಿಟ್ಟರೆ ಅವರನ್ನು ವಾಪಸ್ಸು ಕರೆಸುವ ಪದ್ಧತಿ ಜಾರಿಗೆ ಬರಬೇಕು. ಈಗ ಪ್ರಜಾತಂತ್ರ ಹೋಗಿ ತಂತ್ರವೇ ಮೇಲುಗೈ ಪಡೆದಿದೆ. ಆದಷ್ಟು ಕಡಿಮೆ ಇರುವ ಶಾಸನವೇ ಉತ್ತಮ ಶಾಸನ ಎಂದರು ಗಾಂಧೀಜಿ. ಆದರೆ ಈಗ ಶಾಸನದ ಮೇಲೆ ಶಾಸನ. ಎಲ್ಲವನ್ನೂ ಸರ್ಕಾರವೇ ನಡೆಸಿಕೊಂಡು ಹೋಗುವಂಥ ಪದ್ಧತಿ ಬೆಳೆಯುತ್ತಿದೆ. ನಾಳೆ ಮಕ್ಕಳ ಮದುವೆ ಸಹ ಶಾಸನದ ಮೂಲಕವೇ ನಡೆಯುತ್ತದೆ. ಅಂತೂ ಸರ್ಕಾರದ ನಡಿಗೆ ತಪ್ಪುಹಾದಿ ಹಿಡಿಯುತ್ತಿದೆ. ಸರಿಯಾದ ರೀತಿಯಿಂದ ಅದರ ದಿಕ್ಕನ್ನು ಬದಲಿಸಬೇಕು, ಶಾಂತಿಯ ಮಾರ್ಗದಿಂದ, ಜನತೆಯ ಶಕ್ತಿಯಿಂದ, ಗೂಂಡಾಗಿರಿಯಿಂದ ಅಲ್ಲ. ಜನತೆಯ ಮತಪ್ರದರ್ಶನ ಮಾಡಿ, ಜನತೆಯ ಶಕ್ತಿ ಪ್ರದರ್ಶನ ಮಾಡಿ ಸಂಘಟಿತ ರೂಪದಲ್ಲಿ ಈ ದಿಶೆಯನ್ನು ಬದಲಿಸಬೇಕು.

ನನಗೆ ಅಧಿಕಾರ ಹಿಡಿಯುವುದರಲ್ಲಿ [೧] ನಂಬಿಕೆ ಇಲ್ಲ , ಕೇವಲ ಅಧಿಕಾರ ಹಿಡಿಯುವುದರಿಂದ ಏನೂ ಆಗುವುದಿಲ್ಲ , ಏನಾದರೂ ಆಗುವುದಿದ್ದರೆ ಅದು ಜನತೆಯ ರಾಜನೀತಿಯಿಂದ, ಲೋಕ ನೀತಿಯಿಂದ ಮಾತ್ರ. ಇದನ್ನು ನಾವು ನೇಮಿಸುತ್ತೇವೆ, ರಚಿಸುತ್ತೇವೆ. ಈ ದೇಶದ ಜನತೆ ರಚಿಸುತ್ತದೆ. ಭಾರತದ ತರುಣರು ಇದನ್ನು ರಚಿಸುತ್ತಾರೆ. ಈ ಆಸೆ ಇಲ್ಲದಿದ್ದರೆ ಈ ಇಳಿವಯಸ್ಸಿನಲ್ಲಿ ಈ ಹೋರಾಟದಲ್ಲಿ ಇರುತ್ತಿರಲಿಲ್ಲ . ಇಂದಿನ ರಾಜನೀತಿಯನ್ನು ಜಾಗ್ರತ ಜನತೆಯ ಶಕ್ತಿಯ ಮೂಲಕ ಬದಲಾಯಿಸುವುದು ಹೇಗೆ ?

ವಿದ್ಯಾರ್ಥಿಗಳು, ಜನರು ಜಾಗೃತರಾಗುತ್ತಿದ್ದಾರೆ. ಹೊಸದನ್ನು ಬೇಡುತ್ತಿದ್ದಾರೆ. ಈಗಿನ ವ್ಯವಸ್ಥೆಯ ವಿರುದ್ಧ ಅವರಿಗೆ ಅಸಮಾಧಾನವಿದೆ. ಬದಲಾವಣೆಗಾಗಿ ತುಡಿಯುತ್ತಿದ್ದಾರೆ. ಈಗ ಸಂಘಟಿತ ಮತದಾರರ ಪಡೆಗಳು ನಿರ್ಮಾಣವಾಗಿ ಶಕ್ತಿ ಮೂಡಿ ಅವರೊಳಗಿಂದಲೇ ಉತ್ತಮ ಉಮೇದುವಾರರು ಆರಿಸಿ ಬರುವಂತಾಗಬೇಕು. ಹಾಗೆ ಆಯ್ಕೆಯಾದವರ ಮೇಲೆ ಮತದಾರರ ಹಿಡಿತವಿರಬೇಕು. ಈ ಬಗ್ಗೆ ನನ್ನ ಕೆಲವು ಸಲಹೆಗಳು ಇವೆ. ವಿಧಾನಸಭೆಯ ಮುಂದಿನ ಚುನಾವಣೆಯಾದರೆ ಛಾತ್ರ ಸಂಘರ್ಷ ಮತ್ತು ಜನ ಸಂಘರ್ಷ ಸಮಿತಿಗಳು ಒಂದಾಗಿ ಒಮ್ಮತದಿಂದ ತಮ್ಮ ಉಮೇದುವಾರರನ್ನು ನಿಲ್ಲಿಸಲಿ. ಒಮ್ಮತ ಏರ್ಪಡದಿದ್ದರೆ ನಿಂತಿರುವ ಉಮೇದುವಾರರಲ್ಲಿ ಒಬ್ಬರನ್ನು ಸಮರ್ಥಿಸುವ ನಿರ್ಣಯವನ್ನಾದರೂ ಮಾಡಲಿ. ಇದರಿಂದ ಚುನಾವಣಾ ಪದ್ಧತಿಯಲ್ಲಿ ಜನತೆ ಬಹು ದೊಡ್ಡ ಪಾತ್ರ ವಹಿಸಿದಂತಾಗುತ್ತದೆ. ಎರಡನೆಯ ವಿಚಾರ ಎಂದರೆ ಚುನಾವಣೆಯಲ್ಲಿ

---

೧ ಪ್ರೊ॥ ವಿ.ಸೀ.ಯವರನ್ನು ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ನಾನು ಒಮ್ಮೆ ಭೇಟಿಯಾದಾಗ ಜೆ.ಪಿ.ಯವರನ್ನು ಕುರಿತು 'ಇವನು ಕ್ರಾಂತಿ ಅಂತ ಉದ್ದಗಲ ಓಡಾಡ್ತಾನೆ. ಅಧಿಕಾರ ತೆಗೆದುಕೊಂಡು ಅದೇನು ಮಾಡ್ತೀಯೋ ಮಾಡು ಅಂದ್ರೆ ಅಧಿಕಾರ ಬೇಡ ಅಂತಾನೆ' ಎಂದಿದ್ದರು. **ಜಹೊನಾ.**

ಯಾರೇ ಆರಿಸಿ ಬಂದರೂ ಅವನ ಮುಂದಿನ ಕಾರ್ಯಕ್ರಮದ ಬಗ್ಗೆ ಈ ಸಂಘರ್ಷ ಸಮಿತಿಗಳು ಗಮನವಿರಿಸಬೇಕು. ಉಮೇದುವಾರ ತಪ್ಪು ಹೆಜ್ಜೆ ಇಟ್ಟರೆ ರಾಜೀನಾಮೆ ಕೊಡುವಂತೆ ಒತ್ತಾಯಮಾಡಬೇಕು. ಈ ರೀತಿ ಶಾಸಕರ ಮೇಲೆ ಜನತೆಯ ಹಿಡಿತ ಇದ್ದರೆ ಇಂದಿನ ಉಚ್ಛೃಂಖಲತೆ, ನಿರಂಕುಶತೆ, ಸ್ವೇಚ್ಛಾವರ್ತನೆ ಎಲ್ಲವೂ ಇಲ್ಲವಾಗುತ್ತವೆ.

ನಮ್ಮ ಪ್ರಜಾತಂತ್ರ ಸಂಕುಚಿತವಾದ ತಳಹದಿಯ ಮೇಲೆ ನಿಂತಿದೆ. ಇದೊಂದು ತಲೆಕೆಳಗಾಗಿ ನಿಂತಿರುವ ಪಿರಮಿಡ್‌ನಂತೆ. ತಲೆ ಮೇಲೆ ಇಡೀ ಶರೀರ ನಿಂತಿದೆ. ಭಾರತದಲ್ಲಿ ಶೇಕಡಾ ೮೨ರಷ್ಟು ಜನ ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಅವರ ಕಣ್ಣಿನಲ್ಲಿ ರಕ್ತವೇ ಇಲ್ಲ. ನೀರು ತುಂಬಿಕೊಂಡಿದೆ. ಈ ಜನ ಜಾಗೃತಿಗೊಂಡಾಗ ಮಾತ್ರ ಅವರ ಸಮಸ್ಯೆಗಳು ಬಗೆಹರಿಯುತ್ತವೆ. ಇಂದು ಗ್ರಾಮೀಣ ಜನತೆ ನಿದ್ದೆಯ ಮಂಪರಿನಲ್ಲಿದ್ದಾರೆ. ಅವರನ್ನು ಎಚ್ಚರಿಸಬೇಕು, ಸಂಘಟಿಸಬೇಕು. ಹಳ್ಳಿಹಳ್ಳಿಗಳಲ್ಲಿ ಗ್ರಾಮ ಸಭೆಗಳನ್ನು ರಚಿಸಬೇಕು. ಮಾಡಬೇಕಾದ ಮೊದಲ ಕೆಲಸವೆಂದರೆ ಪ್ರತಿಯೊಂದು ಮತ ಪೆಟ್ಟಿಗೆಗಳ ಹತ್ತಿರ ಜಾಗೃತ ಮತದಾರರ ಮಂಡಲಗಳನ್ನು ರಚಿಸಬೇಕು.

ಇನ್ನು ಎರಡನೆಯ ಕೆಲಸವೆಂದರೆ ಗ್ರಾಮಸಭೆಗಳ ಪ್ರತಿನಿಧಿ ಮಂಡಲವನ್ನು ರಚಿಸುವುದು. ಉದಾಹರಣೆಗೆ ಒಂದು ಚುನಾವಣಾ ಕ್ಷೇತ್ರದಲ್ಲಿ ನೂರು ಗ್ರಾಮಸಭೆಗಳಿದ್ದರೆ ಪ್ರತಿಯೊಂದು ಗ್ರಾಮಸಭೆಯೂ ತನ್ನ ಜನಸಂಖ್ಯೆಗನುಸಾರವಾಗಿ ೧- ೨ -೩ ಅಥವಾ ೪ ಪ್ರತಿನಿಧಿಗಳನ್ನು ಆರಿಸುತ್ತಾರೆ. ಹೀಗೆ ನೂರು ಹಳ್ಳಿಗಳಿಂದ ಮೂರುನೂರು - ನಾಲ್ಕು ನೂರು ಪ್ರತಿನಿಧಿಗಳನ್ನು ಚುನಾವಣಾ ಕ್ಷೇತ್ರದ ಮತದಾರರೆಲ್ಲಾ ಸೇರಿ ಸಹಮತದಿಂದ ಆರಿಸುತ್ತಾರೆ. ಈ ಜನರು ಯಾವ ಪಕ್ಷಕ್ಕೂ ಸೇರಿರುವುದಿಲ್ಲ. ಈ ಎಲ್ಲ ಗ್ರಾಮ ಪ್ರತಿನಿಧಿಗಳೂ ಸೇರಿ ಗ್ರಾಮಸಭಾ ಪ್ರತಿನಿಧಿ ಮಂಡಲ ರಚಿತವಾಗುತ್ತದೆ. ಈ ಮಂಡಲ ತನ್ನ ಚುನಾವಣಾ ಕ್ಷೇತ್ರಕ್ಕೆ ಜನತಾ ಉಮೇದುವಾರರನ್ನು ಆಯ್ಕೆ ಮಾಡಿ ನಿಲ್ಲಿಸುತ್ತದೆ. ಗುಜರಾತಿನಲ್ಲಿ ಶ್ರೀ ರವಿಶಂಕರ ಮಹಾರಾಜರು ನೈತಿಕ ಉಚ್ಚಸತ್ತೆ - ಮಾರಲ್ ಹೈಕಮಾಂಡ್- ಯಿಂದ ಉಮೇದುವಾರರು ನಿಲ್ಲಿಸಲ್ಪಡುತ್ತಾರೆಂದು ಹೇಳಿದ್ದಾರೆ. ಚುನಾವಣಾ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡುವ ಜನ ಇದ್ದೇ ಇರುತ್ತಾರೆ. ಅವರುಗಳನ್ನು ಕರೆಸಿ ವಿಚಾರ ವಿನಿಮಯ ಮಾಡಬೇಕು. ಗ್ರಾಮ ಸಭೆಗಳ ಪ್ರತಿನಿಧಿ ಮಂಡಲಗಳಾಗಲೀ, ಸಂಘರ್ಷ ಸಮಿತಿಗಳಾಗಲೀ ಮಾರಲ್ ಹೈಕಮಾಂಡ್ ನವರಾಗಲೀ ಯಾರೇ ಮಾಡಿದರೂ ಉಮೇದುವಾರ ಒಳ್ಳೆಯವನೇ ಮತ್ತು ಬಡವರ ಸೇವೆ ಮಾಡುವವನೇ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು.

ಉಮೇದುವಾರನ ಆಯ್ಕೆಯ ಬಗೆಗೂ ಕೂಡ ಈ ಪ್ರತಿನಿಧಿ ಮಂಡಲ ಒಂದು ವಿಧಾನವನ್ನು ಅನುಸರಿಸಬಹುದು. ಸಾಧ್ಯವಾದಷ್ಟು ಸರ್ವಾನುಮತಿಯಿಂದಲೇ ಉಮೇದುವಾರನ ಆಯ್ಕೆ ಆಗಬೇಕು. ಅದೂ ಆಗದಿದ್ದರೆ ಪ್ರೋಸೆಸ್ ಆಫ್ ಎಲಿಮಿನೇಷನ್ ಪದ್ಧತಿಯಿಂದ ಆಯ್ಕೆ ಮಾಡಬೇಕು. ಉದಾಹರಣೆಗೆ ೪ - ೫ ಮಂದಿ ಉಮೇದುವಾರರು ನಿಂತಿದ್ದರೆ ಮೂರು ನಾಲ್ಕು ಸಲ ಮತದಾನ ಮಾಡಿ ಎಲ್ಲರಿಗಿಂತಲೂ ಕಡಿಮೆ ಮತ

ಬಂದವರನ್ನು ಬಿಡುತ್ತಾ ಹೋಗಬೇಕು. ಕಡೆಯಲ್ಲಿ ಅಧಿಕಾಧಿಕ ಮತ ಬಂದವನು ಉಮೇದುವಾರನಾಗುತ್ತಾನೆ. ಇಬ್ಬರಿಗೆ ಸಮನಾದ ಮತಗಳು ಬಂದರೆ ಚೀಟಿ ಹಾಕಿ ಅಂತಿಮ ನಿರ್ಣಯ ಮಾಡಬಹುದು. ಹೀಗೆ ಗ್ರಾಮ ಪ್ರತಿನಿಧಿ ಮಂಡಲಸಭೆ ಐದು ವರ್ಷ ಅವಧಿಯವರೆಗೆ ಕೆಲಸ ಮಾಡಬೇಕು.

ಪ್ರಜಾತಂತ್ರದಲ್ಲಿ ಎರಡು ಪದಗಳಿವೆ 'ಪ್ರಜೆ' ಮತ್ತು 'ತಂತ್ರ'. ಪ್ರಜಾತಂತ್ರದಲ್ಲಿ ಕೇವಲ ತಂತ್ರಮಾತ್ರ ಇದ್ದು 'ಪ್ರಜೆ' ಇಲ್ಲವಾದರೆ ಪ್ರಜಾತಂತ್ರವಾಗುತ್ತದೆಯೇ ? ಅದನ್ನು ಏನೆನ್ನಬೇಕು ? ಅದು ಪಕ್ಷದ ಸರ್ವಾಧಿಕಾರವಾಗುತ್ತದೆ. ಖಂಡಿತ ಪ್ರಜಾತಂತ್ರವಾಗುವುದಿಲ್ಲ. ಪ್ರಜೆಗಳೇ ಪ್ರತಿನಿಧಿಗಳನ್ನು ಆರಿಸಿ ಕಳಿಸುತ್ತಾರೆ. ಅವರ ಬಗ್ಗೆ ಅಸಂತುಷ್ಟರಾದರೆ ''ನೀವು ಅಪ್ರಾಮಾಣಿಕರೂ ಜನತಾ ದ್ರೋಹಿಗಳೂ ಆಗಿರುವುದಕ್ಕಾಗಿ ನಿಮ್ಮನ್ನು ಕಳಿಸಲಿಲ್ಲ. ನಿಮ್ಮನ್ನು ಏತಕ್ಕಾಗಿ ಕಳಿಸಿದ್ದೆವು ? ನಿಮ್ಮ ಜೇಬು ಸೇವೆ ಮಾಡಿಕೊಳ್ಳುವುದಕ್ಕಾಗಿಯೆ ?'' ಎಂದು ಕೇಳುವ ಆಜನ್ಮಸಿದ್ಧ ಹಕ್ಕು ಆಯ್ಕೆ ಮಾಡಿದವರಿಗಿದೆ. ತಮ್ಮ ಪ್ರತಿನಿಧಿಗಳನ್ನು ವಾಪಸ್ಸು ಕರೆಸಿಕೊಳ್ಳುವ ಹಕ್ಕು ಸದಾ ಪ್ರಜೆಗಳಿಗೆ ಇದೆ.

ಆದ್ದರಿಂದ ಮಿತ್ರರೆ ಇದು ಶಕ್ತಿಸಂಘರ್ಷದಿಂದ ನಿರ್ಮಾಣವಾಗುತ್ತದೆ ಎಂಬುದು ನನ್ನ ನಂಬುಗೆ. ಸ್ವಾತಂತ್ರ್ಯಾನಂತರ ಇದು ಬಹುದೊಡ್ಡ ಪ್ರಯತ್ನವಾಗಿದೆ. ಪ್ರಜಾ ತಂತ್ರವನ್ನು ಬಲಪಡಿಸುವ ಆಂದೋಲನ ಇದಾಗಿದೆ. ನಮ್ಮಲ್ಲಿ ಪ್ರಜಾತಂತ್ರ ಪ್ರಾರಂಭವಾದಂದಿನಿಂದಲೂ ಅದು ದುರ್ಬಲಗೊಳ್ಳುತ್ತಿದೆ *. ಪ್ರಾಂತೀಯ ಸ್ವಾಯತ್ತತೆ ಮಣ್ಣುಗೂಡಿದೆ. ಪಕ್ಷದಲ್ಲಿ ಪ್ರಜಾಪ್ರಭುತ್ವ ನೀತಿಯೂ ಮಣ್ಣುಗೂಡಿದೆ. ಆದ್ದರಿಂದ ಇಂದಿನ ತುರ್ತು ಅಗತ್ಯ ಎಂದರೆ ಪ್ರಜಾತಂತ್ರವನ್ನು ಬಲಪಡಿಸುವುದು.

ನಮ್ಮ ವಿಮರ್ಶಕರು ಜಯಪ್ರಕಾಶ ನಾರಾಯಣರು ಪ್ರಜಾತಂತ್ರವನ್ನು ಬಲಹೀನಗೊಳಿಸುತ್ತಿದ್ದಾರೆ ಎನ್ನುತ್ತಾರೆ. ಪ್ರಜಾತಂತ್ರವನ್ನು ಬಲಹೀನಗೊಳಿಸುತ್ತಿರುವವರು ಯಾರು? ಅದನ್ನು ಕೇವಲ ತಂತ್ರವನ್ನಾಗಿ ಮಾಡಿಕೊಂಡಿರುವವರು. ಈಗ ಇರುವುದು ಕೇವಲ ಪ್ರಜಾತಂತ್ರದ ಪ್ರೇತ ಹಂದರ ಮಾತ್ರ. ಅದಕ್ಕೆ ಪ್ರಾಣ ತುಂಬಬೇಕೋ ಬೇಡವೋ? ಪ್ರಜೆಯನ್ನು ಬಿಟ್ಟು ಪ್ರಜಾತಂತ್ರ ನಡೆಯಕೂಡದು.

ಅಮೆರಿಕೆಯ ಅಧ್ಯಕ್ಷ ನಿಕ್ಸನ್‌ರಿಗೆ ಯಾವ ಸ್ಥಿತಿ ಬಂತೆಂಬುದು ನಿಮಗೇ ಗೊತ್ತು. ಸ್ನೇಹಿತರೇ, ಇತಿಹಾಸದಲ್ಲಿ ಇದು ಸಣ್ಣ ಘಟನೆಯೇನಲ್ಲ. ಅಮೆರಿಕಾದ ರಾಷ್ಟ್ರಪತಿ ಸ್ಥಾನ ಇಡೀ ಪ್ರಪಂಚದಲ್ಲಿ ಎಲ್ಲಕ್ಕಿಂತ ಶಕ್ತಿಶಾಲಿಯಾದ ಸ್ಥಾನ. ಅವರಿಗೆ ಸಾಟಿ ಎಂದರೆ ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯ ಸ್ಥಾನ ಮಾತ್ರ. ಅಂಥ ಅಮೆರಿಕಾದ ಅಧ್ಯಕ್ಷ

---

* ಅಮೆರಿಕಾದ ಅಧ್ಯಕ್ಷನಾಗಿದ್ದ ಅಬ್ರಹಾಂಲಿಂಕನ್ ಪ್ರಜಾಪ್ರಭುತ್ವ ಕುರಿತು 'Democrasy is for the people, of the people and by the people' ಎಂದ. ಇಂದು ಭಾರತದಲ್ಲಿ ಅದು 'far' the people, 'off' the people and 'buy' the people ಆಗಿರುವುದು ದುರಂತವೇ ಸರಿ. ಜಹೊನಾ

ತನ್ನ ಸ್ಥಾನವನ್ನು ಬಿಡಬೇಕಾಯಿತಲ್ಲವೆ ? ಇದು ಹೇಗಾಯಿತು ? ಪ್ರಜೆಗಳ ಅಭಿಪ್ರಾಯ ಅವರನ್ನು ಹೊರಹಾಕಿತು. ಆದ್ದರಿಂದ ಮಿತ್ರರೇ, ಈ ಪ್ರಜಾಪ್ರಭುತ್ವವನ್ನು ಶಕ್ತಿಯುತವನ್ನಾಗಿ ಮಾಡಬೇಕು, ಬಲಹೀನಗೊಳಿಸಬಾರದು. ನನ್ನ ಪ್ರಯತ್ನವಾದರೂ ಶಕ್ತಿಯುತವನ್ನಾಗಿ ಮಾಡುವುದೇ ಆಗಿದೆ.

ವಿಧಾನಸಭೆಯ ವಿಸರ್ಜನೆಗಾಗಿ ಜನತೆ ಶಾಂತಿಪೂರ್ಣ ಪ್ರದರ್ಶನಗಳನ್ನು ಮಾಡಿತು. ಆದರೆ ಇವರ ಬಗ್ಗೆ ಸರ್ಕಾರ ನಡೆದುಕೊಂಡ ರೀತಿ ನಾಚುವಂಥದ್ದು. ಬ್ರಿಟಿಷರ ಕಾಲದಲ್ಲೂ ಈ ರೀತಿ ಮಾಡಿದ್ದರ ನೆನಪಿಲ್ಲ. ಜನರನ್ನು ದಾರಿಯಲ್ಲೇ ರೈಲಿನಿಂದ ಇಳಿಸಿ ಬಿಟ್ಟರು. ಬಸ್ಸಿನಿಂದ ಇಳಿಸಿದರು. ಅವರೆಲ್ಲರ ಬಳಿಯೂ ಟಿಕೆಟ್‌ಗಳಿದ್ದುವು. ಪ್ರಜೆಗಳು ತಮಗೆ ಇಷ್ಟ ಬಂದ ಜಾಗದಲ್ಲಿ ಶಾಂತಿಯುತವಾಗಿ ಸಭೆ ನಡೆಸುವ ಹಕ್ಕು ಪ್ರಜಾತಂತ್ರದಲ್ಲಿ ಇಲ್ಲವೆ ? ರಾಜ್ಯಪಾಲರಲ್ಲಿಗೆ, ಅಸೆಂಬ್ಲಿ ಮುಂದೆ ಹೋಗಲು ಅಧಿಕಾರವಿಲ್ಲವೆ ? ಯಾರಾದರೂ ಹಿಂಸೆ ಮಾಡಿದರೆ ಅದು ಬೇರೆ. ಲೂಟಿ, ಕ್ರೋಧ, ಕಲ್ಲು ತೂರಾಟ, ವಾಹನಗಳಿಗೆ ಬೆಂಕಿ ಇಡುವುದು ಮುಂತಾದುವನ್ನು ಮಾಡಿದರೆ, ಆ ಮಾತು ಬೇರೆ. ಶಾಂತಿಗೂ ಹಿಂಸೆಗೂ ಇರುವ ವ್ಯತ್ಯಾಸವನ್ನು ಸರ್ಕಾರ ಕಲಿಯಬೇಕು.

ಜನರನ್ನು ತಡೆಯಲು ಕಾರಣವೇನು ? ಜನರನ್ನು ಕಂಡರೆ ನಿಮಗೆ ಹೆದರಿಕೆಯೆ ? ನೀವು ಜನತೆಯ ಪ್ರತಿನಿಧಿಗಳೆ ? ನೀವು ಯಾರ ಪರ ಆಡಳಿತ ನಡೆಸುತ್ತಿದ್ದೀರಿ ? ಇದು ಜನತೆಯ ರಾಜಧಾನಿಯೋ ನಿಮ್ಮದೋ ? ಇದೇನು ಪೊಲೀಸರ ದೇಶವೇ ? ಎಂಥ ನೀಚ ವ್ಯವಹಾರ ! ಜನತೆಯ ಶಾಂತಿಯುತ ಕಾರ್ಯಕ್ರಮಗಳಿಗೆ ತೊಂದರೆ ಕೊಡುವವರು, ಜನರನ್ನು ಸೆರೆ ಹಿಡಿಯುವವರು, ಅವರ ಮೇಲೆ ಲಾಠಿಚಾರ್ಜ್ ಮಾಡುವವರು, ಗೋಲಿಬಾರ್ ಮಾಡುವವರು ಇವರೆಲ್ಲರೂ ಪ್ರಜಾಪ್ರಭುತ್ವದ ಶತ್ರುಗಳು.

ಈಗ ಇರುವ ರಾಜನೀತಿ ಹೋಗಬೇಕು. ಅದರ ಸ್ಥಾನದಲ್ಲಿ ಲೋಕನೀತಿ ಜಾರಿಗೆ ಬರಬೇಕು. ಆ ಲೋಕನೀತಿಯ ಬೀಜಗಳು ಭಾರತದ ಮಣ್ಣಿನಲ್ಲಿ ತಪೋಮಯವಾಗಿ ಕುಳಿತಿವೆ. ಈ ಹೊಸ ಲೋಕನೀತಿ-ಪ್ರಜಾತಂತ್ರ ಮೇಲಿನಿಂದ ಇಳಿದು ಬರುವುದಿಲ್ಲ. ಅದು ಕೆಳಗಿನಿಂದ ರೂಪುಗೊಳ್ಳುತ್ತದೆ. ದೆಹಲಿಯಿಂದ ಅಲ್ಲ , ಹಳ್ಳಿಹಳ್ಳಿಗಳ ಕೇರಿಕೇರಿಗಳಿಂದ ರೂಪುಗೊಳ್ಳುತ್ತದೆ. ಇದು ಒಂದು ಹೊಸ ಪಕ್ಷ ಕಟ್ಟಿ ಬೋರ್ಡ್ ನೇತು ಹಾಕುವುದರಿಂದ ಆಗುವುದಿಲ್ಲ. ರಾಜಕೀಯದ ಒಬ್ಬ ಹೊಸ ನಾಯಕನ ಉದಯದಿಂದ ಇದು ಆಗುವುದಿಲ್ಲ. ಇದು ಜನಶಕ್ತಿಯ ಗರ್ಭದಿಂದಲೇ ಮೂಡಿಬರುತ್ತದೆ. ಈ ದೇಶದ ಜನಸಾಮಾನ್ಯರ ಪವಿತ್ರ ರಕ್ತದಿಂದ ಅದು ಉದಯಿಸುತ್ತದೆ. ಶ್ರಮ ಜೀವಿಗಳ ಬೆವರಿನಿಂದ ಅದು ಬಲಗೊಳ್ಳುತ್ತದೆ.

ಪ್ರಜಾತಂತ್ರ ಉಳಿಯಬೇಕಾದರೆ ಅದರ ಬೇರು ಹಳ್ಳಿಗಳಲ್ಲಿ ಇರಬೇಕು. ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಅದರ ಬೇರು ದಿಲ್ಲಿಯಲ್ಲಿ ಇದೆ. ಹಳ್ಳಿಯಲ್ಲಿ ಬೇರೂರಿಸುವುದೇ ನಮ್ಮ ಹೋರಾಟದ ಗುರಿ.

ಸಂಪೂರ್ಣ ಕ್ರಾಂತಿಯ ಆಯಾಮಗಳು :

ಒಂದು ಹೊಸ ಸಮಾಜ ನಿರ್ಮಾಣವಾಗಬೇಕಾದರೆ ಸಮಾಜದಲ್ಲಿ ಆಮೂಲಾಗ್ರ ಪರಿವರ್ತನೆ ಆಗಬೇಕಾಗುತ್ತದೆ. ಸಾಮಾಜಿಕ, ಆರ್ಥಿಕ, ನೈತಿಕ, ರಾಜನೈತಿಕ, ಸಾಂಸ್ಕೃತಿಕ ಶೈಕ್ಷಣಿಕ ಈ ಎಲ್ಲ ಆಯಾಮಗಳಲ್ಲೂ ಪರಿವರ್ತನೆಯಾಗಬೇಕು. ಎಲ್ಲರೂ ಸುಖಿಗಳಾಗಿರುವ ಸಮಾಜ ನಿರ್ಮಾಣ ಆಗಬೇಕು. ಈಗಿರುವಂತೆ ಬಡವ ಶ್ರೀಮಂತರ ನಡುವೆ ಕಂದಕವಿರ ಕೂಡದು. ಶೋಷಣೆ ತಪ್ಪಬೇಕು. ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕು. ಎಲ್ಲರಿಗಿಂತ ಕೆಳಗಿರುವ ಜನರಿಗೆ, ಕಡುಬಡವರಾಗಿರುವವರಿಗೆ ಭೂ ಕಾರ್ಮಿಕರಿಗೆ, ಭೂ ಹೀನರಿಗೆ, ಹಿಂದುಳಿದಿರುವ ಮುಸಲ್ಮಾನರು, ಹರಿಜನರು, ಆದಿವಾಸಿಗಳು ಇವರುಗಳಿಗೆ ಎಲ್ಲ ಆರ್ಥಿಕ ಪರಿವರ್ತನೆಯ ಫಲ ಸಿಗುವಂತಾಗಬೇಕು. ಸ್ವಾತಂತ್ರ್ಯ ಬಂದಂದಿನಿಂದ ಇಲ್ಲಿಯವರೆಗೆ ತದ್ವಿರುದ್ಧವಾಗಿದೆ. ಸ್ವಾತಂತ್ರ್ಯದ ೨೭ ವರ್ಷಗಳು ಕಡಿಮೆಯೇನಲ್ಲ. ಬಡತನ ಬೆಳೆಯಿತು. ಶ್ರೀಮಂತಿಕೆಯೂ ಬೆಳೆಯಿತು. ಇವೆರಡರ ಅಂತರವೂ ಬೆಳೆಯಿತು. ಭೂ ಸುಧಾರಣೆಯ ಕಾನೂನುಗಳೂ ಆದವು. ಆದರೆ ಭೂಮಿಯ ಹಸಿವು ಇಂಗಲಿಲ್ಲ. ಭೂಹೀನರ ಸಂಖ್ಯೆ ಇನ್ನೂ ಹೆಚ್ಚಾಗಿದೆ.

ಈಗ ಪ್ರಾರಂಭವಾಗಿರುವ ಕ್ರಾಂತಿ ಸಫಲವಾದರೆ ಇವೆಲ್ಲವೂ ಸರಿಹೋಗುತ್ತದೆ. ಸಮಾಜದಲ್ಲಿರುವ ಕೆಡಕುಗಳು, ಅಸ್ಪೃಶ್ಯತೆ, ಜಾತಿಜಾತಿಯ ಜಗಳ, ಮೂಢನಂಬಿಕೆ ಎಲ್ಲವೂ ತೊಲಗಬೇಕು. ನಾವು ಭಾರತೀಯರು, ಎಲ್ಲರೂ ಮನುಷ್ಯ ಮಾತ್ರರು ಎಂಬ ಭಾವನೆ ಬರಬೇಕು. ಎಲ್ಲರ ಹೃನ್ಮನಗಳಲ್ಲಿ ಈ ವಿಚಾರ ಹರಡಬೇಕು. ಈಗಿರುವಂತೆ ಕೇವಲ ಬಾಯಿ ಮಾತಾಗಬಾರದು. ಅದು ಕೃತಿಗಿಳಿಯಬೇಕು. ಹಿಂದೂ ಹಾಗೂ ಮುಸ್ಲಿಂ ಸಮಾಜಗಳಲ್ಲಿರುವ ವರದಕ್ಷಿಣೆ ಪದ್ಧತಿ, ಕನ್ಯಾದಕ್ಷಿಣೆ ಪದ್ಧತಿ ತಪ್ಪಬೇಕು. ಈ ರೀತಿ ನಾನು ಬಹು ದೂರದ ದೃಷ್ಟಿಯಿಂದ ಈ ಕ್ರಾಂತಿಯನ್ನು ನೋಡುತ್ತಿದ್ದೇನೆ. ಸರ್ವೋದಯ, ಸಮಾಜವಾದ, ಸಾಮ್ಯವಾದ ಎಲ್ಲವೂ ಒಂದೇ ಗುರಿಯನ್ನು ಹೇಳುತ್ತಿವೆ. ಆದರೆ ರೀತಿ, ದಾರಿ ಬೇರೆಬೇರೆ. ಆದರೂ ಚಿಂತೆಯಿಲ್ಲ ನಾನು ಈ ಆಂದೋಲನವನ್ನು ಈ ಸಮಗ್ರ ಗುರಿಯೆಡೆಗೆ ಕೊಂಡೊಯ್ಯಲಿಚ್ಛಿಸುತ್ತೇನೆ.

ಮಾನವ ಸಮಾಜದ ದೊಡ್ಡ ಕಳಂಕವೆಂದರೆ ವರದಕ್ಷಿಣೆ ಪದ್ಧತಿ. ಯುವಕರು ತಂದೆತಾಯಿಗಳ ಕೈಲಿ ಮಾರಾಟದ ವಸ್ತುವಾಗಿ ಬಿಟ್ಟಿದ್ದಾರೆ. ಇದೊಂದು ನಾಚಿಕೆಗೇಡಿನ ಸಂಗತಿ. ಈ ವರದಕ್ಷಿಣೆ ಪದ್ಧತಿ ಹೋಗಬೇಕೆನ್ನುವುದಷ್ಟೇ ಅಲ್ಲ ಇನ್ನೂ ಮುಂದುವರೆದು ಈ ಜಾತಿ ಭೇದವೂ ತೊಲಗಬೇಕು. ಬೇರೆ ಬೇರೆ ಜಾತಿಗಳಲ್ಲಿ ಮದುವೆಗಳಾಗಬೇಕು. ಸ್ವಜಾತಿ, ಗೋತ್ರ, ಅದು ಇದು ಈ ನಾನಾ ಬಗೆಯ ಭೇದಭಾವಗಳು ಇರಕೂಡದು.

ಈ ಪದ್ಧತಿಗಳು ಹಿಂದೆ ಇರಲಿಲ್ಲ. ಬ್ರಿಟಿಷ್ ಲೆಫ್ಟಿನೆಂಟ್ ಗವರ್ನರು ಮೊದಲಾದವರು ಈಸ್ಟ್ ಇಂಡಿಯಾ ಕಂಪೆನಿಗೆ ಬರೆದಿರುವ ಕಾಗದಗಳಲ್ಲಿ 'ಇಲ್ಲಿ ವರದಕ್ಷಿಣೆ ಪದ್ಧತಿ ಇಲ್ಲ' ಎಂದು ಬರೆದಿದ್ದಾರೆ. ಇದರ ಅರ್ಥ ಹಿಂದೆ ಇಲ್ಲಿ ವರದಕ್ಷಿಣೆ ಪದ್ಧತಿ ಇರಲಿಲ್ಲ. ಈ ರೋಗ ಈಚೆಗೆ ಬಂದಿದೆ. ಗುಲಾಮತನದೊಂದಿಗೆ ಜಾಡ್ಯಗಳೂ ಬಂದಿವೆ.

ಮಾನವ ಸಮಾಜದ ಮತ್ತೊಂದು ದೊಡ್ಡ ಕಳಂಕವೆಂದರೆ ಅಸ್ಪೃಶ್ಯತೆ. ಇದೊಂದು ಮನುಕುಲದ ಶಾಪ. ಮೇಲು ಕೀಳು ಎಂಬ ಭೇದ ನಾಶವಾಗಬೇಕು. ಹರಿಜನನೂ ಮನುಷ್ಯ. ನಾವು ಯಾವ ಭಗವಂತನ ಸೃಷ್ಟಿಯೋ, ಹರಿಜನರೂ ಅದೇ ಭಗವಂತನ ಸೃಷ್ಟಿ. ನಾವು ಉತ್ತಮರೇ ? ಅವನು ಅಸ್ಪೃಶ್ಯನೇ ? ಏಕೆ ಈ ಭೇದಭಾವ ? ನಾವು ಅವನನ್ನು ಮಲ ಹೊರಲು ಹೇಳಬಹುದೇ ? ಹರಿಜನರಿಗೇ ಸರ್ವಾಧಿಕಾರ ಬಂದರೆ ಅವರು ಮೊದಲು ಮಾಡುವ ಕಾನೂನು ಯಾವುದು ? ಈ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಒಕ್ಕಲಿಗರು, ಲಿಂಗಾಯಿತರು, ಶೆಟ್ಟರು ಎಲ್ಲರೂ ನಮ್ಮ ಪಾಯಿಖಾನೆ ಸ್ವಚ್ಛಮಾಡಬೇಕು ಎನ್ನುವ ಕಾನೂನು ಮಾಡುತ್ತಾರೆ. ನಿಮ್ಮ ರಾಜ್ಯ, ಅಧಿಕಾರ ಇರುವುದರಿಂದ ಅವರನ್ನು ತುಳಿದು ಇಟ್ಟಿದ್ದೀರಿ. ಅವರು ದಲಿತರೂ, ಶೋಷಿತರೂ ಆಗಿದ್ದಾರೆ. ಸಮಾಜದಲ್ಲಿ ಅವರಿಗೆ ಗೌರವ ಇಲ್ಲ ಏಕೆ ?

''ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ ''- ಹೀಗೆ ಭಗವಂತ ಹೇಳಿದ. ಗುಣಕರ್ಮ ವಿಭಾಗ ನೋಡಿ ಚಾತುರ್ವರ್ಣದ ಸೃಷ್ಟಿ ನಾವು ಮಾಡಿದೆವು. ಪಂಡಿತ್‌ಜೀಯವರು ಪಂಡಿತರೇ ಆಗಿದ್ದಾರೆ. ಆದರೆ ಗುಣ ಕರ್ಮಗಳೆಲ್ಲವೂ ನೀಚನದು. ಆದರೂ ಪಂಡಿತ್‌ಜೀಯವರು ಪೂಜ್ಯರಾಗಬೇಕೆನ್ನುತ್ತಾರೆ. ಅವರಲ್ಲಿ ಇರುವುದು ಚಾಂಡಾಲರ ಗುಣ. ಆದರೆ ಅವರು ಪಂಡಿತಜೀಗಳೇ ಆಗಿರಬೇಕೆನ್ನುತ್ತಾರೆ. ಈ ಪಂಡಿತರು ಮೊದಲ ದರ್ಜೆಯ ದುರಾಚಾರಿಗಳು, ವ್ಯಭಿಚಾರಿಗಳು. ಇದನ್ನು ನಾನು ಎಲ್ಲರಿಗೂ ಹೇಳುತ್ತಿಲ್ಲ. ಇಂಥ ಲೋಭಿಗಳೂ, ಅನ್ಯಾಯಿಗಳೂ ಎಷ್ಟು ಮಂದಿ ಸಿಗುವುದಿಲ್ಲ ? ಆದರೆ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಕಾರಣದಿಂದ ಅವರ ಕಾಲುಗಳಿಗೆ ಅಡ್ಡ ಬೀಳಬೇಕು ! ಅವರಲ್ಲಿರುವ ಬ್ರಾಹ್ಮಣ ಗುಣ ಕರ್ಮಗಳಾದರೂ ಯಾವುದು ?

ಮಿತ್ರರೇ, ಸಮಾಜವನ್ನು ಬದಲಿಸಬೇಕು. ಸಮಾಜದ ಒಂದು ಅಂಗವನ್ನು ಬದಲಿಸಿಬಿಟ್ಟು ಉಳಿದ ಅಂಗಗಳು ಕೊಳೆಯಲು ಬಿಡಬಾರದು. ಆದ್ದರಿಂದ ಇಡೀ ಸಮಾಜದ ಶರೀರವನ್ನೇ ಬದಲಿಸಬೇಕು. ಹೃದಯ ಪರಿವರ್ತನೆಯಾಗಬೇಕು.

ಈ ವಿಚಾರಗಳನ್ನು ಕೃತಿಗಿಳಿಸುವುದು ಅಷ್ಟು ಸುಲಭವಲ್ಲ. ಅದಕ್ಕಾಗಿ ಬಲಿದಾನ ಮಾಡಬೇಕಾಗುತ್ತದೆ. ಕಷ್ಟ ಸಹಿಸಿಕೊಳ್ಳಬೇಕಾಗುತ್ತದೆ. ನೋವನ್ನು ನುಂಗಿಕೊಳ್ಳಬೇಕಾಗುತ್ತದೆ. ಗೋಲಿಬಾರು, ಲಾಠಿಚಾರ್ಜುಗಳನ್ನು ಎದುರಿಸಬೇಕಾಗುತ್ತದೆ. ಜೈಲುಗಳನ್ನು ಭರ್ತಿ ಮಾಡಬೇಕಾಗುತ್ತದೆ. ಹೊಲಗದ್ದೆಗಳ ಮುಟ್ಟುಗೋಲನ್ನು ಭರಿಸಬೇಕಾಗುತ್ತದೆ. ಸಂಪೂರ್ಣ ಕ್ರಾಂತಿಗಾಗಿ ಈ ಎಲ್ಲವನ್ನೂ ಸಹಿಸಿಕೊಳ್ಳಬೇಕು. ಯಾವ ಸ್ವರಾಜ್ಯಕ್ಕಾಗಿ ಈ ದೇಶದ ಸಹಸ್ರಾರು, ಲಕ್ಷಾಂತರ ಯುವಕರು ಬಲಿದಾನ ಮಾಡಿದರೋ, ಭಗತ್‌ಸಿಂಗ್ ಮತ್ತು ಗೆಳೆಯರು, ಬಂಗಾಲದ ಕ್ರಾಂತಿಕಾರಿ ಗೆಳೆಯರು, ಮಹಾರಾಷ್ಟ್ರದ ಕ್ರಾಂತಿಕಾರಿ ಗೆಳೆಯರು, ದೇಶದ ಎಲ್ಲ ಕ್ರಾಂತಿಕಾರಿ ಗೆಳೆಯರು ಗುಂಡೇಟಿಗೆ ಬಲಿಯಾದರೋ, ಗಲ್ಲಿಗೆ ಏರಿಸಲ್ಪಟ್ಟರೋ, ದೇಶದ ಲಕ್ಷಲಕ್ಷಗಟ್ಟಲೆ ಜನರು ಜೈಲುಗಳನ್ನು ತುಂಬಿದರೋ ಆ ಸ್ವರಾಜ್ಯ ಗಳಿಸಲು ಅದೆಷ್ಟು ದೀರ್ಘ ಪ್ರಯಾಣ ಮಾಡಬೇಕೋ ಗೊತ್ತಿಲ್ಲ.

ಭಾರತೀಯ ಪ್ರಜಾತಂತ್ರವನ್ನು ವಾಸ್ತವಿಕ ಮತ್ತು ದೃಢಗೊಳಿಸಲು, ಜನತೆಯ

ನಿಜವಾದ ರಾಜ್ಯವನ್ನು ಸ್ಥಾಪಿಸಲು, ಸಮಾಜದಲ್ಲಿಯ ಅನ್ಯಾಯ, ಶೋಷಣೆ ಮೊದಲಾದುವನ್ನು ಅಂತ್ಯಗೊಳಿಸಲು ಒಂದು ನೈತಿಕ, ಸಾಂಸ್ಕೃತಿಕ ಶಿಕ್ಷಣ ಕ್ರಾಂತಿಯನ್ನು ಮಾಡಬೇಕಾಗಿದೆ. ಹೊಸ ಬಿಹಾರವನ್ನು, ಮೂಲತಃ ಹೊಸ ಭಾರತವನ್ನೇ ನಿರ್ಮಿಸುವುದು ನಮ್ಮ ಸಂಘರ್ಷದ ಗುರಿಯಾಗಿದೆ. ಇದರ ಮುಖಂಡರು ನೀವೆ. ದಾರಿ ಕಠಿಣವಾಗಿದೆ. ಆದರೆ ಜಯ ನಿಮ್ಮದೇ. ಏಕೆಂದರೆ ಇದು ಯುಗ ಧರ್ಮದ ಕರೆಯಾಗಿದೆ.

ಈ ಹೋರಾಟ ಶಾಂತಿಯ ಮಾರ್ಗದಲ್ಲಿ ಸಾಗಬೇಕು. ಅನೇಕ ರಾಷ್ಟ್ರಗಳಲ್ಲಿ ಕ್ರಾಂತಿ ಬಂದೂಕಿನಿಂದ ನಡೆದಿದ್ದು ನಂತರ ಅಲ್ಲಿಯ ಆಡಳಿತ ಬಂದೂಕಿನವರ ಕೈಗೇ ಹೋಗಿರುವುದು ಈಗ ಇತಿಹಾಸ. ನೀವು ಒಂದು ಹಿಂಸೆಯನ್ನು ಮಾಡಿದರೆ ಎದುರಾಳಿಗಳು ನೂರು ಪಟ್ಟು ಹಿಂಸೆ ಮಾಡಲು ಸಿದ್ದರಿದ್ದಾರೆ, ಮಾಡುವಷ್ಟು ಶಕ್ತಿವುಳ್ಳವರಾಗಿದ್ದಾರೆ. ಆದ್ದರಿಂದ ಇದು ರಕ್ತ ಕ್ರಾಂತಿಯಲ್ಲ ಶಾಂತಿಯ ಕ್ರಾಂತಿ.

ಈ ಅಭಿನವ ಕ್ರಾಂತಿಯ ಸೈನಿಕರೂ, ಸೇನಾಪತಿಗಳೂ ತರುಣ ತರುಣಿಯರೇ ಆಗಿದ್ದಾರೆ. ಈ ಸಾಂಸ್ಕೃತಿಕ ಕ್ರಾಂತಿಯಾಗದೇ ಭಾರತಕ್ಕೆ ಉಳಿವಿಲ್ಲ.

ಕಾರ್ಯಕ್ರಮ :

ನಾವು ನಮ್ಮ ಗುರಿ ತಲುಪಲು ಅನೇಕ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕು. ಈ ಆಂದೋಲನ ಜನರ ಆಂದೋಲನ ಎಂಬ ಭಾವನೆಯನ್ನು ಮೊದಲು ಜನರಲ್ಲಿ ಮೂಡಿಸಬೇಕು. ಅದಕ್ಕಾಗಿ ಜನಪರ ಕಾರ್ಯಕ್ರಮಕ್ಕೆ ಮೊದಲ ಆದ್ಯತೆ ನೀಡಬೇಕು. ಭೂಹೀನರ ಸಮಸ್ಯೆ, ಭೂ ಕಾರ್ಮಿಕರ ಸಂಭಾವನೆಯ ಸಮಸ್ಯೆ, ರೈತರ ಗೊಬ್ಬರ, ಅದರ ಬೆಲೆಯ ಸಮಸ್ಯೆ, ನೀರಾವರಿ ಕಂದಾಯ, ರಸ್ತೆ ಸುಂಕ, ಆರೋಗ್ಯ ಸುಂಕಗಳಲ್ಲಿನ ಹೆಚ್ಚಳದ ನಿರಾಕರಣೆ, ಹೆಚ್ಚು ಬಡ್ಡಿಯಿಂದ ಬಿಡುಗಡೆ, ಆದಿವಾಸಿಗಳ ದಿನನಿತ್ಯದ ಬವಣೆಗಳು ಮುಂತಾದುವುಗಳನ್ನು ತೆಗೆದುಕೊಳ್ಳಬೇಕು. ಇದಲ್ಲದೆ ಸಾಮಾಜಿಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ನೇರವಾಗಿ ಬಡವರು ಮತ್ತು ಸಾಮಾನ್ಯ ಜನರ ಹಿತಕ್ಕೆ ಸಂಬಂಧಿಸಿದ ಧಾನ್ಯ, ಸೀಮೆಎಣ್ಣೆ, ಸಕ್ಕರೆ ಮೊದಲಾದ ದಿನಬಳಕೆಯ ಸಾಮಾನುಗಳ ಯೋಗ್ಯ ಹಂಚಿಕೆ, ಕಳ್ಳ ಸಂಗ್ರಹವನ್ನು ತಡೆಗಟ್ಟುವುದು, ಕ್ಷಾಮ ಮತ್ತು ಪ್ರವಾಹ ಪೀಡಿತರ ಸೇವೆ ಮೊದಲಾದ, ಜನತೆಗೆ ತಕ್ಷಣ ಒಳ್ಳೆಯದಾಗುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಸಮಾನತೆಯ ಆಶ್ವಾಸನೆಯನ್ನು ಹರಿಜನರು, ಆದಿವಾಸಿಗಳು, ಮುಸಲ್ಮಾನರು ಹಾಗೂ ಮಹಿಳೆಯರಿಗೆ ನೀಡಬೇಕು.

ಸಂಘಟನೆ :

ಇವುಗಳನ್ನು ಕಾರ್ಯರೂಪಕ್ಕೆ ತರಲು ಸಂಘಟನೆ ಬಹಳ ಮುಖ್ಯ. ವಿದ್ಯಾರ್ಥಿಗಳು, ವಿರೋಧ ಪಕ್ಷಗಳು, ಸರ್ವೋದಯ ಆಂದೋಲನದ ಪ್ರಮುಖರು ಮತ್ತು ನಾಗರಿಕರು ಇಡೀ ಪ್ರದೇಶದಲ್ಲಿ ಪ್ರವಾಸ ಮಾಡಿ ಪ್ರಚಾರ ಕೈಗೊಳ್ಳಬೇಕು. ಆ ಮೂಲಕ

ಸಂಘಟನೆ ರೂಪುಗೊಳ್ಳಲು ಅವರು ನೆರವಾಗುತ್ತಾರೆ. ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ, ಜನಸಂಘರ್ಷ ಸಮಿತಿಗಳು ರಚನೆಯಾಗಬೇಕು. ಪ್ರತಿಯೊಂದು ಹಳ್ಳಿಯಲ್ಲೂ, ಹೋಬಳಿ, ತಾಲ್ಲೂಕು, ದೊಡ್ಡದೊಡ್ಡ ಪಟ್ಟಣಗಳಲ್ಲೂ, ನಗರಗಳಲ್ಲೂ, ವಿಶ್ವವಿದ್ಯಾಲಯಗಳಲ್ಲೂ , ವಿದ್ಯಾರ್ಥಿಸಂಘರ್ಷ ಸಮಿತಿಗಳು ರಚನೆಯಾಗಬೇಕು. ವಿದ್ಯಾರ್ಥಿಗಳಲ್ಲದ ಇತರ ಯುವಜನರು ಜನಸಂಘರ್ಷ ಸಮಿತಿಗಳ ಸದಸ್ಯರಾಗಬೇಕು. ಕೇವಲ ಸದಸ್ಯರಲ್ಲ ಮುಂದಾಳುಗಳಾಗಬೇಕು. ಏಕೆಂದರೆ ಯುವ ಶಕ್ತಿಯೇ ಈ ಸಂಘರ್ಷದ ಎಂಜಿನ್‌ಗಳು.

೧. ವಿಧಾನಸಭೆ ಮತ್ತು ಬ್ಲಾಕ್ ಕಛೇರಿಯ ಮುಂದೆ ಸತ್ಯಾಗ್ರಹ.

ಮುಖ್ಯ ಕಾರ್ಯಕ್ರಮ ವಿಧಾನಸಭೆಯ ಮುಖ್ಯ ದ್ವಾರದ ಬಳಿ ಸತ್ಯಾಗ್ರಹ ನಡೆಯುತ್ತದೆ. ಅದರ ಜೊತೆ ಜೊತೆಯಲ್ಲೇ ಚುನಾವಣಾ ಕ್ಷೇತ್ರಗಳಲ್ಲಿ ಸಭೆಗಳು ಆಗುತ್ತದೆ. ವಿಧಾನಸಭೆಯ ವಿಸರ್ಜನೆಯನ್ನು ನಾವು ಏಕೆ ಅಪೇಕ್ಷಿಸುತ್ತೇವೆ ಎಂಬುದನ್ನು ಹಳ್ಳಿ ಹಳ್ಳಿಗೂ ಹೋಗಿ ನಾವು ತಿಳಿಸಬೇಕು. ಇದರಿಂದ ನಾವು ಮುಂದೆ ಮಾಡುವ ನವನಿರ್ಮಾಣ ಮತ್ತು ಜನಪ್ರತಿನಿಧಿ ಆಯ್ಕೆಯ ಕೆಲಸಕ್ಕೆ ಹಿನ್ನೆಲೆ ನಿರ್ಮಾಣವಾಗುತ್ತದೆ. ಜನತಾ ಶಿಕ್ಷಣದಿಂದ ಜನಜಾಗೃತಿ ಉಂಟಾಗಿ ಆಂದೋಲನಕ್ಕೆ ಶಕ್ತಿ ಬರುತ್ತದೆ. ಪ್ರಜಾಪ್ರತಿನಿಧಿಗಳೆಲ್ಲಾ ಕೆಟ್ಟವರಲ್ಲ. ಆದರೂ ಬಿಹಾರದ ಜನತೆಯ ವಿಶ್ವಾಸವನ್ನು ಅವರೂ ಕಳೆದುಕೊಂಡಿದ್ದಾರೆ. ಅವರು ರಾಜೀನಾಮೆಯನ್ನು ತಾವಾಗಿಯೇ ಕೊಡಬೇಕಿತ್ತು. ಆದರೆ ಕೊಡುತ್ತಿಲ್ಲ. ಕೊಡದೇ ಇರುವವರು ರಾಜೀನಾಮೆ ಕೊಡುವಂತೆ ಪಿಕೆಟಿಂಗ್ ಮಾಡಬೇಕು.

ನಮ್ಮ ಈ ಕಾರ್ಯಕ್ರಮದಿಂದ ಜನತೆಗೆ ಎಲ್ಲೂ ಹಾನಿಯಾಗಬಾರದು. ನಮ್ಮ ಅಸಹಕಾರ ಸರ್ಕಾರದೊಂದಿಗೆ. ಜನರು ತಮ್ಮ ಜಗಳಗಳನ್ನು ಪೊಲೀಸ್ಟೇಷನ್ ಮತ್ತು ಕೋರ್ಟುಗಳಿಗೆ ತೆಗೆದುಕೊಂಡು ಹೋಗಬಾರದು. ಹಿಂದೆ ಮಾಡುತ್ತಿದ್ದಂತೆ ಪಂಚಾಯಿತ್ತಿಗಳಲ್ಲಿ ನಾವೇ ತೀರ್ಮಾನ ಮಾಡಿಕೊಳ್ಳಬೇಕು. ಸರ್ಕಾರಿ ಕಾರ್ಯಾಲಯಗಳು ಕೆಲಸ ಮಾಡದಂತೆ ಅವನ್ನು ಸ್ತಬ್ಧಗೊಳಿಸಬೇಕು. ಬ್ಲಾಕ್ ಕಛೇರಿಯಿಂದ ಹಿಡಿದು ಜಿಲ್ಲಾ ಕಛೇರಿಗಳವರೆಗೆ ಮತ್ತು ಅವಶ್ಯಕತೆ ಬಿದ್ದರೆ ಸಚಿವಾಲಯದವರೆಗೂ ಕಛೇರಿಗಳನ್ನು ಸ್ತಬ್ಧಗೊಳಿಸಬೇಕು. ಇದಾದರೋ ಸರ್ಕಾರವನ್ನು ಸ್ತಬ್ಧಗೊಳಿಸುವ ಕಾರ್ಯಕ್ರಮವಾಯ್ತು. ಇದರ ಜೊತೆಯಲ್ಲಿ ಅಸಹಕಾರದ ಕಾರ್ಯಕ್ರಮಗಳನ್ನೂ ನಡೆಸಬೇಕು.

೨. ಕರ ನಿರಾಕರಣೆ :

ಎರಡನೆಯದು ಕರ ನಿರಾಕರಣೆ. ನಾವು ಒಪ್ಪದ ಸರ್ಕಾರಕ್ಕೆ ಕಂದಾಯವನ್ನು ಏಕೆ ಕೊಡಬೇಕು ? ಆದ್ದರಿಂದ ಕರ ನಿರಾಕರಣೆಯ ಚಳವಳಿಯನ್ನು ನಡೆಸಬೇಕು. ಈಗ ಸದ್ಯದಲ್ಲಿ ಕೆಲವಕ್ಕೆ ಮಾತ್ರ ಕಂದಾಯ ನಿರಾಕರಿಸಬೇಕು. ಉದಾಹರಣೆಗೆ ಜಮೀನು ಕಂದಾಯ, ಎಲ್ಲ ಪ್ರಕಾರದ ಸೆಸ್ಸುಗಳು, ರಸ್ತೆ ಸೆಸ್ಸು , ವಿದ್ಯಾಭ್ಯಾಸದ ಸೆಸ್ಸು ಇತ್ಯಾದಿ. ಜೊತೆಜೊತೆಗೆ ತಕಾವಿಯನ್ನು ಕೊಡಕೂಡದು. ಈ ರೀತಿ ಕರ ನಿರಾಕರಣೆ ಮಾಡಿದರೆ ದಸ್ತಗಿರಿಗಳಾಗುತ್ತವೆ.

ಜಮೀನು ಮತ್ತು ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕುತ್ತಾರೆ. ಅದಕ್ಕೆ ಹೆದರಬೇಕಾಗಿಲ್ಲ. ಒಬ್ಬ ಹಳ್ಳಿಯ ಗೆಳೆಯ ಹೇಳಿದಂತೆ ''ಅವರಿಗೆ ಧೈರ್ಯವಿದ್ದರೆ ಮುಟ್ಟುಗೋಲು ಹಾಕಲಿ. ಓಟಿನ ಕಾಲಕ್ಕೆ ನಮ್ಮ ಬಳಿಗೆ ಬರಲೇಬೇಕಾಗುತ್ತದೆ. ಆಗ ಈ ಮುಟ್ಟುಗೋಲಿನ ಪರಿಣಾಮ ಏನು ಎಂಬುದು ತಿಳಿದೇ ತಿಳಿಯುತ್ತದೆ'' ಎಂದು ಹೇಳಬೇಕು. ಈ ಸರ್ಕಾರ ಹೋದನಂತರ ಬೇರೆ ಸರ್ಕಾರ ಬಂದಾಗ ಮುಟ್ಟುಗೋಲು ರದ್ದಾಗಿ ಆಸ್ತಿ ಹಿಂದಿರುಗಿ ಬಂದೇಬರುತ್ತದೆ.

ಮುಟ್ಟುಗೋಲು ಆದ ಆಸ್ತಿಯನ್ನು ಹರಾಜು ಹಾಕಿದರೆ ಯಾರೂ ಅದನ್ನು ಖರೀದಿಸಬಾರದು. ಬಾರ್ಡೋಲಿಯಲ್ಲಿ ಜಮೀನುಗಳ ಮುಟ್ಟುಗೋಲು ಭಾರಿ ಪ್ರಮಾಣದಲ್ಲಿ ಆಗಿತ್ತು. ಸ್ವರಾಜ್ಯದ ನಂತರ ಎಲ್ಲ ಜಮೀನುಗಳನ್ನು ಬಹುಮಾನ ದೊಂದಿಗೆ ಹಿಂದಿರುಗಿ ಕೊಡಲಾಗಿದೆ.

ಪಟ್ಟಣಗಳಲ್ಲಿ ಈಗ ಅಬಕಾರಿ ಕರ ಇದೆ. ಕರ ನಿರಾಕರಣೆಯ ಅಂಗವಾಗಿ ಸೇಂದಿ ಸೆರೆ ಅಂಗಡಿಗಳ ಮುಂದೆ, ಹೆಂಡದ ಪಡಕಾನೆಗಳ ಮುಂದೆ ಪಿಕೆಟಿಂಗ್ ಮಾಡಬೇಕು. ಈ ಅಂಗಡಿಗಳಿಗಿಂತಲೂ ಅಬಕಾರಿ ಸರ್ಕಾರಿ ಡಿಪೋಗಳ ಹತ್ತಿರವೇ ಎತ್ತಿನ ಗಾಡಿಗಳಲ್ಲಿ ಮತ್ತು ಲಾರಿಗಳಲ್ಲಿ ಹೆಂಡ, ಸಾರಾಯಿ ಇವುಗಳನ್ನು ತರುವಾಗ ಅವನ್ನು ತಡೆಯಬೇಕು. ಅವನ್ನು ರಸ್ತೆಯಲ್ಲಿ ಚೆಲ್ಲಿ ಬಿಡಬೇಕು. ಎರಡನೆಯದು ಮನೋರಂಜನಾ ತೆರಿಗೆ. ಸಿನಿಮಾ ಮಂದಿರಗಳ ಬಳಿ ಪಿಕೆಟಿಂಗ್ ಮಾಡಿ ಅಲ್ಲಿಯೂ ಕರ ನಿರಾಕರಣೆಯ ಘೋಷಣೆಗಳನ್ನು ಕೂಗಬೇಕು.

೩. ಜನತಾ ಸರ್ಕಾರ : *

ಯಶಸ್ವಿ ಬಿಹಾರದ ಬಂದ್ ನಂತರ ಈ ಸರ್ಕಾರವನ್ನು ನಿರಾಕರಿಸಿ ಅದನ್ನು ನಿಷ್ಕ್ರಿಯಗೊಳಿಸದೆ ಜನತೆ ಮತ್ತೇನನ್ನು ಮಾಡಬೇಕು ? ಗಾಂಧೀಜಿ ಇದ್ದಿದ್ದರೂ ಹೀಗೇ ಮಾಡಿ ಎನ್ನುತ್ತಿದ್ದರು. ಇದನ್ನೇ ಅಸಹಕಾರ ಚಳವಳಿ ಎನ್ನುವುದು. ತಮ್ಮ ಆಡಳಿತವನ್ನು ತಾವೇ ನಡೆಸುವುದು ಮತ್ತು ಜನತೆಯ ವಿಶ್ವಾಸವನ್ನು ಕಳೆದುಕೊಂಡಿರುವ ಈಗಿನ ಸರ್ಕಾರಕ್ಕೆ ಮಾನ್ಯತೆ ಮಾಡದಿರುವುದು ಜನತೆಯ ಮೂಲಭೂತ ಹಕ್ಕು. ಈಗಿನ ಸರ್ಕಾರ ವಂಚನೆಯ ಸರ್ಕಾರ. ಜನತೆಯ ಹಕ್ಕುಗಳನ್ನು ಅಪಹರಣ ಮಾಡಿರುವ ಸರ್ಕಾರ. ಇದು ಇಂದಿರಾ ಗಾಂಧಿಯವರ ಮತ್ತು ಅವರ ಬೆಂಬಲಿಗರ ದೃಷ್ಟಿಯಲ್ಲಿ ''ಪ್ರತ್ಯಕ್ಷ ಬಂಡಾಯ'' ಆಗಿರ ಬಹುದು. ಆದರೆ ಇದು ಶುದ್ಧವೂ, ಸರಳವೂ ಆದ ಜನತೆಯ ಪ್ರಜಾತಂತ್ರ, ಒಳ್ಳೆಯ ಸಂಘಟನೆ ಇರುವ ಕಡೆಯಲ್ಲೆಲ್ಲಾ ಸರ್ಕಾರಿ ಕಾರ್ಯವನ್ನು ಸ್ಥಗಿತಗೊಳಿಸಿ ಜೊತೆ ಜೊತೆ ಯಲ್ಲೇ 'ಜನತಾ ಸರ್ಕಾರ' ಸಮಾನಾಂತರ ಕಾರ್ಯಗಳನ್ನು ಆರಂಭಿಸಬೇಕು. ಬ್ಲಾಕ್ ಮಟ್ಟದಲ್ಲಿ ಜನತೆಯ ರಾಜ್ಯ ಶುರು ಮಾಡಬೇಕು.

---

*೧೯೪೪ ರಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಬ್ರಿಟಿಷ್ ಸರ್ಕಾರಕ್ಕೆ ಪರ್ಯಾಯವಾಗಿ ತಾತ್ಕಾಲಿಕ ಸರ್ಕಾರವನ್ನು ಘೋಷಿಸಿ ಎಂಟು ಜನ ಮಂತ್ರಿಗಳನ್ನು ನೇಮಿಸಿ ಆಡಳಿತ ನಡೆಸಿದ್ದನ್ನು ಗಮನಿಸಬಹುದು.

ಜನತಾ ಸರ್ಕಾರ ರಚನೆ ಹೇಗೆ ?

ಜನಶಕ್ತಿ ಸಾಕಷ್ಟು ಇರುವ ಕಡೆ ಜನತಾ ಸರ್ಕಾರದ ಕಾರ್ಯಕ್ರಮಗಳನ್ನು ನಡೆಸಬೇಕು. ಸಾಧ್ಯವಾದರೆ ಹಳ್ಳಿ, ಪಂಚಾಯ್ತಿ ಮತ್ತು ಬ್ಲಾಕ್ ಮಟ್ಟದಲ್ಲಿ ಸಾಧ್ಯವಿಲ್ಲವಾದರೆ ಸಾಧ್ಯವಾಗುವ ಹಂತಗಳಲ್ಲಿ ಜನತಾ ಸರ್ಕಾರ ನಡೆಯಲಿ.

ಅದಕ್ಕಾಗಿ ಅನೇಕ ಕಾರ್ಯ ರೂಪಿತವಾಗಬೇಕು.

೧. ಹಳ್ಳಿಯ ವಯಸ್ಕ ಸ್ತ್ರೀ-ಪುರುಷರ ಗ್ರಾಮಸಭೆ ರಚನೆಯಾಗಬೇಕು.

೨. ಹಳ್ಳಿಯ ಪ್ರತಿನಿಧಿಗಳನ್ನು ಸೇರಿಸಿ ಪಂಚಾಯ್ತಿಯ ಜನಸಭೆ ಏರ್ಪಡಿಸಬೇಕು. ಪ್ರತಿನಿಧಿಗಳ ಚುನಾವಣೆಯಲ್ಲಿ ಮಹಿಳೆಯರು, ಹರಿಜನರು, ಮುಸಲ್ಮಾನರು, ಬಡವರ್ಗ ಮತ್ತು ಆದಿವಾಸಿಗಳಿಗೆ ಅಗತ್ಯವಾದ ಪ್ರಾತಿನಿಧ್ಯ ಇರತಕ್ಕದ್ದು. ಆದಷ್ಟು ಹೆಚ್ಚು ಪ್ರತಿನಿಧಿಗಳು ಯುವ ಜನರೇ ಇರುವಂತೆ. ವಿಶೇಷ ಪ್ರಯತ್ನಮಾಡಬೇಕು.

೩. ಪ್ರತಿ ಪಂಚಾಯ್ತಿಯಿಂದಲೂ ಆಯ್ಕೆಯಾದ ಒಬ್ಬ ಪ್ರತಿನಿಧಿ ಅಥವಾ ಮುಖಂಡನನ್ನೊಳಗೊಂಡಂತೆ ಬ್ಲಾಕ್ ಜನಸಭೆ ರಚಿತವಾಗಬೇಕು.

೪. ಗ್ರಾಮಸಭೆ ಮತ್ತು ಜನಸಭೆಗಳು ಬೇರೆಬೇರೆ ಕೆಲಸಗಳಿಗೆ ಗೌರವ ಸಂಚಾಲಕರನ್ನು ಆರಿಸಬೇಕು. ಇವರಿಗೆ ವೇತನ ಇರಕೂಡದು.

ಜನತಾ ಸರ್ಕಾರದ ಸಂಘಟನೆ ಪ್ರಜಾರಾಜ್ಯದ ಸಿದ್ಧಾಂತದ ತಳಹದಿಗನುಸಾರವಾಗಿ ಇರಬೇಕು. ಮಹತ್ವಪೂರ್ಣವಾದ ನಿರ್ಣಯಗಳನ್ನು ಕೈಗೊಳ್ಳುವಾಗ ಎಲ್ಲ ಸ್ತ್ರೀ ಪುರುಷರು, ಎಲ್ಲ ವಯಸ್ಕ ನಾಗರಿಕರೂ ಸೇರಿರಬೇಕು. ಹಳ್ಳಿಗಳಲ್ಲಿ ನಾಗರಿಕ ಗ್ರಾಮಸಭೆಗಳ ರಚನೆಯಾಗಬೇಕು. ಗ್ರಾಮಸಭೆಗಳ ಪ್ರತಿನಿಧಿಗಳಿಂದ ಕೂಡಿದ ಪಂಚಾಯ್ತಿಯೇ ಜನಸಭೆಯಾಗಬೇಕು. ಈ ಸಂಘರ್ಷದಲ್ಲಿ ಭಾಗವಹಿಸಿದ ಹಿರಿಯರೇ ಮುಖಂಡರಾಗಿ ಮುಂದುವರೆಯಲಿ. ಹಳೆ ಮುಖಂಡರುಗಳು ಇರದ ಕಡೆ ಹೊಸ ಮುಖಂಡರ ಆಯ್ಕೆಯಾಗಲಿ. ಎಲ್ಲ ಪಂಚಾಯ್ತಿಗಳ ಮುಖಂಡರ ಬ್ಲಾಕ್ ಜನಸಭೆ ಏರ್ಪಡಲಿ. ಗ್ರಾಮಸಭೆ ಮತ್ತು ಜನಸಭೆಗಳ ಮೂಲಕ ವಿವಿಧ ಕೆಲಸಗಳಿಗೆ ಸಂಚಾಲಕರ ಆಯ್ಕೆ ಚುನಾವಣೆ ಮೂಲಕ ನಡೆಯಲಿ.

ಜನತಾ ಸರ್ಕಾರ ಮೊದಲ ಹೆಜ್ಜೆಯಾಗಿ ತನ್ನ ನೈಜಸ್ವರೂಪದಲ್ಲಿ ಈ ಕೆಲಸಗಳನ್ನು ಕೈಗೊಳ್ಳಬೇಕು.

೧. ಪೊಲೀಸು ಠಾಣೆಗಳನ್ನು ಬಹಿಷ್ಕರಿಸಬೇಕು. ಕಳ್ಳತನ ಮುಂತಾದ ಅಪರಾಧಗಳನ್ನು ತಡೆಗಟ್ಟಲು ಹಳ್ಳಿಗಳಲ್ಲಿ 'ಗ್ರಾಮ ಶಾಂತಿದಳ' ಗಳ ಸಂಘಟನೆಯಾಗಬೇಕು. ಒಳಜಗಳಗಳು, ತಂಟೆ ತಕರಾರುಗಳನ್ನು ಪರಂಪರಾನುಗತವಾಗಿ ಬಂದಿರುವ ಪಂಚಾಯಿತಿ ಪದ್ಧತಿಯಿಂದ ಪರಿಹರಿಸಿಕೊಳ್ಳಬೇಕು.

೨. ಈಗಿನ ಜನವಿರೋಧೀ ಸರ್ಕಾರಕ್ಕೆ ಯಾವುದೇ ರೀತಿಯ ಕಂದಾಯಗಳನ್ನು ಕೊಡಬಾರದು. ಬಾಕಿ ಇರುವ ಸರಕಾರಿ ಸಾಲಗಳನ್ನು ಕೊಡಕೂಡದು. ಗ್ರಾಮಸಭೆಗಳು, ಪಂಚಾಯ್ತಿ ಸಭೆಗಳು, ಬ್ಲಾಕ್ ಸಭೆಗಳು ಸರ್ವಾನುಮತದಿಂದ ತೀರ್ಮಾನ ಮಾಡಿದರೆ ಸರ್ಕಾರಿ ಸಾಲಗಳನ್ನು 'ಜನತಾಸರ್ಕಾರ'ಕ್ಕೆ ಪಾವತಿ ಮಾಡಬೇಕು. ಹೀಗೆ ಮಾಡಿದ ಕಡೆಯಲ್ಲಿ ಪ್ರತಿ ತಿಂಗಳೂ ಜಮಾ ಖರ್ಚುಗಳ ಪಟ್ಟಿಯನ್ನು ಕಡ್ಡಾಯವಾಗಿ ಪ್ರಕಟಿಸಬೇಕು. ಕಂದಾಯ ವಸೂಲು ಮಾಡದೆ ಇರುವ ಕಡೆಗಳಲ್ಲಿ ಸ್ವಯಿಚ್ಛೆಯಿಂದ ಕೊಟ್ಟ ಹಣದಿಂದ ಕಾರ್ಯ ಮಾಡಬೇಕು. ಇದರ ಲೆಕ್ಕವನ್ನು ಗ್ರಾಮಸಭೆ ಮತ್ತು ಜನಸಭೆಗಳಲ್ಲಿ ಇಡಬೇಕು. ಯಾವುದೇ ಸಂದರ್ಭದಲ್ಲಿ ಬಲವಂತವನ್ನಾಗಲೀ ಇಲ್ಲಾ ಬಲಪ್ರಯೋಗವಾಗಲೀ ಮಾಡಕೂಡದು.

೩. ಜನತಾ ಸರ್ಕಾರ ಯೋಗ್ಯವೂ, ನ್ಯಾಯಯುತವೂ ಆದ ರೀತಿಯಲ್ಲಿ ಜನೋಪಯೋಗಿ ವಸ್ತುಗಳನ್ನು ಯೋಗ್ಯ ಬೆಲೆಗೆ ಹಂಚಿಕೆ ಮಾಡುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ಬಡವರಿಗೆ ಪೂರ್ಣ ನ್ಯಾಯ ಸಿಗುವಂತೆ ವಿಶೇಷ ಗಮನ ಕೊಡಬೇಕು.

೪. ಪ್ರವಾಹ, ಕ್ಷಾಮಪೀಡಿತ ಪ್ರದೇಶಗಳಲ್ಲಿ ಪರಿಹಾರ ಕೆಲಸಗಳನ್ನು ಜನತಾ ಸರ್ಕಾರ ಕೈಗೊಳ್ಳಬೇಕು. ಈಗಿನ ಸರ್ಕಾರ ನಡೆಸುತ್ತಿರುವ ಪರಿಹಾರ ಕೆಲಸಗಳ ಮೇಲೂ ಕಾವಲು ಇರಬೇಕು.

೫. ಹಳ್ಳಿಗಳಲ್ಲಿ ಹೊಸ ವಾತಾವರಣ ನಿರ್ಮಿಸಿ ಹರಿಜನರಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಅವರೊಂದಿಗೆ ಸಮಾನವಾಗಿ ನಡೆದುಕೊಳ್ಳುವಂತೆ ಮಾಡಬೇಕು. ಅವರನ್ನು ಜೋಪಡಿಗಳಿಂದ ಒಕ್ಕಲೆಬ್ಬಿಸುವುದು ಈಗ ಭಾರೀ ಪ್ರಮಾಣದಲ್ಲಿ ನಡೆದಿದೆ. ಇದನ್ನು ಕೂಡಲೇ ತಡೆಗಟ್ಟಬೇಕು. ಅವರಿಗೆ ಮನೆ ಕಟ್ಟಿಕೊಳ್ಳಲು ಮರ, ಬೊಂಬು ಮುಂತಾದ ಸಲಕರಣೆಗಳನ್ನು ಜನತಾಸರ್ಕಾರ ಒದಗಿಸಬೇಕು. ಈ ಕಾರ್ಯಗಳು ತಡವಿಲ್ಲದೆ ಆದಷ್ಟು ಬೇಗ ಆಗಬೇಕು.

೬. ಜನತಾಸರ್ಕಾರ ದಿನಗೂಲಿಯನ್ನು ಹೆಚ್ಚಿಸಲು ಯತ್ನಿಸಬೇಕು. ಜನತೆಯ ಕುಶಲ ಬುದ್ಧಿಯನ್ನು ಪ್ರೋತ್ಸಾಹಿಸಿ ಸೇವೆಗೆ ತೊಡಗಿಸಬೇಕು.

೭. ಅಗತ್ಯ ಸಂದರ್ಭಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಬಹುದು. ಆದರೆ ಯಾರಿಗೇ ಆಗಲೀ ಯಾವುದೇ ರೀತಿಯ ದಂಡನೆಯನ್ನಾಗಲೀ, ಅವಮಾನವನ್ನಾಗಲೀ ಮಾಡಕೂಡದು.

೮. ಎಲ್ಲ ಚುನಾಯಿತ ಪ್ರತಿನಿಧಿಗಳೂ ಮತ್ತು ಸಂಚಾಲಕರೂ ಗೌರವ ಕಾರ್ಯಕರ್ತರಾಗಿ ಸ್ವಯಂಸೇವಕರಂತೆ ಕೆಲಸ ಮಾಡಬೇಕು.

ಜನತೆಯ ಬಳಿ ಹೋಗಿ ಕೆಲಸ ಮಾಡಬೇಕು. ಸರಿಯಾಗಿ ಕೆಲಸ ಮಾಡಿದರೆ ಮುಂದಿನ ಚುನಾವಣೆಯಲ್ಲಿ ಜನ ಈ ಪ್ರತಿನಿಧಿಗಳನ್ನೇ ಆಯ್ಕೆ ಮಾಡುತ್ತಾರೆ. ಕೆಲಸ ಮಾಡದಿದ್ದರೆ ಬಿಟ್ಟು ಹೊರಡಿ ಎನ್ನುತ್ತಾರೆ.

೪. ಮತದಾರರ ಶಿಕ್ಷಣ :

ಬಿಹಾರದಲ್ಲಿ ಹಾಗೂ ವಿಧಾನಸಭೆಯ ವಿಸರ್ಜನೆಯ ಬೇಡಿಕೆ ಇಲ್ಲದಿರುವ ಇತರ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಏನು ಮಾಡಬೇಕೆಂಬುದರ ಚಳವಳಿಯೊಂದನ್ನು ನಾವು ನಡೆಸುತ್ತೇವೆ. ಜನರನ್ನು ಸಿದ್ಧಗೊಳಿಸುತ್ತೇವೆ. ಪೋಲಿಂಗ್ ಬೂತುಗಳಲ್ಲಿ ಅನ್ಯಾಯವಾಗದ ರೀತಿಯಲ್ಲಿ ಸಂಘರ್ಷ ಸಮಿತಿಗಳ ಯುವಕರು ನೋಡಿಕೊಳ್ಳುತ್ತಾರೆ. ಅನ್ಯಾಯ ಕಂಡುಬಂದರೆ ಮತದಾನ ಮಾಡುವುದನ್ನು ತಡೆಗಟ್ಟುತ್ತಾರೆ. ಈ ರೀತಿ ನ್ಯಾಯದ ಶಕ್ತಿಯ ನಿರ್ಮಾಣವಾಗುತ್ತದೆ. ಚುನಾವಣೆಯಲ್ಲಿ ಹೇಗೆ ಮತದಾನ ಮಾಡಬೇಕು, ಯಾರಿಗೆ ಮಾಡಬೇಕು ಎಂಬುದು ಸಿದ್ಧಾಂತದ ವಿಚಾರ. ಈಗಿನ ಪ್ರಮುಖ ಸಿದ್ಧಾಂತ ಎಂದರೆ ಪ್ರಾಮಾಣಿಕತೆ ಮಾತ್ರ, ಪ್ರಾಮಾಣಿಕನಿಗೆ ಮಾತ್ರ ನಿಮ್ಮ ಓಟು. ಅಪ್ರಾಮಾಣಿಕನಾದವನು ಕುಲಸಂಬಂಧಿ, ರಕ್ತ ಸಂಬಂಧಿಯಾಗಿದ್ದರೂ ಅವನಿಗೆ ನಿಮ್ಮ ಓಟನ್ನು ಕೊಡಬಾರದು. ಬಡವರ ಸೇವೆ ಮಾಡುವವನಿಗೆ ನಿಮ್ಮ ಓಟು ಮೀಸಲಾಗಿರಬೇಕು. ಇಂತಹ ಶಿಕ್ಷಣವನ್ನು ಪ್ರತಿಯೊಂದು ಮತ ಕ್ಷೇತ್ರಗಳಲ್ಲೂ ನೀಡಬೇಕು.

೫. ಅನ್ಯಾಯದ ವಿರುದ್ಧ ಸಂಘರ್ಷ :

ವಿಧಾನಸಭೆ ಭಂಗವಾದರೂ ಜನಸಂಘರ್ಷ ಸಮಿತಿಗಳೂ, ಛಾತ್ರ ಸಂಘರ್ಷ ಸಮಿತಿಗಳೂ ತಮ್ಮ ಕೆಲಸವನ್ನು ಮಾಡುತ್ತಲೇ ಇರುತ್ತವೆ. ಸಮಾಜದ ಪ್ರತಿಯೊಂದು ಅನ್ಯಾಯ ಮತ್ತು ಅನೀತಿಯ ವಿರುದ್ಧ ಅವು ನಿರಂತರ ಸಂಘರ್ಷ ಮಾಡುತ್ತವೆ. ಈ ಸಮಿತಿಗಳಿಗೆ ಈ ಮಹತ್ವಪೂರ್ಣ ಕಾರ್ಯ ಸದಾ ಇರುತ್ತದೆ. ಹಳ್ಳಿಯಿಂದ ದಿಲ್ಲಿಯವರೆಗೆ ನಡೆಯುವ ಲಂಚಕೋರತನ, ಭ್ರಷ್ಟಾಚಾರ, ಅಪ್ರಮಾಣಿಕತೆ, ಕಾಳಸಂತೆ ಇವೆಲ್ಲದರ ವಿರುದ್ಧ ಸಂಘರ್ಷ ನಡೆಯುತ್ತಿರುತ್ತದೆ. ಇದರ ಜೊತೆಜೊತೆಯಲ್ಲೇ ಒತ್ತುವರಿ ಮಾಡಿಕೊಡಿರುವ ದೊಡ್ಡದೊಡ್ಡ ಜಮೀನುದಾರರ ವಿರುದ್ಧವೂ ಒತ್ತುವರಿಯನ್ನು ತೆರವು ಮಾಡುವಂತೆ ಸಂಘರ್ಷ ಸಮಿತಿಗಳು ಹೋರಾಡಬೇಕು.

ಹಳ್ಳಿಗಳಲ್ಲಿ ಬಗೆಬಗೆಯ ಅನ್ಯಾಯಗಳು ಆಗುತ್ತಿರುತ್ತವೆ. ಉದಾಹರಣೆಗೆ- ಹರಿಜನರಿಗೆ, ಬಡ ಕೂಲಿಕಾರರಿಗೆ ದಿನಿತ್ಯವೂ ಅನ್ಯಾಯವಾಗುತ್ತಿರುತ್ತದೆ. ಅವನ್ನು ತಡೆಗಟ್ಟಬೇಕು. ಸ್ತ್ರೀಯರ ಮೇಲಿನ ದಬ್ಬಾಳಿಕೆಯನ್ನು ತಡೆಯಬೇಕು. ಭೂ ಸುಧಾರಣೆಯ ಕಾನೂನು, ಭೂ ಕಾರ್ಮಿಕರ ಕನಿಷ್ಠ ಸಂಭಾವನೆಯ ಕಾನೂನು, ಹರಿಜನ ಕಲ್ಯಾಣ ಕಾನೂನು ಮುಂತಾದವುಗಳು ಸರಿಯಾಗಿ ಜಾರಿಗೆ ಬರುವಂತೆ ಸಂಘರ್ಷ ಸಮಿತಿಗಳು ಕೆಲಸ ಮಾಡಬೇಕು. ಸರ್ಕಾರವು ಈವರೆಗೆ ಜಾರಿಗೆ ತರಲು ವಿಫಲವಾದಲ್ಲೆಲ್ಲಾ ಈ ಸಂಘರ್ಷ ಸಮಿತಿಗಳು ಯಶಸ್ವಿಗೊಳಿಸಲು ಪ್ರಯತ್ನಶೀಲವಾಗಬೇಕು. ಪ್ರಜಾತಂತ್ರಕ್ಕೆ ಮಾತ್ರವಲ್ಲದೆ ಸಾಮಾಜಿಕ, ಆರ್ಥಿಕ, ನೈತಿಕ ಕ್ರಾಂತಿಗಾಗಿ ಅಥವಾ ಸಂಪೂರ್ಣ ಕ್ರಾಂತಿಗಾಗಿ ಈ ಸಮಿತಿಗಳು ಮಹತ್ವಪೂರ್ಣವಾದ ಕೆಲಸದಲ್ಲಿ ನಿರಂತರ ತೊಡಗಿಸಿಕೊಳ್ಳುತ್ತವೆ.

ಕೊನೆಯದಾಗಿ ನಾನು ಹೇಳುವುದಿಷ್ಟೆ. ಈ ಆಂದೋಲನ ಕೇವಲ ರಾಜಕೀಯ ಭ್ರಷ್ಟಾಚಾರದ ವಿರುದ್ಧವಾಗಿ ಮಾತ್ರ ನಡೆಯದೆ ಸಮಾಜ ಜೀವನದಲ್ಲಿಯ ಇತರ ಕ್ಷೇತ್ರಗಳಲ್ಲಿ ನಡೆಯುತ್ತದೆ. ಉದ್ಯೋಗ ಮತ್ತು ವ್ಯಾಪಾರಗಳಲ್ಲಿ ನಡೆಯುವ ಕಳ್ಳಸಂತೆ, ಕಳ್ಳಸಂಗ್ರಹ, ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ಭ್ರಷ್ಟಾಚಾರ ಮೊದಲಾದ ಎಲ್ಲದರ ವಿರುದ್ಧವಾಗಿ ಇದೆ.

ಎಲ್ಲಕ್ಕಿಂತ ಮಹತ್ವದ ವಿಚಾರ ಎಂದರೆ ಈ ಆಂದೋಲನಕ್ಕೆ ಬಹುದೂರ ಗಾಮಿಯಾದ ಧ್ಯೇಯಗಳೂ ಇವೆ. ಮೂಲಭೂತವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಪರಿವರ್ತನೆ ಮಾಡುವುದೇ ಮೂಲಭೂತವಾದ ಧ್ಯೇಯ.

ಬಿಹಾರದ ಸಂಘರ್ಷ ಒಂದು ಗಳಿಗೆ ಬೆಳಗಿ ಇತಿಹಾಸದಲ್ಲಿ ಕಣ್ಮರೆಯಾಗುವ ಮಿಂಚಲ್ಲ. ಅದು ಸತತವೂ ಹರಿಯುವ ಕ್ರಾಂತಿಕಾರಿ ಸಂಘರ್ಷದ ನಿತ್ಯಧಾರೆ. ಆದ್ದರಿಂದಲೇ ನಾನು ಇದನ್ನು ಸಂಪೂರ್ಣ ಕ್ರಾಂತಿಯ ಸಂಘರ್ಷ ಎಂದು ಕರೆದಿದ್ದೇನೆ.

* ಬರುವ ಕ್ರಾಂತಿಗೆ ವಿದ್ಯಾರ್ಥಿಗಳು ಹಾಗೂ ಯುವಜನರೇ ಮುಂದಾಳುಗಳು.
* ವಿದ್ಯಾರ್ಥಿಗಳೇ ಕ್ರಾಂತಿಗಾಗಿ ಒಂದು ವರ್ಷ ಕೊಡಿ.
* ಇದರಲ್ಲಿ ಜನತೆಯ ಸಹಕಾರ ಅನಿವಾರ್ಯ.
* ದೇಶದ ನಾಡಿಯನ್ನು ಗುರುತಿಸಿ
* ಪಕ್ಷರಹಿತರಾಗಿರಿ.
* ಶಿಸ್ತಿನ ಸೈನಿಕರಾಗಿ.
* ನಿಮ್ಮ ಚಾರಿತ್ರ್ಯಕ್ಕೆ ಹೆಚ್ಚಿನ ಮಹತ್ವ ಕೊಡಿ.
* ನಿಮ್ಮ ಆಚರಣೆಯನ್ನು, ವರ್ತನೆಯನ್ನು ಸದಾ ಒರೆಗಲ್ಲಿಗೆ ಹಚ್ಚಿ.
* ಇದು ಮಾನವೀಯ ಕ್ರಾಂತಿ, ಆಂತರಿಕ ಕ್ರಾಂತಿ.
* ಈ ಕ್ರಾಂತಿಯಿಂದ ಭಾರತದ 'ಅಧ್ಯಾತ್ಮ' ವ್ಯಕ್ತಿವ್ಯಕ್ತಿಯಲ್ಲೂ ಶಕ್ತಿಯಾಗಿ ಆವಿರ್ಭವಿಸುತ್ತದೆ.
* ಇದು ಸಂಪೂರ್ಣ ಕ್ರಾಂತಿ.

★

ತುರ್ತುಪರಿಸ್ಥಿತಿಯ ಕರಿ ನೆರಳಿನಲ್ಲಿ

ಜನ ಕಂಡರೆ ಜನ ಹೆದರಿಗೆ
ಎಲ್ಲೆಲ್ಲಿಯೂ ಸಂದೇಹ!
ನರ ನೀಚತೆ ಮಾರೀಚತೆ
ದೇಶ ಪ್ರೇಮದ ನೆವದಿ
ಅಸು ಹಿಂಡುತ್ತಿವೆ ಜವದಿ!

ಕುವೆಂಪು

ಸ್ವಾತಂತ್ರ್ಯ ಪೂರ್ವದ ರಾಷ್ಟ್ರಕಟ್ಟುವ ಕೆಚ್ಚುನೆಚ್ಚುಗಳು ಸ್ವಾತಂತ್ರ್ಯಾನಂತರ ದಶಕಗಳು ಕಳೆದಂತೆ ನುಚ್ಚುನೂರಾಗುತ್ತಾ ಬಂದುವು. ದೇಶದಲ್ಲಿ ಬಡತನ, ನಿರುದ್ಯೋಗ, ಅಂತಃಕಲಹಗಳು ವ್ಯಾಪಕವಾಗಿ ಬೆಳೆಯುತ್ತಾ ಹೋದುವು. ರಾಜಕೀಯ ಭ್ರಷ್ಟಾಚಾರ ಮುಗಿಲು ಮುಟ್ಟುತ್ತಿತ್ತು. ಇದರ ಜೊತೆಜೊತೆಯಲ್ಲೇ ಕಾರ್ಖಾನೆಗಳು ಹೆಚ್ಚಿದುವು. ರಸ್ತೆಗಳ, ಆಸ್ಪತ್ರೆಗಳ, ಶಾಲಾ ಕಾಲೇಜುಗಳ ಸಂಖ್ಯೆಯೂ ಬೆಳೆಯಿತು. ಆದರೆ ಶಿಕ್ಷಣದಲ್ಲಿ ಯಾವ ಮೂಲಭೂತ ಬದಲಾವಣೆಯೂ ಇರದೆ ಬ್ರಿಟಿಷರ ಕಾಲದ ಕೇವಲ ಗುಮಾಸ್ತರನ್ನು ತಯಾರು ಮಾಡುವ ಶಿಕ್ಷಣವೇ ಮುಂದುವರೆದ ಕಾರಣ ಅನೈತಿಕತೆಗೆ, ಮೋಸ ವಂಚನೆಗಳಿಗೆ, ಲಂಚಗುಳಿತನಕ್ಕೆ, ಸ್ವಾರ್ಥಸಾಧನೆಗೆ ಪ್ರಚೋದನೆ ನೀಡಿತು. ಜನತೆಗೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಕಡಿಮೆಯಾಗುತ್ತಾ ಬಂತು. ಬ್ರಿಟಿಷರ ಗುಲಾಮಗಿರಿಯಿಂದ ಪಾರಾದ ಜನತೆ ಸ್ವಕೀಯ ಸರ್ಕಾರದ ಗುಲಾಮರಾಗಿ ವರ್ತಿಸತೊಡಗಿದರು.

ಜನರ ಹಿತಾಸಕ್ತಿಯನ್ನು ಕಾಪಾಡಲು ಸರ್ಕಾರ ಅಸಮರ್ಥವಾದಾಗ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಜನತೆ ಸ್ವತಃ ತಾನೇ ಹೋರಾಡಬೇಕಾಗುತ್ತದೆ ಎಂದು ಜಯಪ್ರಕಾಶ ನಾರಾಯಣ್ ಜನತೆಗೆ ಕರೆಕೊಟ್ಟರು. ಸಂಪೂರ್ಣ ಕ್ರಾಂತಿಯ ಸ್ವರೂಪವನ್ನು ಜನತೆಯ ಮುಂದಿಟ್ಟರು. ಇವರ ಕರೆಗೆ ಓಗೊಟ್ಟ ಗುಜರಾತಿನ ಯುವಜನ ಬೆಲೆ ಏರಿಕೆ, ಭ್ರಷ್ಟಾಚಾರ, ನಿರುದ್ಯೋಗ ಇವುಗಳ ವಿರುದ್ಧ ೧೯೭೪ರ ಆರಂಭದಲ್ಲಿ ಹೋರಾಟವನ್ನು ಪ್ರಾರಂಭಿಸಿದರು. ಕ್ರಮೇಣ ಇದು ಜನತೆಯ ಹೋರಾಟವಾಗಿ ರೂಪ ಪಡೆದು ಭ್ರಷ್ಟ ಆಡಳಿತವನ್ನು ಕಿತ್ತೊಗೆವ ಸಂಕಲ್ಪ ಮಾಡಿತು. ಬಿಹಾರದ ಯುವಶಕ್ತಿ ಇವುಗಳ ಜೊತೆಗೆ ಶಿಕ್ಷಣದಲ್ಲಿ ಕ್ರಾಂತಿಯಾಗಬೇಕು ಎಂಬ ನಾಲ್ಕನೆಯ ಬೇಡಿಕೆಯನ್ನು ಮುಂದಿಟ್ಟುಕೊಂಡು ಆಂದೋಲನವನ್ನು ಆರಂಭಿಸಿದರು.

ಆಂದೋಲನ ಶಾಂತಿಯುತವಾಗಿರಬೇಕು ಹಾಗೂ ಪಕ್ಷಾತೀತವಾಗಿರಬೇಕೆಂದು ಅದರ ನಾಯಕತ್ವವನ್ನು ಜಯಪ್ರಕಾಶ ನಾರಾಯಣರೇ ವಹಿಸಬೇಕೆಂದು ಯುವಜನತೆ ಒತ್ತಾಯಿಸಿತು. ಜಯಪ್ರಕಾಶರು ನೇತೃತ್ವ ವಹಿಸಿದರು. ಅದು ಜನತೆಯ ಆಂದೋಲನವಾಗಿ ಮಾರ್ಪಟ್ಟಿತು.

೧೯೭೪, ಜೂನ್ ೫ರಂದು ನಡೆದ ಬೃಹತ್ ಸಭೆಯಲ್ಲಿ ಜಯಪ್ರಕಾಶ ನಾರಾಯಣ್ ಅವರು ಈ ಆಂದೋಲನದ ಗುರಿ ಸಂಪೂರ್ಣ ಕ್ರಾಂತಿ ಎಂದು ಘೋಷಿಸಿದರು. ಈ ಶಾಂತಿಯುತ ಆಂದೋಲನವನ್ನು ಹತ್ತಿಕ್ಕಲು ಸರ್ಕಾರ ಸರ್ವ ಪ್ರಯತ್ನ ಮಾಡಿತು. ಶಾಂತಿಯುತವಾಗಿ ಕುಳಿತಿದ್ದ ಜನರ ಮೇಲೆ ಗುಂಡಿನ ಮಳೆಗರೆದರು. ಸುಮಾರು ೧೫೦ ಜನ ಮಡಿದು ಹುತಾತ್ಮರಾದರು. ಈ ಘಟನೆ ಬ್ರಿಟಿಷ್ ಆಡಳಿತದ 'ಜಲಿಯನ್‌ವಾಲಾ ಬಾಗ್'ನ ಘಟನೆಯನ್ನು ನಾಚಿಸುವಂತಿತ್ತು. ನವೆಂಬರ್ ೪ ರಂದು ಕ್ರೂರ ಲಾಠಿ ಜಯಪ್ರಕಾಶರ ಮೇಲೆರಗಿತು. ಎಪ್ಪತ್ಮೂರು ವರ್ಷದ ಜಯಪ್ರಕಾಶರು ಅದನ್ನೂ ದಿಟ್ಟತನದಿಂದ ಎದುರಿಸಿದರು. ಪಟ್ನಾ ನಗರದ ಮೇಲೆ ವಿಮಾನದಿಂದ ಅಶ್ರುವಾಯು ಗುಂಡುಗಳು ಎರಗಿದವು. ಇವೆಲ್ಲವನ್ನೂ ಕಂಡು ಅಹಿಂಸಾ ಮಾರ್ಗದಲ್ಲಿ ಶಾಂತಿಯುತವಾಗಿ ಭಾಗವಹಿಸಿದ್ದ ನಿರಪರಾಧಿ ಜನರ ಮೇಲೆ ಗುಂಡು ಹಾರಿಸುವ ಅವಕಾಶ ಪೋಲೀಸ್ ಕಾಯ್ದೆಯಲ್ಲಿಲ್ಲ. ಆದ್ದರಿಂದ ಇಂಥ ನ್ಯಾಯಬಾಹಿರ ಕೃತ್ಯಗಳನ್ನು ನಿಲ್ಲಿಸುವಂತೆ ಪೋಲೀಸರಿಗೆ ಕರೆ ನೀಡಿದರು. ಅನ್ಯಾಯದ ಆಜ್ಞೆಗಳನ್ನು ಪಾಲಿಸಲು ಬಿಹಾರದ ಪೋಲೀಸರು ಹಿಂದೆಗೆಯುತ್ತಿರುವುದನ್ನು ಕಂಡು ಸರ್ಕಾರ ಕೇಂದ್ರ ಮೀಸಲು ಪೊಲೀಸ್ ಪಡೆ ಹಾಗೂ ಗಡಿ ರಕ್ಷಣಾ ದಳಗಳನ್ನು ಕರೆಸಿತು. ಆಂದೋಲನದ ಬೆಂಕಿ ಆರುವ ಬದಲು ದೇಶಾದಾದ್ಯಂತ ಹಬ್ಬಿ ಹರಡಿತು.

ಗುಜರಾತಿನ ಚುನಾವಣೆಯಲ್ಲಿ ಕಾಂಗ್ರೆಸ್ ಜನತಾರಂಗದ ಎದುರು ಪರಾಭವಗೊಂಡಿತು. ಪ್ರಧಾನಮಂತ್ರಿಯಾಗಿದ್ದ ಇಂದಿರಾಗಾಂಧಿಯ ಧೈರ್ಯ ಉಡುಗಿತು. ಅದೇ ಸಮಯಕ್ಕೆ ಆಕೆಯ ಆಯ್ಕೆಯ ಸಿಂಧುತ್ವವನ್ನು ಪ್ರಶ್ನಿಸಿದ್ದ ಕೇಸಿನ ತೀರ್ಪನ್ನು ಅಲಹಾಬಾದ್‌ನ ಉಚ್ಚನ್ಯಾಯಾಲಯ ಪ್ರಕಟಿಸಿತು. ಆಕೆಯ ಆಯ್ಕೆ ಅಸಿಂಧು ಎಂದು ಘೋಷಿಸಿತು. ಇದರಿಂದ ಹೆದರಿದ ಇಂದಿರಾಗಾಂಧಿ ಕಂಗಾಲಾದರು. ಗುಜರಾತಿನ ಸೋಲು, ರಾಷ್ಟ್ರವ್ಯಾಪಿಯಾದ ಆಂದೋಲನ, ಆಯ್ಕೆಯ ಅಸಿಂಧುತ್ವ ಈ ಮೂರೂ ಮುಪ್ಪುರಿಗೊಂಡು ಆಕೆಯ ಅಸ್ತಿತ್ವಕ್ಕೇ ಸವಾಲೊಡ್ಡಿದವು. ಇದರಿಂದ ತತ್ತರಿಸಿದ ಇಂದಿರಾಗಾಂಧಿ ಅಧಿಕಾರವನ್ನು ಉಳಿಸಿಕೊಳ್ಳಲು ಕಾನೂನುಬಾಹಿರ ಕ್ರಮವನ್ನು ಅನುಸರಿಸಿ ೧೯೭೫, ಜೂನ್ ೨೬ರಂದು ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯನ್ನು ಘೋಷಿಸಿ ಜಾರಿಗೊಳಿಸಿದರು. ತುರ್ತುಪರಿಸ್ಥಿತಿಯ ಕರಿನೆರಳು ಭಾರತವನ್ನು ಕಗ್ಗತ್ತಲಲ್ಲಿ ಮುಳುಗಿಸಿತು.

ಜಯಪ್ರಕಾಶ ನಾರಾಯಣರು, ವಿರೋಧ ಪಕ್ಷಗಳ ನಾಯಕರುಗಳೂ ಸೇರಿದಂತೆ ಸುಮಾರು ಒಂದೂವರೆ ಲಕ್ಷ ಜನರನ್ನು ಆಂತರಿಕ ಭದ್ರತಾ ನಿರ್ವಹಣ ಕಾಯ್ದೆ (MISA) ಹಾಗೂ ಭಾರತದ ರಕ್ಷಣಾ ನಿಯಮಗಳ (DIR) ಅಡಿಯಲ್ಲಿ ಬಂಧಿಸಿ ಸೆರೆಮನೆಗಳಲ್ಲಿ ಇಟ್ಟರು. ಪ್ರಜೆಗಳ ಎಲ್ಲ ನಾಗರಿಕ ಹಕ್ಕುಗಳನ್ನು ಸ್ಥಗಿತಗೊಳಿಸಿದರು. ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಂಡರು. ತಮ್ಮ ಚುನಾವಣೆಯ ಸಿಂಧುತ್ವವನ್ನು ಸ್ಥಾಪಿಸಲು ಕಾನೂನುಗಳನ್ನು ತಿದ್ದಿದರು. ಪೊಲೀಸ್ ಮತ್ತು ಜೈಲು ಅಧಿಕಾರಿಗಳ ಅಮಾನುಷ ಕ್ರೌರ್ಯಕ್ಕೆ ಸಿಕ್ಕಿ ಜೈಲುಗಳಲ್ಲಿ ನೂರಾರು ಜನ ಅಸು ನೀಗಿದರು. ಸಂವಿಧಾನಕ್ಕೆ ತಿದ್ದುಪಡಿಗಳನ್ನು ತಂದು ಸರ್ವಾಧಿ

ಕಾರಕ್ಕೆ ಅವಕಾಶವಿರುವ ರೀತಿಯಲ್ಲಿ ಅದನ್ನು ಬದಲಾಯಿಸಿದರು. ಇದರಿಂದ ಭಾರತದಲ್ಲಿ ಹಾಗೂ ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ತೀವ್ರ ಪ್ರತಿಕ್ರಿಯೆ ಉಂಟಾಯಿತು.

ಜಯಪ್ರಕಾಶರೂ ಸೇರಿದಂತೆ ಬಂಧಿತರಾದವರ ಪಟ್ಟಿಯಲ್ಲಿ ಮೊರಾರ್ಜಿ ದೇಸಾಯಿ, ಚೌದರಿ ಚರಣ್‌ಸಿಂಗ್, ಪೀಲೂ ಮೋದಿ, ಮಧುದಂಡವತೆ, ಅಶೋಕ ಮೆಹ್ತಾ, ಪಿ.ಎಸ್. ಬಾದಲ್, ರಾಜನಾರಾಯಣ್, ಬೆಂಗಳೂರಿಗೆ ಬಂದಿದ್ದ ಸಂಸತ್ ಸದಸ್ಯರಾಗಿದ್ದ ವಾಜಪೇಯಿ, ಲಾಲ್‌ಕೃಷ್ಣ ಆದ್ವಾನಿ, ಎಸ್.ಎನ್. ಮಿಶ್ರಾ ಸೇರಿದ್ದರು. ಪ್ರಧಾನಿ ಇಂದಿರಾ ಗಾಂಧಿಯವರ ಹಠಮಾರಿತನವನ್ನು ವಿರೋಧಿಸಿದ ಚಂದ್ರಶೇಖರ್ ಮತ್ತು ರಾಮಧನರಂಥ ಕಾಂಗ್ರೆಸ್ ನಾಯಕರಿಗೂ ಅದೇ ಗತಿಯಾಯ್ತು. ಸ್ವಲ್ಪ ಸಮಯದ ನಂತರ ಮೋಹನ್ ಧಾರಿಯಾ ಅವರನ್ನೂ ಬಂಧಿಸಲಾಯ್ತು.

ತಿರುವನಂತಪುರದಲ್ಲಿ ಕೇರಳದ ಮಾಜಿ ಮುಖ್ಯಮಂತ್ರಿ ನಂಬೂದರಿ ಪಾಡರ ಮುಖಂಡತ್ವದಲ್ಲಿ ಸಿ.ಪಿ.ಎಂ., ಕಾಂಗೋ, ಜನಸಂಘ, ಸಮಾಜವಾದಿ ಪಕ್ಷ, ಕೇರಳ ಕಾಂಗ್ರೆಸ್, ಸರ್ವೋದಯ ಮುಖಂಡರು, ಮುಸ್ಲಿಂಲೀಗ್ ಭಿನ್ನಮತೀಯರು ಮುಂತಾದವರು ಸೇರಿ ಪ್ರತಿಭಟನಾ ಮೆರವಣಿಗೆ ಮಾಡಿ ಸಭೆ ನಡೆಸಿದವು. ಬಿಹಾರದಲ್ಲಿ ಛಾತ್ರ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಮೂರು ದಿನಗಳ ಕಾಲ ಬಂದ್- ಹರತಾಳ-ಸಭೆ- ಮೆರವಣಿಗೆ ನಡೆದವು. ಮಹಾರಾಷ್ಟ್ರದಲ್ಲಿ ಪ್ರಬಲ ಪ್ರತಿಭಟನೆ ವ್ಯಕ್ತವಾಯಿತು. ಪೂನಾದ ಮೇಯರ್ ಭಾಯಿ ವೈದ್ಯರು ಬೃಹತ್ ಸಭೆಯಲ್ಲಿ ಮಾತನಾಡಿ ಬಂಧಿತರಾದರು. ಮುಂಬೈನ ಮಹಾನಗರ ಪಾಲಿಕೆ ತುರ್ತು ಪರಿಸ್ಥಿತಿಯ ವಿರುದ್ಧ ನಿರ್ಣಯ ಸ್ವೀಕರಿಸಿತು. ದಿಲ್ಲಿ, ಮುಂಬೈ, ನಾಗಪುರ, ಪೂನಾ, ಅಲಹಾಬಾದ್, ಕಲ್ಕತ್ತ, ಬೆಂಗಳೂರು, ಹುಬ್ಬಳ್ಳಿ, ಧಾರವಾಡ, ಎರ್ನಾಕುಲಂ ಹಾಗೂ ಅನೇಕ ಜಿಲ್ಲಾ ಕೇಂದ್ರಗಳಲ್ಲಿನ ವಕೀಲ ಸಂಘಗಳು ಗೊತ್ತುವಳಿ ಮಾಡಿ ಒಂದು ದಿನ ನ್ಯಾಯಾಲಯಕ್ಕೆ ಹಾಜರಾಗದೆ ಪ್ರತಿಭಟಿಸಿದವು.

ತುರ್ತು ಪರಿಸ್ಥಿತಿಯ ಘೋಷಣೆಯಾದ ಕೂಡಲೇ ಭಾರತದ ಅಡಿಷನಲ್ ಸಾಲಿಸಿಟರ್ ಜನರಲ್ ಕೆ.ಎಫ್. ನಾರಿಮನ್ ಮತ್ತು ರಿಸರ್ವ್ ಬ್ಯಾಂಕಿನ ಹಿರಿಯ ಅಧಿಕಾರಿಯೊಬ್ಬರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದರು. ಖ್ಯಾತ ನ್ಯಾಯವಾದಿ ನಾನಿ ಪಾಲ್ಖಿವಾಲರು ಇಂದಿರಾಗಾಂಧಿ ಪರ ಅಲಹಾಬಾದ್ ಉಚ್ಚನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದವರು ಪ್ರತಿಭಟನೆ ಸೂಚಿಸಿ ಕೇಸಿನಿಂದ ನಿವೃತ್ತಿಯಾದರು. ಪ್ರಧಾನಿ ಪಟ್ಟದಿಂದ ಕೆಳಗಿಳಿದು ದೇಶದ ಆಂತರಿಕ ಗಲಭೆಯನ್ನು ಶಮನಗೊಳಿಸಿ ಪ್ರಜಾಪ್ರಭುತ್ವವನ್ನು ಉಳಿಸಬೇಕೆಂದು ಭಾರತದ ಮಾಜಿ ಮಹಾ ದಂಡನಾಯಕ ಜನರಲ್ ಕಾರಿಯಪ್ಪ ಅವರಿಂದ ತಂತಿ ಹೋಯ್ತು. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ, ಪಿ. ಕೋದಂಡರಾವ್, ಎಚ್.ಎನ್. ಕುಂಜ್ರು, ಸರ್ವೋದಯ ಕಾರ್ಯಕರ್ತರಾದ ಎಚ್.ಎಸ್. ದೊರೆಸ್ವಾಮಿ, ಗರುಡಶರ್ಮ ಮುಂತಾದವರು ಪ್ರಧಾನಿಗೆ ಪತ್ರ ಬರೆದು ಇಂಥ ಅನರ್ಥದ ಹಾದಿಯಿಂದ

ಹಿಂದಿರುಗಬೇಕೆಂದು ಒತ್ತಾಯಿಸಿದರು. ದೆಹಲಿ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ|| ಕೆ.ಎನ್. ರಾಜ್, ಕೊಚ್ಚಿನ್ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಹಾಗೂ ಕೇರಳದ ಮಾಜಿ ಶಿಕ್ಷಣ ಸಚಿವ ಪ್ರೊ|| ಮುಂಡೆಸ್ಸರಿ, ಜವಹರಲಾಲ್ ನೆಹರೂ ಪ್ರಶಸ್ತಿ ವಿಜೇತ ಎಂ. ಗೋವಿಂದನ್ ಮುಂತಾದವರು ಭಾಷಣ, ಲೇಖನಗಳ ಮೂಲಕ ವಿರೋಧ ವ್ಯಕ್ತಪಡಿಸಿದರು. ಕರ್ನಾಟಕದ ಖ್ಯಾತ ಸಾಹಿತಿ ಶಿವರಾಮ ಕಾರಂತರು ಅಭಿವ್ಯಕ್ತಿಸ್ವಾತಂತ್ರ್ಯದ ಹರಣ ವಿರುದ್ಧಪ್ರತಿಭಟಿಸಿ ಪದ್ಮಭೂಷಣ ಬಿರುದನ್ನು ಕೇಂದ್ರಸರ್ಕಾರಕ್ಕೆ ಹಿಂದಿರುಗಿಸಿದರು. ಲಲಿತಕಲಾ ಅಕಾಡಮಿ ಪ್ರಶಸ್ತಿಯನ್ನೂ ತಿರಸ್ಕರಿಸಿದರು. ಹೆಚ್.ಡಿ. ದೇವೇಗೌಡರು ಬಂಧಿತರಾದರು. ಮಹಾರಾಷ್ಟ್ರದ ಜಯವಂತ ದಲವಿ, ಪ್ರೊ|| ನೀಲಕಂಠ ಸ್ನೋಹನಿ, ಗುಜರಾತ್‌ನ ವಿಷ್ಣುಪಾಂಡ್ಯ, ತಮ್ಮ ಸಾಹಿತ್ಯ ಕೃತಿಗಳಿಗೆ ಸರ್ಕಾರ ನೀಡಿದ್ದ ಪುರಸ್ಕಾರಗಳನ್ನು ತಿರಸ್ಕರಿಸಿದರು. ಸುಪ್ರಸಿದ್ಧ ಚಲನಚಿತ್ರ ನಿರ್ಮಾಪಕರೂ, ಶ್ರೇಷ್ಠ ನಟರೂ ಆಗಿದ್ದ ದಿ. ವಿ. ಶಾಂತಾರಾಂ ಅವರು ತಮಗೆ ಪ್ರಕಟಿಸಿದ್ದ ಪದ್ಮವಿಭೂಷಣ ಬಿರುದನ್ನು ನಿರಾಕರಿಸಿದರು. ಬಿಹಾರದ ಖ್ಯಾತ ಕವಿ ರೇಣು ಅವರು ಸರ್ಕಾರ ನೀಡುತ್ತಿದ್ದ ಗೌರವ ಧನವನ್ನು ತ್ಯಜಿಸಿದರು. ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಅಣ್ಣುಗುರೂಜಿ, ಎಚ್. ಎಸ್. ದೊರೆಸ್ವಾಮಿ, ಗರುಡ ಶರ್ಮಾ, ಸತ್ಯವ್ರತ, ಅಶ್ವತ್ಥನಾರಾಯಣ ಗೌಡ, ಪಿ. ವೆಂಕೋಬ ರಾವ್, ನಾರಾಯಣ ಪವಾರ್ ಭೌನ್ಸ್ಲೆ ಇವರುಗಳು ತುರ್ತುಪರಿಸ್ಥಿತಿಯ ವಿರುದ್ಧ ಭಾಷಣ ಮಾಡಿ ಕಾರಾಗೃಹ ಸೇರಿದರು. ಜೆ.ಬಿ. ಕೃಪಾಲಾನಿಯವರು ಸವಾಲನ್ನು ಎದುರಿಸುವಂತೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ, ಯುವಕರಿಗೆ ಕರೆ ಕೊಟ್ಟರು. ಮಹಾರಾಷ್ಟ್ರದಲ್ಲಿ ಸಂಸದ್ ಸದಸ್ಯ ಎಸ್. ಎಂ. ಜೋಷಿ ಹಳ್ಳಿಗಳಲ್ಲಿ ಪಾದಯಾತ್ರೆ ಮಾಡಿ ಜನಜಾಗೃತಿ ಮಾಡಿದರು. ಸತ್ಯಾಗ್ರಹ ಪ್ರಾರಂಭವಾಯ್ತು. ತಮಿಳುನಾಡು ಮತ್ತು ಗುಜರಾತುಗಳು ಪ್ರಶಂಸನೀಯ ಪಾತ್ರ ವಹಿಸಿದುವು. ಸತ್ಯಾಗ್ರಹ ಆರಂಭವಾದಮೇಲೆ ಜೆ.ಪಿ. ಯವರು ಸತ್ಯಾಗ್ರಹಿಗಳಿಗೆ ಸ್ಫೂರ್ತಿಯ ಸಂದೇಶ ನೀಡಿ ಆಂದೋಲನದಲ್ಲಿ ಅಂತಿಮ ಜಯ ನಮ್ಮದು ಎಂಬ ಭರವಸೆಯನ್ನು ತುಂಬಿದರು.

ತುರ್ತುಪರಿಸ್ಥಿತಿಯ ಘೋಷಣೆಯ ಕಾಲಕ್ಕೆ ಜಯಪ್ರಕಾಶರ ಆರೋಗ್ಯ ಅಷ್ಟು ಉತ್ತಮವಾಗಿರಲಿಲ್ಲ. ಅವರ ದೇಹ ಸ್ಥಿತಿ ಉಲ್ಬಣಾವಸ್ಥೆಗೆ ಹೋಗುತ್ತಿದ್ದರೂ ಲೆಕ್ಕಿಸದೆ ಚಂಡಿಘಡ ಸೆರೆಮನೆಯಲ್ಲಿ ಒಂಟಿಯಾಗಿ ಕೂಡಿಹಾಕಲಾಗಿತ್ತು. ಇದೇ ರೀತಿ ತೀವ್ರ ಖಾಯಿಲೆಯಿಂದ ನರಳುತ್ತಿದ್ದವರೆಂದರೆ ಕರ್ನಾಟಕದ ಖ್ಯಾತ ಕಲಾವಿದೆ ಸ್ನೇಹಲತಾ ರೆಡ್ಡಿಯವರು. ಅವರು ತೀವ್ರ ಅಸ್ವಸ್ಥರಾದರೂ ಸರ್ಕಾರ ಕರುಣೆದೋರದೆ, ಸರಿಯಾದ ಶುಶ್ರೂಷೆಯನ್ನೂ ನೀಡದೆ ಅದರಿಂದ ಅಸು ನೀಗಿದ್ದು ತುರ್ತುಪರಿಸ್ಥಿತಿಯ ಕರಾಳ ಘಟನೆಗಳಲ್ಲಿ ಒಂದು. ಸ್ವತಂತ್ರ ಭಾರತದ ಜೈಲುಗಳು ಎಂದರೆ ಅಷ್ಟು ಭಯಾನಕ.

ಈ ನಡುವೆ ತುರ್ತುಪರಿಸ್ಥಿತಿಯ ಘೋಷಣೆಗೆ ಮುನ್ನ ೧೯೭೪ರಲ್ಲಿ ನಡೆದ ಬೃಹತ್ ಸಭೆಯಲ್ಲಿ ಜಯಪ್ರಕಾಶ ನಾರಾಯಣ ಅವರನ್ನು 'ಲೋಕನಾಯಕ' ಎಂದು ಘೋಷಿಸಲಾಯ್ತು. ಸರ್ಕಾರದೊಡನೆ ನೇರ ಸಂಘರ್ಷಕ್ಕಿಳಿಯುವುದನ್ನು ಆಚಾರ್ಯ ವಿನೋಬಾ

ಅವರು ಒಪ್ಪಲಿಲ್ಲ. ಜಯಪ್ರಕಾಶರು ಪೌನಾರಾದಲ್ಲಿ ಸರ್ವಸೇವಾ ಸಂಘದ ಅಖಿಲ ಭಾರತ ಮಹಾ ಸಮ್ಮೇಳನ ಕರೆದು ತಮ್ಮ ಸ್ಪಷ್ಟ ನಿಲುವನ್ನು ವಿವರಿಸಿದರು. ವಿನೋಬಾ ಅವರೊಡನೆ ದೀರ್ಘ ಚರ್ಚೆ ನಡೆಸಿದರು. ವಿನೋಬಾ ಮತ್ತು ಜೆ.ಪಿ.ಯವರ ದಾರಿಗಳು ಬೇರೆಬೇರೆ ಯಾದವು. ಆದರೆ ಮುಖ್ಯ ಗುರಿಯಾದ ಅಹಿಂಸಾತ್ಮಕ ಗ್ರಾಮ ಸಾಮ್ರಾಜ್ಯ ಎನ್ನುವುದಕ್ಕೆ ಯಾವ ರೀತಿಯ ಆತಂಕವೂ ಬರಲಿಲ್ಲ.

ಸೆರೆಮನೆಯ ದಿನಚರಿ :

ಜಯಪ್ರಕಾಶ ನಾರಾಯಣರ ಸೆರೆಮನೆ ವಾಸ ದಿನಾಂಕ ೨೬-೬-೧೯೭೫ ರಿಂದ ೪-೧೨-೧೯೭೫ರ ವರೆಗೆ. ಅವರ ಸೆರೆಮನೆಯ ದಿನಚರಿ ಜುಲೈ ೨೧ ರಿಂದ ನವೆಂಬರ್ ೫ನೇ ತಾರೀಖಿನವರೆಗೆ ವಿವಿಧ ದಿನಾಂಕಗಳಲ್ಲಿ ದಾಖಲಾಗಿದೆ. ಅದರ ಅತಿ ಮುಖ್ಯವಾದ ಕೆಲವು ವಿಚಾರಗಳನ್ನು ಇಲ್ಲಿ ಕೊಡಲಾಗಿದೆ.

ಜುಲೈ ೨೧ :

ನನ್ನ ಜಗತ್ತು ನನ್ನ ಸುತ್ತ ಛಿದ್ರ ಛಿದ್ರವಾಗಿ ಬಿದ್ದಿದೆ. ಇದೆಲ್ಲಾ ಮತ್ತೆ ಒಂದು ಗೂಡುವುದನ್ನು ನಾನು ನನ್ನ ಜೀವಿತ ಕಾಲದಲ್ಲಿ ಕಾಣಲಾರೆ ಎಂದೆನಿಸುತ್ತಿದೆ. ಬಹುಶಃ ನನ್ನ ಯುವ ಬಂಧುಗಳು ಕಾಣಬಹುದೇನೋ.....

ಇಲ್ಲಿ ನಾನು ಪ್ರಜಾಪ್ರಭುತ್ವದ ಕ್ಷಿತಿಜಗಳನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದೇನೆ. ಮುಖ್ಯವಾಗಿ, ಪ್ರಜಾಪ್ರಭುತ್ವ ವಿಧಾನಗಳಲ್ಲಿ ಹೆಚ್ಚು ಆಪ್ತವಾಗಿ ಹಾಗೂ ನಿರಂತರವಾಗಿ ಜನರನ್ನು ತೊಡಗಿಸುವ ಮೂಲಕ ಇದನ್ನು ಸಾಧಿಸಲು ಯತ್ನಿಸಿದ್ದೆ. ನಾನು ಇದಕ್ಕಾಗಿ ಎರಡು ಮಾರ್ಗಗಳನ್ನು ಆಲೋಚಿಸಿದ್ದೆ. ಒಂದು ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವ ವಿಷಯದಲ್ಲಿ ಜನತೆಯ ಒಟ್ಟಾಭಿಪ್ರಾಯವನ್ನು ಕ್ರೋಢೀಕರಿಸಲು ಅನುಕೂಲವಾಗುವಂತಹ ವ್ಯವಸ್ಥೆಯೊಂದನ್ನು ರೂಪಿಸುವುದು. ಎರಡನೆಯದು-ಜನತೆಯು ತನ್ನ ಪ್ರತಿನಿಧಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಸದಾ ಜಾಗ್ರತವಾಗಿರಲು ಹಾಗೂ ಅವರಿಂದ ಒಳ್ಳೆಯ ಮತ್ತು ಪ್ರಾಮಾಣಿಕವಾದ ಸೇವೆಯನ್ನು ಪಡೆಯಲು ಸಾಧ್ಯವಾಗುವಂತಹ ವ್ಯವಸ್ಥೆಯೊಂದನ್ನು (ಮೇಲೆ ತಿಳಿಸಿದ ಮೊದಲನೇ ವ್ಯವಸ್ಥೆಯೇ ಈ ಕೆಲಸ ಮಾಡಬಹುದು) ಒದಗಿಸುವುದು. ಬಿಹಾರದ ಆಂದೋಲನದ ಮೂಲಕ ನಾನು ಕಂಡ ಕನಸು ಇದು. ಆದರೆ ಪರಿಣಾಮ ? ನಾನೀಗ ಪ್ರಜಾಸತ್ತೆಯ ಸಾವನ್ನು ಕಾಣಬೇಕಾಗಿದೆ.

ನನ್ನ ಲೆಕ್ಕಾಚಾರ ತಪ್ಪಿದ್ದಾದರೂ ಎಲ್ಲಿ? ನಾನು ತಪ್ಪಿದ್ದು, ಪ್ರಜಾಸತ್ತಾತ್ಮಕ ವ್ಯವಸ್ಥೆ ಯಲ್ಲಿನ ಪ್ರಧಾನ ಮಂತ್ರಿಯೊಬ್ಬರು ಶಾಂತಿಪೂರ್ಣವಾಗಿ ನಡೆಯುವ ಪ್ರಜಾಸತ್ತಾತ್ಮಕ ಆಂದೋಲನವೊಂದನ್ನು ಅಡಗಿಸಲು ಎಲ್ಲಾ ಸಾಮಾನ್ಯ ಹಾಗೂ ಮುಖ್ಯ ಕಾನೂನುಗಳನ್ನು ಬಳಸಬಹುದು, ಆದರೆ ಆಕೆ ಪ್ರಜಾಸತ್ತೆಯನ್ನೇ ಕೊಲೆಮಾಡಿ ಅದರ ಸ್ಥಾನದಲ್ಲಿ ಏಕ ಚಕ್ರಾಧಿ ಪತ್ಯವನ್ನು ಸ್ಥಾಪಿಸುವ ಸಾಹಸ ಮಾಡುವುದಿಲ್ಲ ಎಂದು ನಾನು ಭಾವಿಸಿದ್ದರಲ್ಲಿ ....

ಪ್ರಜಾ ಪ್ರಭುತ್ವವನ್ನು ಕತ್ತು ಹಿಚುಕಿ ಕೊಲ್ಲಲು ಮತ್ತು ತನ್ನ ಸರ್ವಾಧಿಕಾರೀ ಆಳ್ವಿಕೆಯನ್ನು ಹೇರಲು ಪ್ರಧಾನಮಂತ್ರಿಯು ಕೈಗೊಂಡ ಕ್ರಮಗಳನ್ನು ಇಲ್ಲಿ ಮತ್ತೆ ನೆನೆಸಿಕೊಳ್ಳುವ ಅಗತ್ಯವಿಲ್ಲ.....

ನಾನೊಬ್ಬನೇ ಈ ದೇಶಕ್ಕೆ ಉಳಿದಿರುವ 'ಆಶಾಕಿರಣ' ಎಂದು ನನಗೆ ಹೇಳುತ್ತಿದ್ದ ಮಹನೀಯರು, ಮಹಿಳೆಯರು ಈಗ ಏನೆಲ್ಲಾ ಹೇಳುತ್ತಿದ್ದಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಇಂತಹ ಭಯಾನಕ ಅಧಃಪತನಕ್ಕೆ ಕಾರಣನಾದ ನನಗೆ ಅವರು ಹಿಡಿ ಶಾಪ ಹಾಕುತ್ತಿರಬಹುದೇ? ಹಾಗಿದ್ದರೂ ಕೂಡ ನಾನು ಆಶ್ಚರ್ಯಪಡಬೇಕಾಗಿಲ್ಲ. ಎಲ್ಲ ಕಡೆಯಿಂದಲೂ ಸುತ್ತುವರಿಯಲ್ಪಟ್ಟ ಶ್ರೀಮತಿ ಗಾಂಧಿ ಈಗ ಕೈಗೊಂಡಿರುವ ಕ್ರಮವನ್ನು ಬಿಟ್ಟು ಮತ್ತೇನೂ ಮಾಡಲು ಸಾಧ್ಯವಿರಲಿಲ್ಲ ಎಂದೂ ಸಹ ಅವರು ಹೇಳುತ್ತಿರಬಹುದು. ಆದರೆ ಈಗಲೂ ಕೂಡ ಕೆಲ ಜನರಾದರೂ ಅದರಲ್ಲೂ ತರುಣರು ನನಗೆ ಮತ್ತು ನಾನು ಪ್ರತಿನಿಧಿಸಿದ ಆದರ್ಶಕ್ಕೆ ನಿಷ್ಠರಾಗಿರುವರು ಎಂಬ ಆಸೆಯನ್ನು ಇಟ್ಟುಕೊಂಡಿದ್ದೇನೆ. ಅವರೇ ಭವಿಷ್ಯದ ಆಶಾಕಿರಣ. ಭಾರತ ಸಮಾಧಿಯಿಂದ ಎದ್ದೇ ಏಳುತ್ತದೆ. ಅದಕ್ಕೆ ಎಷ್ಟು ಕಾಲ ತಗಲುತ್ತದೆ ಎಂಬುದು ಮುಖ್ಯವಲ್ಲ.

ಜುಲೈ ೨೨ :

ಶ್ರೀಮತಿ ಗಾಂಧಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ; ಆಕೆ ಅನುಸರಣೆಯಲ್ಲೂ, ಹೃದಯಾಂತರಾಳದಲ್ಲೂ ಸರ್ವಾಧಿಕಾರಿಯೇ ಎಂದು ನಾನು ಎಂದಿನಿಂದಲೂ ತಿಳಿದಿದ್ದೆ. ನನ್ನ ನಂಬಿಕೆ ದುರಂತಮಯ ರೀತಿಯಲ್ಲಿ ನಿಜವಾಗಿ ಹೋಗಿದೆ......

......ಶ್ರೀಮತಿ ಗಾಂಧಿ ತನ್ನ ಪ್ರಸಕ್ತ ಹಾದಿಯಲ್ಲಿ ಎಷ್ಟು ದೂರ ಸಾಗುತ್ತಾಳೋ ಅಷ್ಟು ಹೆಚ್ಚು ಪ್ರಭಾವವನ್ನು ರಷ್ಯ ಈ ದೇಶದ ಮೇಲೆ ಹೊಂದಲು ಸಾಧ್ಯವಾಗುತ್ತದೆ. ಶ್ರೀಮತಿ ಗಾಂಧಿಯಿಂದ ಮುಖ್ಯವಾಗಿ ಎಳೆದುಕೊಳ್ಳಬೇಕಾದ್ದನ್ನೆಲ್ಲಾ ಎಳೆದು, ಕೊನೆಗೆ ರಷ್ಯನರು, ಭಾರತದ ಕಮ್ಯೂನಿಸ್ಟ್ ಪಾರ್ಟಿ ಮತ್ತು ಕಾಂಗ್ರೆಸ್ಸಿನೊಳಗಿನ ತಮ್ಮ ಟ್ರೋಜನ್ ಕುದುರೆಗಳ ಮೂಲಕ ಆಕೆಯನ್ನು ಇತಿಹಾಸದ ತಿಪ್ಪೆಗೆ ಎಸೆದು, ತಮ್ಮ ಕೈಗೊಂಬೆಯೊಬ್ಬನನ್ನು ಆಕೆಯ ಸ್ಥಾನದಲ್ಲಿ ಕುಳ್ಳಿರಿಸುವ ಕಾಲ ಬಂದರೂ ಬರಬಹುದು... ಇದೆಲ್ಲಾ ಆಗೇ ಆಗುತ್ತದೆ ಎಂದು ನಾನು ಹೇಳಲಾಗುವುದಿಲ್ಲ. ಜನಜಾಗೃತರಾಗಬಹುದು, ಇದನ್ನೆಲ್ಲಾ ಸಹಿಸದೆ ಸೈನ್ಯವೇ ದೇಶವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು. ಇನ್ನೂ ಬೇರೇನಾದರೂ ಆಗಬಹುದು.

ಭಾರತ ಕೂಡ ಮತ್ತೊಂದು ಪಾಕಿಸ್ತಾನವೋ ಅಥವಾ ಬಾಂಗ್ಲಾದೇಶವೋ ಆಗುತ್ತದೆಯೊ? ಅದೆಂತಹ ಅವಮಾನ! ಈ ದೇಶಗಳಿಗೆ ಒಬ್ಬ ಗಾಂಧಿ, ಒಬ್ಬ ನೆಹರೂ, ಒಬ್ಬ ಪಟೇಲ್, ಒಬ್ಬ ರಾಜೇಂದ್ರಪ್ರಸಾದ್, ಒಬ್ಬ ಮೌಲಾನಾ ಆಜಾದ್, ಒಬ್ಬ ರಾಜಗೋಪಾಲಾಚಾರಿ ಇರಲಿಲ್ಲ. ನನ್ನ ದೇಶಕ್ಕಾಗಿ ಇವರೆಲ್ಲ ಸೇರಿ ಮಾಡಿದ್ದು ವ್ಯರ್ಥವಾಗಿ ಹೋಗುತ್ತದೆಯೇ? ಇದನ್ನು ನಾನು ನಂಬಲಾರೆ. ಅದಕ್ಕೇ ನಾನು ನಿನ್ನೆ ಹೇಳಿದ್ದು. ಭಾರತದ ಪ್ರಜಾಪ್ರಭುತ್ವ ತನ್ನ ಸಮಾಧಿಯಿಂದ ಎದ್ದೇಳುತ್ತದೆ ಎಂದು.

ಜುಲೈ ೨೫ :

......ಭಾರತದ ಶವ ಪೆಟ್ಟಿಗೆಗೆ ಹೊಡೆಯುತ್ತಿರುವ ಪ್ರತಿಯೊಂದು ಮೊಳೆಯೂ ನನ್ನ ಹೃದಯದೊಳಕ್ಕೆ ಹೊಡೆಯಲಾಗುತ್ತಿರುವ ಮೊಳೆಯಂತೆ ಅನಿಸುತ್ತಿದೆ. ...ನನ್ನ ಆರೋಗ್ಯ ಸುಧಾರಿಸದೇ ಇರುವುದು ಈ ಹೃದಯ ವೇದನೆಯಿಂದಲೇ ಎಂದು ನನಗನ್ನಿಸುತ್ತದೆ. ಇವತ್ತು ತೆಗೆದ ಇ.ಸಿ.ಜಿ. ಕೂಡಾ ಮತ್ತೆ ಹೃದಯ ಅನಿಯಮಿತವಾಗಿ ಬಡಿಯುತ್ತಿರುವುದನ್ನು ಸೂಚಿಸಿತು. ಮತ್ತೆ ನನ್ನನ್ನು ಡಯಲೈಂಟ್ಯೆನ್‌ಗೆ ಒಳಪಡಿಸಲಾಗಿದೆ.

ಜುಲೈ ೨೬:

ಇಂದು ನಾನು ನನ್ನ ಸೆರೆವಾಸದ ಒಂದು ತಿಂಗಳನ್ನು ಪೂರ್ಣಗೊಳಿಸಿರುವೆ. ಈ ಒಂದು ತಿಂಗಳು ಒಂದು ವರ್ಷದಂತಿತ್ತು ಎಂದು ನಾನು ಹೇಗೆ ಹೇಳದಿರಲಿ? ಬಹುಶಃ ಕಳೆದ ೨೯ ವರ್ಷಗಳಿಂದ ಸೆರೆಮನೆಗೆ ಹೋಗುವ ಅಭ್ಯಾಸ ತಪ್ಪಿದ್ದೇ ಇದಕ್ಕೆ ಕಾರಣವಿರ ಬಹುದು..... ಸ್ವತಂತ್ರ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ನಾನು ಕೇಂದ್ರ ಮೀಸಲು ಪಡೆಯ ಅಶ್ರುವಾಯುವಿಗೆ ಮತ್ತು ಲಾಠಿಗೆ ಬಲಿಯಾಗಬೇಕಾಗಿ ಬಂದ, ಅಲ್ಲದೆ ಸೆರೆ ವಾಸವನ್ನೂ ಅನುಭವಿಸಬೇಕಾಗಿ ಬಂದ ಆಳ್ವಿಕೆ ಇದು. ಬ್ರಿಟಿಷರ ಕಾಲದಲ್ಲಿ ನಾನೆಂದೂ ಸ್ವತಃ ಅಶ್ರುವಾಯು ಅಥವಾ ಲಾಠಿಪ್ರಹಾರವನ್ನು ಎದುರಿಸಿರಲಿಲ್ಲ. ೧೯೪೬ರ ಏಪ್ರಿಲ್‌ನಲ್ಲಿ ಆಗ್ರಾ ಕೇಂದ್ರ ಸೆರೆಮನೆಯಿಂದ ನನ್ನ ಬಿಡಗಡೆಯಾದ ನಂತರ ಮತ್ತೆ ನನ್ನನ್ನೆಂದೂ ಬಂಧಿಸಿರಲಿಲ್ಲ ಮತ್ತು ಸೆರೆಯಲ್ಲಿಟ್ಟಿರಲಿಲ್ಲ.

.......ಸಾಮಾಜಿಕ ಪಿಡುಗುಗಳ ಹಾಗೂ ಆರ್ಥಿಕ ಅನ್ಯಾಯದ ವಿರುದ್ಧ ಹೋರಾಟ ನಡೆಸುವಾಗ ಸರ್ಕಾರದ ವಿರುದ್ಧದ ಹೋರಾಟದಿಂದ ದೂರವಿರಬೇಕೆಂದು ವಿನೋಬಾಜಿ ನನಗೆ ಸಲಹೆ ನೀಡಿದ್ದು ಈಗ ನನಗೆ ನೆನಪಿಗೆ ಬರುತ್ತಿದೆ. ಅವರು ಇದಕ್ಕೆ ಕೊಟ್ಟ ಕಾರಣ ವೆಂದರೆ ಅಮೆರಿಕಾ ಮತ್ತೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸುತ್ತಿದೆ, ಚೀನಾ ಕೂಡ ಅವರ ನೆರವಿಗೆ ಬಂದಿದೆ. ಪಾಕೀಸ್ತಾನದೊಡನೆ ಯುದ್ಧ ಸಂಭವಿಸುವ ಸಾಧ್ಯತೆಯಿದೆ ಎನ್ನುವುದು. ಸರ್ಕಾರದ ವಿರುದ್ಧದ ಹೋರಾಟ ದೇಶವನ್ನು ದುರ್ಬಲಗೊಳಿಸುತ್ತದೆ. ಆದ ಕಾರಣ ಸರ್ಕಾರ ವಿರೋಧೀ ಹೋರಾಟ ಸೂಕ್ತವಲ್ಲ. ಈ ಅಭಿಪ್ರಾಯದ ವಿರುದ್ಧ ನನ್ನದೇ ವಾದವಿದೆ. ಇದನ್ನು ಸರ್ವಸೇವಾ ಸಂಘವು ಆಯ್ದ ಕೆಲವು ವ್ಯಕ್ತಿಗಳಿಗೆ ಹಂಚುವ ನನ್ನ ಮತ್ತು ವಿನೋಬಾಜಿ ನಡುವಿನ ಸಂಭಾಷಣೆಗಳ ದಾಖಲೆಯಲ್ಲಿ ಕಾಣಬಹುದಾಗಿದೆ. ಇಷ್ಟಾದರೂ ಪರಿಸ್ಥಿತಿಯನ್ನು ವಿನೋಬಾಜಿಗೆ ಅರ್ಥಮಾಡಿಸಲು ಯಾರೂ ಇಚ್ಛಿಸಲಿಲ್ಲ. ನನ್ನ ವಾದವನ್ನು ಸಹ ಯಾರೂ ಪ್ರಶ್ನಿಸಲಿಲ್ಲ.

ಆಗಸ್ಟ್ ೬ :

ನಿರೀಕ್ಷಿಸಿದಂತೆಯೇ ನಡೆದಿದೆ. ಜನತಾ ಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ, ಸರ್ವೋನ್ನತ ನ್ಯಾಯಾಲಯ ನೀಡಬಹುದಾದ ಪ್ರತಿಕೂಲ ತೀರ್ಪಿನ ವಿರುದ್ಧ ಶ್ರೀಮತಿ ಇಂದಿರಾ ಗಾಂಧಿ ಈಗ ರಕ್ಷಣೆ ಪಡೆದುಕೊಂಡಿದ್ದಾರೆ. ಸಂವಿಧಾನವನ್ನು ಇಡಿಯಾಗಿ ತಿದ್ದುಪಡಿ

ಮಾಡಲಾಗುವುದೆಂದು ನಿರೀಕ್ಷಿಸಲಾಗಿದೆ. ಇದೆಲ್ಲ ನಡೆಯುತ್ತಿರುವುದು ದೇಶದ ಸ್ವಯಂ ಘೋಷಿತ ರಕ್ಷಕಿಯ ಸರ್ವಾಧಿಕಾರವನ್ನು ಪರಿಪೂರ್ಣಗೊಳಿಸಲೆಂದು. ಇದನ್ನು ರಾಜ್ಯಾಂಗಬದ್ಧವಾಗಿಯೇ ಮಾಡಲಾಗುತ್ತಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಕೂಡ ತನ್ನ ಅವನತಿಗೆ ಕಾರಣವಾದ ಸರ್ವಾಧಿಕಾರವನ್ನು ಸ್ಥಾಪಿಸಿದ್ದೂ ಪ್ರಜಾತಂತ್ರ ವಿಧಾನಗಳ ಮೂಲಕವೇ. ಈ ಕತ್ತಲೆಯಿಂದ ಹೊರಬರಲು ಭಾರತ ಕೂಡ ಮತ್ತೆ ನರಕದ ಮೂಲಕ ಹಾದು ಹೋಗಬೇಕೆ?... ದೇವರು ಆಕೆಗೆ ಒಳ್ಳೆಯದನ್ನು ಮಾಡಲಿ.

ಆಗಸ್ಟ್ ೭ :

........(ಜೀವನದ ಸಂಜೆ ಹೊತ್ತಿನಲ್ಲಿ) ಪ್ರಭಾ-ಜೆ.ಪಿ.ಯವರ ಪತ್ನಿ-ನನ್ನನ್ನು ಅಗಲಿದ ನಂತರ ನನಗೆ ಬದುಕಿನಲ್ಲಿ ಆಸಕ್ತಿಯೇ ಹೊರಟುಹೋಯಿತು. ಸಾರ್ವಜನಿಕ ಕಾರ್ಯದ ಕಡೆ ನಾನು ವಿಶೇಷ ಒಲವು ಬೆಳೆಸಿಕೊಳ್ಳದಿದ್ದರೆ ಹಿಮಾಲಯಕ್ಕೆ ಹೊರಟು ಹೋಗುತ್ತಿದ್ದೇನೋ. ನಾನು ಒಳಗೇ ಅತ್ತೆನಾದರೂ ಹೊರಗೆ ಎಂದಿನ ಕಾರ್ಯಕಲಾಪ ಗಳನ್ನು ಮುಂದುವರೆಸಿಕೊಂಡು ನಡೆದೆ. ನನ್ನ ಆರೋಗ್ಯ ಸಹ ಹದಗೆಡುತ್ತಿತ್ತು. ಈ ಅನಾಥ ಮನಸ್ಥಿತಿಯ ಸಮಯದಲ್ಲೆ ನನ್ನ ಅಂತಃಚೇತನವನ್ನು ಉದ್ದೀಪಿಸಿದ ಏನೋ ಅನಿರೀಕ್ಷಿತವಾಗಿ ನಡೆದು ನನ್ನ ಆರೋಗ್ಯ ಕೂಡ ಉತ್ತಮಗೊಳ್ಳಲಾರಂಭಿಸಿತ್ತು; ನನ್ನಲ್ಲಿ ಹೊಸಶಕ್ತಿ , ಉತ್ಸಾಹ ತುಂಬಿಕೊಂಡ ಅನುಭವವಾಗಿತ್ತು.

ಆಗಸ್ಟ್ ೧೪ :

.... ಮುಕ್ತ ವಾತಾವರಣ ಇದ್ದಲ್ಲಿ ವೈದ್ಯರು, ದಾದಿಯರು ಕೂಡ ಸ್ನೇಹಿತ ರಾಗಬಹುದು. ಆದರೆ ಇಲ್ಲಿ ಹಾಗಿಲ್ಲ...... ಆಸ್ಪತ್ರೆಯ ನಿರ್ದೇಶಕರೊಬ್ಬರನ್ನುಳಿದು ಇನ್ನಾರೇ ವೈದ್ಯರು ಅಥವಾ ದಾದಿಯರು ನನ್ನ ಕೊಠಡಿಗೆ ಪ್ರವೇಶಿಸಿದರೆ ಹಿಂದೆಯೇ ಸೆರೆಮನೆಯ ಪಹರೆ, ಭಾರತ ಸರ್ಕಾರದ ಗುಪ್ತಚಾರ ಶಾಖೆ, ಕೇಂದ್ರೀಯ ತನಿಖಾ ಮಂಡಳಿ ಇವರೆಲ್ಲಾ ಈ ಮಹಡಿಯ ಹಲವಾರು ಕೊಠಡಿಗಳಲ್ಲಿ ಬಿಡಾರ ಹೂಡಿದ್ದಾರೆ....... ನಾನು ನಿಜವಾಗಿಯೂ ಒಂಟಿಯಾಗಿದ್ದೇನೆ. ಪ್ರತಿದಿನ ಪತ್ರಿಕೆಗಳಲ್ಲಿ ನನ್ನನ್ನು ಸಂಪೂರ್ಣವಾಗಿ ಸಿಟ್ಟಿಗೇಳಿಸುವ ಏನಾದರೊಂದು ಸುದ್ದಿ ಇದ್ದೇ ಇರುತ್ತದೆ. ಸಾಮಾನ್ಯವಾಗಿ ಇವು ಶ್ರೀಮತಿ ಇಂದಿರಾಗಾಂಧಿಯ ಅರೆ ನಿಜಗಳು ಮತ್ತು ಅರೆ ಸುಳ್ಳುಗಳು. ಒಬ್ಬ ಬಂಧಿತನನ್ನು ನನ್ನೊಡನೆ ಇಲ್ಲಿಯ ಯಾವುದಾದರೊಂದು ಕೊಠಡಿಯಲ್ಲಿ ಇಟ್ಟಿದ್ದರೆ ಅವನೊಂದಿಗೆ ಮಾತನಾಡ ಬಹುದಿತ್ತು. ನಮ್ಮ ಭಾವನೆಗಳನ್ನು ಹಂಚಿಕೊಂಡು ಹೃದಯವನ್ನು ಹಗುರ ಮಾಡಿಕೊಳ್ಳ ಬಹುದಿತ್ತು. ಇದು ಎಷ್ಟೋ ಮಾತ್ರೆಗಳು, ನೋವು ಶಮನಕಾರಿಗಳು, ಮತ್ತು ನಿದ್ರೆ ಗುಳಿಗೆಗಳಿಗಿಂತ ಅಮೂಲ್ಯವಾಗಿರುತ್ತಿತ್ತು....... ಇದು ನಿಜವಾದ ಅರ್ಥದಲ್ಲಿ ಒಂಟಿ ಸೆರೆವಾಸ...... ನಾನು ಸಾಯುತ್ತಿಲ್ಲ ನಿಜ. ಆದರೆ ದೇಶವನ್ನೇ ಸರ್ವಾಧಿಕಾರದ ನರಕಕ್ಕೆ ತುಳಿಯುತ್ತಿರುವಾಗ ಹೀಗೆ ಬಾಯಿಮುಚ್ಚಿ ಕುಳಿತುಕೊಂಡಿರುವುದೆಂದರೆ ಅದು ನನಗೆ ಸಾವಿಗಿಂತ ಕಡಿಮೆಯೇನಲ್ಲ.

ಆಗಸ್ಟ್ ೧೫ :

ಇಂದಿಗೆ ನಮ್ಮ ಸ್ವಾತಂತ್ರ್ಯದ ೨೮ ವರ್ಷಗಳು ಮುಗಿದಿವೆ.....ಸ್ವಾತಂತ್ರ್ಯ ಹೋರಾಟ ನಡೆದದ್ದು ಕೇವಲ ರಾಷ್ಟ್ರೀಯ ಸ್ವಾತಂತ್ರ್ಯಗಳಿಸಲು ಅಲ್ಲ, ಪ್ರಜಾಪ್ರಭುತ್ವದ ಸ್ಥಾಪನೆಯೂ ಸಹ ಹೋರಾಟದ ಪ್ರಮುಖ ಗುರಿಗಳಲ್ಲಿ ಒಂದಾಗಿತ್ತು. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಸಂವಿಧಾನವೊಂದನ್ನು ಸಿದ್ಧಪಡಿಸಿ ೧೯೫೦, ಜನವರಿ ೨೬ರಂದು ಭಾರತವನ್ನು ಒಂದು ಸಾರ್ವಭೌಮ ಪ್ರಜಾಸತ್ತಾತ್ಮಕ ಜಾತ್ಯಾತೀತ ಗಣರಾಜ್ಯ ಎಂದು ಘೋಷಿಸಿದ್ದು. ಇಂದು ಆ ಪ್ರಜಾಪ್ರಭುತ್ವದ ಕಿಂಚಿತ್ತಾದರೂ ಉಳಿದಿದೆಯೇ?...... ನಾವೀಗ ಶ್ರೀಮತಿ ಇಂದಿರಾಗಾಂಧಿಯ ಸರ್ವಾಧಿಕಾರದಡಿ ಇದ್ದೇವೆ. ಆದರೆ, ಇಡೀ ಭಾರತವನ್ನು ಏಕಮಾತ್ರ ಕೇಂದ್ರವೊಂದರಿಂದ ಆಳುವ ಪ್ರಯತ್ನ ಎಂದೂ ಪೂರ್ಣ ಯಶಸ್ವಿಯಾಗಿಲ್ಲ ಎಂಬುದಕ್ಕೆ ಚರಿತ್ರೆಯೇ ಸಾಕ್ಷಿಯಾಗಿದೆ.......

ಶ್ರೀಮತಿ ಗಾಂಧಿಯ ಪಕ್ಷ ಸ್ವಾರ್ಥಿಗಳು ಹಾಗೂ ಹೇಡಿಗಳಿಂದ ತುಂಬಿ ಹೋಗಿದೆ. ಇವರಲ್ಲಿ ಹೆಚ್ಚಿನವರಿಗೆ ಭ್ರಷ್ಟಾಚಾರ ಮೈಗೂಡಿ ಹೋಗಿದೆ. ಅವರವರಲ್ಲೇ ಸ್ವಾರ್ಥಪರ ವಾದ ಅಂತ್ಯ ಕಾಣದ ಒಳಜಗಳಗಳಿವೆ. ಜಾತೀಯತೆ ಕೂಡ ಇದೆ. ಕಾಂಗ್ರೆಸ್ಸಿನಲ್ಲಿನ ಎಲ್ಲಾ ಪ್ರಾಮಾಣಿಕರನ್ನು ಹಾಗೂ ಧೈರ್ಯಶಾಲಿಗಳನ್ನು ಇಂದಿರಾಜಿ ಹೊರಗೆ ತಳ್ಳಿಬಿಟ್ಟಿದ್ದಾಳೆ. ಇಂತಹ ಪಕ್ಷವೊಂದರ ಸರ್ವಾಧಿಕಾರ ಸ್ಥಿರವಾಗಿರಲು ಸಾಧ್ಯವೇ?

ಆಗಸ್ಟ್ ೧೬ :

ಬಂಗ್ಲಾದೇಶದ ದುರಂತ ಘಟನೆಗಳ ಬಗ್ಗೆ (ಮುಜಿಬುರ್ ರೆಹಮಾನ್ ಹತ್ಯೆ) ನಾನು ನಿನ್ನೆ ನಿಷ್ಪಕ್ಷಪಾತ ರೀತಿಯಲ್ಲಿ ಬರೆಯಲಿಲ್ಲ ಎಂದು ನನಗನ್ನಿಸುತ್ತಿದೆ. ಭುಟ್ಟೋಯಿಂದ ಬಿಡುಗಡೆಯಾಗಿ ತನ್ನ ದೇಶದ ನೇತೃತ್ವ ವಹಿಸಲು ಬಾಂಗ್ಲಾಗೆ ಹಿಂದಿರುಗಿದ ಮುಜೀಬ್-ವಂಗಬಂಧು, ವಂಗ ಪಿತ-ಕೂಡ ಆಗಿದ್ದು ನನ್ನ ನೆನಪಿಗೆ ಬರುತ್ತಿದೆ. ಆತ ನಿಜವಾಗಿಯೂ ಜನತೆಯ ಪ್ರೀತಿಗೆ ಪಾತ್ರನಾಗಿದ್ದ..... ಆ ಸಂದರ್ಭದಲ್ಲಿ ನಾನು ನೀರು ತುಂಬಿದ ಕಣ್ಣುಗಳಲ್ಲಿ ಪತ್ರ ಬರೆದದ್ದೂ ನೆನಪಿಗೆ ಬರುತ್ತದೆ...... ಆ ದಿನಗಳಲ್ಲಿ ಮುಜೀಬ್ ಬಗ್ಗೆ ನನ್ನ ಭಾವನೆಗಳು ಹೀಗಿದ್ದವು. ಆದರೆ ಆತ ತನ್ನ ಪಿತೂರಿಯ ಮೂಲಕ ಏಕ ಪಕ್ಷ ಸರ್ವಾಧಿಕಾರವನ್ನು ಸ್ಥಾಪಿಸಿದ ನಂತರ ಆತನ ಬಗ್ಗೆ ನನಗಿದ್ದ ಗೌರವವೆಲ್ಲಾ ಮಾಯವಾಯಿತು.....ಮೂರ್ಖನಂತೆ ವರ್ತಿಸಿ ವಿಫಲನಾದ. ಆತನನ್ನು ಕೊಲ್ಲಲಾಗಿದೆ ಎಂದು ನಿನ್ನೆ ಓದಿದಾಗ ನಾನು ದುಃಖಿತ ನಾದೆ, ಆದರೆ ದಿಗ್ಭ್ರಮೆಗೊಳ್ಳಲಿಲ್ಲ. ಅಥವಾ ಹೃದಯಾಂತರಾಳದಲ್ಲಿ ಆತನಿಗಾಗಿ ಮರುಕವನ್ನೂ ಪಡಲಿಲ್ಲ.

ಆಗಸ್ಟ್ ೧೮ :

......ವಿನೋಬಾಜಿ ತಮ್ಮ ಮೌನವನ್ನು ಸ್ವಲ್ಪಕಾಲ ಮುರಿದ ಸಂದರ್ಭದಲ್ಲಿ ನನಗೆ ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ನನ್ನ ಹೋರಾಟದ ಕಲ್ಪನೆ ಸರಿ ಎಂದು

ಅವರು ಒಪ್ಪಿ ಇದಕ್ಕೆ ನೆರವಾಗಲು ನಾನು ಹಿಂದೆಗೆಯುವುದಿಲ್ಲ ಎಂದು ಹೇಳಿದರಾದರೂ ನಾನು ಸರ್ಕಾರದ ವಿರುದ್ಧ ಹೋರಾಟವನ್ನು ಕೈಬಿಡಬೇಕೆಂದು ಸೂಚಿಸಿದರು. ..... ಸರ್ಕಾರ ವಿರೋಧಿ ೀ ಹೋರಾಟ, ಭಾರತೀಯ ಪ್ರಜಾಪ್ರಭುತ್ವದ ಕತ್ತು ಹಿಚುಕಿಹೋಗುವುದರಲ್ಲಿ ಕೊನೆಗೊಳ್ಳಬಹುದು ಎಂದು ವಿನೋಬಾಜಿ ಶಂಕಿಸಿರಲಿಲ್ಲ.

......ವಿನೋಬಾಜಿಯ ಆಧ್ಯಾತ್ಮಿಕ ಹಾಗೂ ನೀತಿಶೀಲ ಮನವಿಗಳು ಮತ್ತು ಸಾತ್ವಿಕ ಪ್ರಭಾವವು ಕೆಲವು ವ್ಯಕ್ತಿಗಳಲ್ಲಿ ಕೆಲವು ಗಮನಾರ್ಹ ನೈತಿಕ ಬದಲಾವಣೆಗಳನ್ನು ಉಂಟುಮಾಡಿದ್ದೂ ನಿಜ. ಆದರೆ ಅವರೆಂದೂ ಸಾಮಾಜಿಕ ಅಥವಾ ಮಾನಸಿಕ ಶಕ್ತಿಯಾಗಿ ಹೊರಹೊಮ್ಮಲಿಲ್ಲ.

.....ನಾಯಕತ್ವ ಹಾಗೂ ಸಂಘಟನೆ ಇರದಿದ್ದಲ್ಲಿ ಕ್ರಾಂತಿಕಾರೀ ಪರಿಸ್ಥಿತಿ ಅರಾಜಕತೆ ಅಥವಾ ಸರ್ವಾಧಿಕಾರದ ಹೇರಿಕೆಯಲ್ಲಿ ಕೊನೆಗೊಳ್ಳಬಹುದು.

ಆಗಸ್ಟ್ ೨೧ :

.......ಕ್ರಾಂತಿಯ ಸೆಳೆತ ನನ್ನನ್ನು ಮಾರ್ಕ್ಸ್‌ವಾದದ ಕಡೆ ಕೊಂಡೊಯ್ದಿತು. ನಂತರ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಮೂಲಕ ಪ್ರಜಾಸತ್ತಾತ್ಮಕ ಸಮಾಜವಾದದ ಕಡೆಗೆ ತಿರುಗಿ ತದನಂತರ ವಿನೋಬಾಜಿಯವರ ಪ್ರೇಮ ಮಾರ್ಗದ ಅಹಿಂಸಾತ್ಮಕ ಕ್ರಾಂತಿಗೆ ನನ್ನನ್ನು ಮುಟ್ಟಿಸಿತು. ನಾನು ವಿನೊಬಾಜಿಯವರನ್ನು ಸೇರುವ ಮುನ್ನ ಅವರೊಂದಿಗೆ ಚರ್ಚೆ ನಡೆಸಿ ಅವರ ಕಳಕಳಿ ಕೇವಲ ಭೂಮಿಯನ್ನು ವಿತರಿಸುವುದಕ್ಕೆ ಮಾತ್ರ ಸೀಮಿತ ವಾಗಿರದೆ ಅದು ಮಾನವ ಮತ್ತು ಸಮಾಜದ ಸಂಪೂರ್ಣ ಪರಿವರ್ತನೆಯ ಎಲ್ಲೆಗಳ ವರೆಗೆ-ಅದನ್ನು ನಾನು ಉಭಯ ಕ್ರಾಂತಿ, ಮಾನವೀಯ ಕ್ರಾಂತಿಯ ಮೂಲಕ ಸಾಮಾಜಿಕ ಕ್ರಾಂತಿ ಎಂದು ವರ್ಣಿಸಿದೆ-ವ್ಯಾಪಿಸಿರಬೇಕು ಎಂಬುದನ್ನು ಖಚಿತಪಡಿಸಿಕೊಂಡೆ.

ಆಗಸ್ಟ್ ೨೨ :

.....'ನಾವು ಕಷ್ಟಪಟ್ಟು ಶ್ರಮಿಸುತ್ತಿದ್ದೇವೆ. ಈಗ ಶಿಸ್ತು ಹಾಗೂ ನೈತಿಕತೆಯ ಹೊಸ ಚೈತನ್ಯ ಮೂಡಿದೆ' ಎಂದು ಇಂದಿರಾಗಾಂಧಿ ತಿಳಿಸಿದ್ದಾರೆ. ......ಭಯದಿಂದ ಹುಟ್ಟಿದ ಶಿಸ್ತಿನ ಬಗ್ಗೆ ಸಂತೋಷಪಡುವುದು ದೊಡ್ಡದೇನಲ್ಲ ಎನ್ನುವುದನ್ನು ಶ್ರೀಮತಿ ಗಾಂಧಿ ತಿಳಿಯಬೇಕು. ಭಯದಿಂದ ದೇಶ ಕಟ್ಟಲು ಸಾಧ್ಯವಿಲ್ಲ. ಅದು ಭಯದ ವಾತಾವರಣದಲ್ಲಿ ಬೆಳೆದ ಮಗು ಮಾನಸಿಕ ರೋಗಿಯಾಗುವಂತೆ ದೇಶ ರೋಗಗ್ರಸ್ತವಾಗುತ್ತದೆ. ಇನ್ನು ನೈತಿಕತೆಯನ್ನು ಶ್ರೀಮತಿ ಗಾಂಧಿ ಎಲ್ಲಿ ಕಾಣುತ್ತಿರುವಳೋ ಗೊತ್ತಿಲ್ಲ. ಭಯದ ನೆರಳಲ್ಲಿ 'ಶಿಸ್ತನ್ನು' ಕಾಣಬಹುದೇ ಹೊರತು ನೈತಿಕತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಮುಕ್ತ ವಾತಾವರಣದಲ್ಲಿ ಮಾತ್ರ ಆರೋಗ್ಯಶಾಲಿ ದೇಶವೊಂದನ್ನು ಕಟ್ಟಲು ಸಾಧ್ಯ. ನಮ್ಮ ಸರ್ಕಾರೀ ಅಧಿಪತಿಗಳು ಇತ್ತೀಚಿನ ವರ್ಷಗಳಲ್ಲಿ ತೃಣಮಾತ್ರ ಶಿಸ್ತನ್ನು ಪ್ರದರ್ಶಿಸಿಲ್ಲ. ಅದೆಷ್ಟು ಭ್ರಷ್ಟಾಚಾರ! ಅಧಿಕಾರಕ್ಕಾಗಿ ಅದೆಷ್ಟು ಕಚ್ಚಾಟ! ಇಂತಹವು ಒಂದಲ್ಲ ಎರಡಲ್ಲ. ಗೃಹಾಡಳಿತವೂ ಸೇರಿದಂತೆ ಎಲ್ಲ ವಲಯಗಳಲ್ಲೂ ಇದೇ ಕಥೆ.

ಆಗಸ್ಟ್ ೨೩ :

........ಸರ್ಕಾರೀ ವಲಯದ ಭಾರಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಆದರೆ ಇದೆಲ್ಲಾ ಬಂಡವಾಳ ಶಾಹಿ ಹಾಗೂ ಅದಕ್ಷತೆ, ಪೋಲು ಮತ್ತು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ..... ನಮ್ಮ ಸಮಾಜವಾದಿಗಳು ಸಮಾಜವಾದವನ್ನು ಬಹುವಾಗಿ ರಾಷ್ಟ್ರೀಕರಣದೊಂದಿಗೆ ಸಮೀಕರಿಸುತ್ತಿರುವುದು ಖೇದದ ಸಂಗತಿಯಾಗಿದೆ.

ಹಲವಾರು ಸಮಿತಿಗಳು ಹಾಗೂ ಆಯೋಗಗಳ ನೇಮಕವಾದರೂ ನಮ್ಮ ಶಿಕ್ಷಣ ವ್ಯವಸ್ಥೆ ಮೂಲಭೂತವಾಗಿ ಬ್ರಿಟಿಷರ ಕಾಲದಲ್ಲಿ ಹೇಗಿತ್ತೋ ಹಾಗೇ ಉಳಿದಿದೆ..... ಸಂಪ್ರದಾಯಗಳು, ಶಾಸ್ತ್ರಗಳು, ಹರಕೆಗಳು, ಮೂಢನಂಬಿಕೆಗಳು ಎಲ್ಲವೂ ಜನರಲ್ಲಿ ಹಾಗೇ ಉಳಿದಿವೆ..... ಸಾತಂತ್ರ್ಯ ಬಂದಾಗಿನಿಂದೀಚೆಗೆ ರಾಜಕೀಯ, ಸಾರ್ವಜನಿಕ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ನೈತಿಕ ಮಟ್ಟ ಒಂದೇ ಸಮನೆ ಇಳಿಯುತ್ತಿದೆ.

ನಾವು ಸಾಮಾಜಿಕ ಮತ್ತು ಅಭಿವೃದ್ಧಿಯ ಕಡೆ ನೋಡಿದರೂ ಚಿತ್ರ ಭಯಾನಕ ವಾಗಿದೆ. ಜನಸಂಖ್ಯಾಗತಿ ಭರದಿಂದ ಮುನ್ನುಗ್ಗುತ್ತಿದೆ. ಬಡತನ ಕೂಡ ಹೆಚ್ಚುತ್ತಿದೆ. ಶೇಕಡಾ ೪೦ ಭಾಗಕ್ಕೂ ಹೆಚ್ಚು ಜನರು ಬಡತನದ ರೇಖೆಯ ಕೆಳಗಿದ್ದಾರೆ. ಆಹಾರ ಹಾಗೂ ಬಟ್ಟೆಯನ್ನುಳಿದು, ಕುಡಿಯುವ ನೀರು, ಮನುಷ್ಯ ವಾಸಿಸಬಹುದಾದ (ದನಕರುಗಳು ವಾಸಿಸ ಬಹುದಾದುದ್ದಲ್ಲ) ಮನೆ, ವೈದ್ಯಕೀಯ ಗಮನ- ಈ ಅನಿವಾರ್ಯ ಅಗತ್ಯಗಳೂ ಇಲ್ಲವಾಗಿವೆ. ಇರುವ ಕೆಲವೇ ಶಾಲೆಗಳಲ್ಲಿ ಪಾಠ ಪ್ರವಚನ ಕೆಟ್ಟದಾಗಿದೆ. ಬಿಹಾರ ಖನಿಜ ಸಂಪತ್ತಿನಲ್ಲಿ ದೇಶದಲ್ಲೇ ಅತ್ಯಂತ ಶ್ರೀಮಂತ ರಾಜ್ಯವೆಂದು ಪತ್ರಿಕೆಗಳು ಹೇಳುತ್ತಿವೆ. ಬಿಹಾರದಲ್ಲಿ ಒಳ್ಳೆಯ ಭೂಮಿಯಿದೆ. ಹಾಗೂ ವರ್ಷವಿಡೀ ತುಂಬಿ ಹರಿಯುವ ನದಿಗಳಿವೆ. ಆದರೂ ದೇಶದಲ್ಲಿ ಬಿಹಾರ ಅತ್ಯಂತ ಬಡ ರಾಜ್ಯವಾಗಿಯೇ ಏಕೆ ಉಳಿದಿದೆ? ಹೀಗೆ ಪಟ್ಟಿ ಬೆಳೆಸಬಹುದು.

ಪ್ರಸಕ್ತ ಪ್ರಶ್ನೆ ಎಂದರೆ ಸಾಮಾನ್ಯ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಈ ಚಿತ್ರವನ್ನು ಮೂಲಭೂತವಾಗಿ ಬದಲಾಯಿಸಲು ಸಾಧ್ಯವೇ? ವಿರೋಧಪಕ್ಷಗಳು ಗೆದ್ದರೂ ಕೂಡ ಚಿತ್ರ ಬದಲಾಗುತ್ತದೆಯೇ? ಇಲ್ಲ ಎಂಬ ಭಯವಿದೆ......

ಆಗಸ್ಟ್ ೨೭ :

.... ಪಟ್ನಾದಲ್ಲಿನ ಪ್ರವಾಹ ಪರಿಸ್ಥಿತಿ[೧] ಅಷ್ಟೊಂದು ಭೀಕರವಾಗಿದೆ ಎಂದು ನನಗೆ ತಿಳಿದೇ ಇರಲಿಲ್ಲ. ಇಂದು ಮುಂಜಾನೆಯ ಹಿಂದೂಸ್ಥಾನ್ ಟೈಮ್ಸ್ ಎದೆ ನಡುಗಿಸುವ ವಿವರಗಳನ್ನು ಕೊಟ್ಟಿದೆ. ಅಲ್ಲಿನ ನನ್ನ ಜನ ಎಂದೆಂದಿಗೂ ಕಾಣದ ಅಂತಹ ಅನಾಹುತದಲ್ಲಿ ಸಿಕ್ಕಿ ನರಳುತ್ತಿರುವಾಗ ನಾನಿಲ್ಲಿ ಸುಮ್ಮನೇ ಕೈಕಟ್ಟಿ ಕುಳಿತಿರುವ ಬಗ್ಗೆ ನನಗೆ ಬಹಳ ಅಸಹ್ಯವೆನಿಸಿದೆ. ನಾನು ನಿಸ್ಸಹಾಯಕನಾಗಿದ್ದೇನೆ.

---

೧ ಹಿಂದೆಂದೂ ಕಂಡರಿಯದ ಈ ಮಹಾನ್ ಪ್ರವಾಹ ಇಡೀ ಪಟ್ನಾ ನಗರವನ್ನು ಆವರಿಸಿತ್ತು. ಅಸಂಖ್ಯಾತ ಜನ ಸತ್ತರು, ಇಲ್ಲವೇ ಕಾಣದಾದರು, ಇಲ್ಲವೇ ನಿರ್ಗತಿಕರಾದರು.

..... ರಾಜ್ಯದ ಎಲ್ಲ ಜನಪ್ರಿಯ ನಾಯಕರೂ ಸೆರೆಮನೆಯಲ್ಲಿದ್ದಾರೆ. ಹೆಚ್ಚಿನ ಕಾಂಗ್ರೆಸ್ ನಾಯಕರು, ಭ್ರಷ್ಟಾಚಾರಿಗಳು ಮತ್ತು ಉದಾಸೀನ ಪ್ರವೃತ್ತಿಯವರು. ಬಿಹಾರದ ಆಡಳಿತ ವ್ಯವಸ್ಥೆ ಸಹ ಅಷ್ಟೇನೂ ದಕ್ಷವಾಗಿಲ್ಲ. ನಾನು ಕೇಳಿಕೊಂಡರೆ ವಾಗ್ದಾನದ ಮೇಲೆ ನನ್ನನ್ನು ಬಿಡುಗಡೆ ಮಾಡುವರೆ? ೧೯೩೪ರಲ್ಲಿ ಸಂಭವಿಸಿದ ಘೋರ ಭೂಕಂಪದ ಸಮಯದಲ್ಲಿ ಬ್ರಿಟಿಷರು ರಾಜೇನ್ ಬಾಬುವನ್ನು, ಆತನ ಕೋರಿಕೆಯ ಮೇಲಲ್ಲ ಸ್ವತಃ ತಾವಾಗಿಯೇ ಹಜಾರಿ ಬಾಗ್ ಸೆರೆಮನೆಯಿಂದ ಬಿಡುಗಡೆ ಮಾಡಿದ್ದು ನೆನಪಿಗೆ ಬರುತ್ತದೆ. ನಮ್ಮ ಪ್ರಧಾನಿ ಏನು ಮಾಡುವರೋ?

ಈ ಕೆಳಗಿನ ಸಂದೇಶವನ್ನು ಚಂಡೀಘಡ ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿಗೆ ಕಳುಹಿಸಲು ನಿರ್ಧರಿಸಿದೆ.

ಪ್ರಧಾನ ಮಂತ್ರಿ
ಹೊಸದೆಹಲಿ

ಪಟ್ನಾ ಹಾಗೂ ಬಿಹಾರದ ಪ್ರವಾಹವನ್ನು ಕುರಿತು ವರದಿಗಳನ್ನೋದಿ ತೀವ್ರ ವಿಚಲಿತನಾಗಿದ್ದೇನೆ. ನನಗೆ ತಿಳಿದಮಟ್ಟಿಗೆ ಇತಿಹಾಸದಲ್ಲಿಯೇ ಹಿಂದೆಂದೂ ಪಟ್ನಾ ಇಷ್ಟು ತೊಂದರೆಗೆ ಈಡಾಗಿದ್ದಿಲ್ಲ. ರಾಜ್ಯದೊಳಗೆ, ಹೊರಗೆ ಜನರ ನೆರವನ್ನು ಸಂಘಟಿಸಲು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಕಾರದೊಂದಿಗೆ ಜನತಾ ಪರಿಹಾರವನ್ನು ವ್ಯವಸ್ಥೆಗೊಳಿಸಲು ಅನುಕೂಲವಾಗುವಂತೆ ವಾಗ್ದಾನದ ಮೇಲೆ ಒಂದು ತಿಂಗಳಮಟ್ಟಿಗೆ ಬಿಡುಗಡೆಗಾಗಿ ಪ್ರಾರ್ಥನೆ. ಪ್ರವಾಹ ಇಳಿದರೂ ಕೂಡ ಮಾಡಬೇಕಾದ ಕೆಲಸ ಬಹಳವಿರುತ್ತದೆ. ೧೯೩೪ರ ಆ ಘೋರ ಬಿಹಾರ ಭೂಕಂಪ ಸಂಭವಿಸಿದಾಗ ಬ್ರಿಟಿಷರು ರಾಜೇನ್ ಬಾಬುವನ್ನು ಇಂತಹುದೇ ಕೆಲಸಕ್ಕಾಗಿ ಹಜಾರಿಬಾಗ್ ಸೆರೆಮನೆಯಿಂದ ಬಿಟ್ಟಿದ್ದರು. ತುರ್ತಾಗಿ ಗಮನ ನೀಡಿ ಕ್ರಮ ಕೈಗೊಳ್ಳಲು ಕೋರಿಕೆ.

ಜಯಪ್ರಕಾಶ್

(ಇಂದಿರಾಗಾಂಧಿ ಜೆ.ಪಿ.ಯವರನ್ನು ಬಿಡಲಿಲ್ಲ. ಬ್ರಿಟಿಷ್ ಸರ್ಕಾರದ ಔದಾರ್ಯವೂ ಈ ಸರ್ಕಾರಕ್ಕೆ ಇಲ್ಲವಾಯ್ತು) ಜೆ.ಪಿ.ಯವರು ೧೯೭೫, ಸೆಪ್ಟೆಂಬರ್ ೧೭ರಂದು ಪ್ರಧಾನಿ ಇಂದಿರಾಗಾಂಧಿಯವರಿಗೆ ಬರೆದ ಪತ್ರದ ಮುಖ್ಯ ಅಂಶಗಳನ್ನು ಕೆಳಗೆ ಕೊಡಲಾಗಿದೆ.

ಪ್ರಿಯ ಪ್ರಧಾನ ಮಂತ್ರಿಯವರೇ,

ಆಗಸ್ಟ್ ೨೭ರಂದು ನಾನು, ವಾಗ್ದಾನದ ಮೇಲೆ ಒಂದು ತಿಂಗಳ ಕಾಲ ಸೆರೆಮನೆಯಿಂದ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಿದ್ದೆ...... ಮೂರು ವಾರ ಕಳೆದು, ಬಿಹಾರದ ಹಲವು ಭಾಗಗಳಲ್ಲಿ ಅಲೆಗಳ ಮೇಲೆ ಅಲೆಗಳು ರಾಚಿ ಪ್ರವಾಹ ಉಕ್ಕೇರಿದ್ದರೂ ನಿಮ್ಮಿಂದ ಉತ್ತರ ಬರದೆ ನಾನು ವ್ಯಾಕುಲಗೊಂಡಿದ್ದೇನೆ. ಉತ್ತರಪ್ರದೇಶದ ನನ್ನ ಭಾಗ ಕೂಡ ಮತ್ತೆ ಮತ್ತೆ ಪ್ರವಾಹಕ್ಕೊಳಗಾಗುತ್ತಿದ್ದು ನನ್ನ ಹಳ್ಳಿ ಹಾಗೂ ನನ್ನ ಮನೆಯ ಬಗ್ಗೆ ಯಾವುದೇ ಸುದ್ದಿ ಇಲ್ಲವಾಗಿದೆ. ನಿನ್ನೆಯ ಟ್ರಿಬ್ಯೂನ್‌ನಲ್ಲಿ 'ಬಿಹಾರದ ಪ್ರವಾಹ ಭೀಕರ ಘಟ್ಟಕ್ಕೆ' ಎಂಬ

ಮೂರು ಅಂಕಣದ ಶೀರ್ಷಿಕೆ ಇತ್ತು. ಮತ್ತೆ ಇಂದು ಬೆಳಿಗ್ಗೆ (೧೭-೯-೭೫) ಪತ್ರಿಕೆ 'ಬಿಹಾರದ ಪ್ರವಾಹ ಪರಿಸ್ಥಿತಿ ಹದಗೆಟ್ಟಿದೆ' ಎಂದು ವರದಿ ಮಾಡಿದೆ......

ಇಂತಹ ಸಂದರ್ಭದಲ್ಲಿ, ಜನರ ಸೇವೆ ಮಾಡಲು ಅವಕಾಶ ಕೊಡಿರೆಂದು ಮತ್ತೆ ಕೇಳದಿರಲಾರೆ. ದಯವಿಟ್ಟು ಈ ದಿಸೆಯಲ್ಲಿ ರಾಜಕೀಯವನ್ನು ತರಬೇಡಿ. ಇಂತಹ ಅನಾಹುತ ಸಂದರ್ಭದಲ್ಲಿ ಬ್ರಿಟಿಷರಲ್ಲಿ ಕೂಡ, ತಮ್ಮ ಸಾಮ್ರಾಜ್ಯದ ವಿರುದ್ಧ ಹೋರಾಡುತ್ತಿರುವವರನ್ನು ಬಿಡುಗಡೆ ಮಾಡುವಷ್ಟು ಮಾನವೀಯತೆ ಇತ್ತು. ಇಂತಹ ಭಯಂಕರ ಮಾನವ ಸಂಕಟದ ಸಂದರ್ಭದಲ್ಲಿ ರಾಜಕಾರಣಕ್ಕಾದರೂ ಎಂತಹ ಸ್ಥಾನವಿರಲು ಸಾಧ್ಯ? ನನ್ನ ಮಟ್ಟಿಗೆ ಈಗ ನಾನು ಚಂಡೀಘಡದ ಜಿಲ್ಲಾಧಿಕಾರಿಯವರಿಗೆ ಬರೆದ ಪತ್ರದ (೩೧-೮-೭೫) ಕೆಲವು ಭಾಗಗಳನ್ನು ಉಲ್ಲೇಖಿಸುವುದನ್ನು ಬಿಟ್ಟು ಮತ್ತೇನೂ ಮಾಡಲಾರೆ. '' ಈ ಸಂದರ್ಭದಲ್ಲಿ ನನಗೆ ಕೊಡಲಾಗುವ ಸ್ವಾತಂತ್ರ್ಯವನ್ನು ಯಾವುದೇ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದನ್ನು ಅನೈತಿಕ ಮತ್ತು ಅವಿವೇಕದ ಕೃತ್ಯ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ರಾಜಕೀಯ ಮಾತನಾಡುವುದು ನಿಜವಾಗಿಯೂ ಜನರ ನೋವು ಸಂಕಷ್ಟಗಳ ಬಗ್ಗೆ ವ್ಯಂಗ್ಯವಾಡಿದಂತಾಗುತ್ತದೆ. ಸಾಸುವೆ ಕಾಳಿನಷ್ಟಾದರೂ ಮಾನವ ಅಂತಃಕರಣವುಳ್ಳ ಯಾವ ವ್ಯಕ್ತಿಯೂ ಹೀಗೆ ಮಾಡುವ ಯೋಚನೆ ಮಾಡಲಾರ.''

ಈಗ, ಸ್ವಯಂ ಸೇವಾ ಪರಿಹಾರ ಕ್ರಮಗಳ ಅಗತ್ಯವಿಲ್ಲ ಎಂಬುದು ಸರ್ಕಾರದ ನಿಲುವಾಗಿರಬಹುದು. ಏಕೆಂದರೆ, ಸ್ವತಃ ನೀವು ಮತ್ತು ನಿಮ್ಮ ಸಹೋದ್ಯೋಗಿಗಳೇ ನೆರವಿಗಾಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಮನವಿ ಮಾಡಿದ್ದೀರಿ. ಪರಿಹಾರ ಕಾರ್ಯಾಚರಣೆ ಯನ್ನು ನಿರ್ವಹಿಸುವ ನನ್ನ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಯೋಚಿಸಲು ನಿಮಗೇ ಸಾಕಷ್ಟು ಪರಿಜ್ಞಾನವಿದೆ. ...

....ಬಿಹಾರದ ಪ್ರವಾಹ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಅಲ್ಲದೆ ದೇಶದ ಇತರ ಹೆಚ್ಚಿನ ಭಾಗಗಳಲ್ಲೂ ಪ್ರವಾಹ ಉಂಟಾಗಿದೆ. ಇಂತಹ ಕಾಲದಲ್ಲಿ ಯಾರೇ ಆಗಲಿ ಹೋರಾಟ ಅಥವಾ ಆಂದೋಲನವನ್ನು ಆರಂಭಿಸುವ ಪ್ರಶ್ನೆಯೇ ಇಲ್ಲ. ರಾಜಕೀಯ ತುರ್ತು ಪರಿಸ್ಥಿತಿ ಕೊನೆಗೊಂಡಿದ್ದು ಅದರ ಸ್ಥಾನವನ್ನು ರಾಷ್ಟ್ರೀಯ ಪ್ರಯತ್ನವೊಂದರ ಅಗತ್ಯವನ್ನು ಆಗ್ರಹಿಸುವ ಮಾನವ ಸಂಕಷ್ಟದ ತುರ್ತುಪರಿಸ್ಥಿತಿ ಆಕ್ರಮಿಸಿಕೊಂಡಿದೆ. ಮತ್ತಾರೂ ಅಲ್ಲ , ಸ್ವತಃ ಕೇಂದ್ರ ಗೃಹಮಂತ್ರಿಗಳೇ ಹಿಂದೊಂದು ದಿನ ಮದ್ರಾಸಿನಲ್ಲಿ ದೇಶಾದ್ಯಂತ ಸಹಜ ಪರಿಸ್ಥಿತಿ ನೆಲೆಗೊಂಡಿದೆ ಎಂದು ಹೇಳಿದ್ದಾರೆ. (ಅವರು ಹೇಳಿದ್ದು ಬಂಧಿಸಲ್ಪಟ್ಟವರಲ್ಲಿ ಶೇಕಡಾ ೩೦ ರಷ್ಟು ಜನರನ್ನು ಬಿಡುಗಡೆ ಮಾಡಲಾಗಿದೆ. PTI ಟ್ರಿಬ್ಯೂನ್, ೧೪-೯-೭೫) ಹೀಗಿರುವಾಗ ಯಾವ ಆಧಾರದ ಮೇಲೆ ಈಗಲೂ ತುರ್ತುಪರಿಸ್ಥಿತಿಯನ್ನು ಮುಂದುವರೆಸಿದ್ದೀರಿ?

ತುರ್ತುಪರಿಸ್ಥಿತಿಯನ್ನು ಏಕೆ ಕೊನೆಗಾಣಿಸಬೇಕು ಎಂಬುದಕ್ಕೆ ಮತ್ತೊಂದು ಬಹು ಮುಖ್ಯ ಕಾರಣವಿದೆ. ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ ಎಂಬುದೇ ಈ ಕಾರಣವಾಗಿದೆ. ಸಂವಿಧಾನದ ಪ್ರಕಾರ ಲೋಕಸಭಾ ಚುನಾವಣೆಗಳು ಮುಂದಿನ ವರ್ಷದ ಆದಿ ಭಾಗದಲ್ಲಿ ನಡೆಯಬೇಕು.....

ಸೆಪ್ಟಂಬರ್ ೭ :

.......ನಿಕಟ ಭವಿಷ್ಯದಲ್ಲಿ ಭಾರತ, ಈಗ ಆಕೆ ನಡೆಸುತ್ತಿರುವ ರೀತಿಯೆ ಪ್ರಜಾಪ್ರಭುತ್ವಕ್ಕಿಂತ ಭಿನ್ನವಾದದ್ದನ್ನು ಪಡೆಯುವ ಸಾಧ್ಯತೆ ನನಗೆ ಕಾಣುತ್ತಿಲ್ಲ. ಮುಂದಿನ ಸಂಸದೀಯ ಚುನಾವಣೆಗಳಲ್ಲಿ ವಿರೋಧ ಪಕ್ಷಗಳು ಜಯಗಳಿಸಿದಲ್ಲಿ-ಹಾಗೆಂದು ನಾವು ಆಶಿಸೋಣ-ಪ್ರಸಕ್ತ ಸಂವಿಧಾನ ಮತ್ತು ಚುನಾವಣಾ ಕಾನೂನುಗಳು ಮುಂತಾದ ವನ್ನು ಉತ್ತಮಪಡಿಸಬಹುದು. ಆದರೆ ಪ್ರಜಾಪ್ರಭುತ್ವ ರೀತಿ ಮಾತ್ರ ಹೆಚ್ಚು ಬದಲಾಗಲಾರದು. .....ನಾನು ವಿರೋಧಪಕ್ಷಗಳ ಸರ್ಕಾರದಡಿಯಲ್ಲಿ ಮಾಡಬೇಕಾದ ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ತಿದ್ದುಪಡಿಗಳನ್ನು ಸೂಚಿಸಿದ್ದೇನೆ. ಆದರೆ ಸಂವಿಧಾನೇತರ ಹಾಗೂ ಶಾಸನೇತರ ವಿಧಾನಗಳಿಂದಲೂ ಇದನ್ನು ಮಾಡಬಹುದು.....

ಸೆಪ್ಟಂಬರ್-೯ :

........ನಾನು ಒಂದಲ್ಲ ಒಂದು ಸಂದರ್ಭದಲ್ಲಿ ಚರ್ಚಿಸಿರುವ ವಿಷಯಗಳನ್ನು ಇಲ್ಲಿ (ಸಂಕ್ಷಿಪ್ತವಾಗಿ) ವಿಂಗಡಣೆ ಮಾಡುವೆ.

೧. ನೈತಿಕ, ಆಧ್ಯಾತ್ಮಿಕ ಚೌಕಟ್ಟು :

(ಅ) ಮನುಷ್ಯ ವಸ್ತುವೂ ಹೌದು, ಚೈತನ್ಯವೂ ಹೌದು. ಆತನ ಬದುಕು ಆತನ ಲೌಕಿಕ ಹಾಗೂ ಅಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಬೇಕು.

(ಆ) ಲೌಕಿಕ ಅಗತ್ಯಗಳನ್ನು ಈಡೇರಿಸಲೇಬೇಕು-ಅನ್ನ, ಬಟ್ಟೆ, ಮನೆ ಇತ್ಯಾದಿ. ... ಅಗತ್ಯಕ್ಕಿಂತ ಹೆಚ್ಚಿರಬಾರದು. ಆಡಂಬರ ಇರಬಾರದು.... ವಸತಿ ಸಾಧಾರಣ ವಾಗಿರಬೇಕು. ಶ್ರೀಮಂತ ಜೀವನವನ್ನು ಪ್ರೋತ್ಸಾಹಿಸಬಾರದು.... ಇದೊಂದು ನೈತಿಕ ಅಂಶ..... ಆಸೆ, ಅತಿ ಸೌಲಭ್ಯ, ಸಂಪತ್ತಿಗಾಗಿ ದುರ್ಮಾರ್ಗ - ಈ ಎಲ್ಲವೂ ಆಧ್ಯಾತ್ಮ ವಿರೋಧಿಯಾದವುಗಳು.

೨. ಪ್ರಕೃತಿ ಪರಿಸರ ಚೌಕಟ್ಟು :-

ಹಳ್ಳಿ, ಪಟ್ಟಣ ಹಾಗೂ ನಗರಗಳ ಪ್ರಶ್ನೆ. ಹುಚ್ಚಾಪಟ್ಟೆ ಬೆಳೆಯುತ್ತಿರುವ ನಗರಗಳು, ಹಾಳು ಬೀಳುತ್ತಿರುವ ಹಳ್ಳಿಗಳು. ಹಳ್ಳಿಗಳ ಮರು ವಿಂಗಡಣೆ.... ಸಣ್ಣ ಹಳ್ಳಿಗಳನ್ನು ಒಂದುಗೂಡಿಸುವುದು, ದೊಡ್ಡ ಹಳ್ಳಿಗಳನ್ನು ಪುನರ್‌ಘಟಿಸುವುದು. ಆದಿವಾಸಿ ಪ್ರದೇಶಗಳು, ಮಲೆನಾಡು ಹಾಗೂ ಅರಣ್ಯಗಳು, ಬಯಲು ಸೀಮೆಗಳು ..... ಬಯಲು ಸೀಮೆಯಲ್ಲಿ ಹಳ್ಳಿಗಳ ಸೂಕ್ತ ವಿಸ್ತಾರವನ್ನು ನಿರ್ಧರಿಸುವುದು. ನಗರಗಳ ಸೂಕ್ತ ವಿಸ್ತಾರದ ಬಗ್ಗೆ ಸಹ. ಕೇಂದ್ರ ಪಟ್ಟಣಗಳು-ಅಂದರೆ ಸುತ್ತಮುತ್ತಲಿನ ಹಳ್ಳಿಗಳಿಗೆ ರಸ್ತೆ, ವಿದ್ಯುತ್‌ಮಾರ್ಗ ಮುಂತಾದವುಗಳನ್ನು ಹರಡಿರುವ ಒಂದು ಸಣ್ಣ ಪಟ್ಟಣ. ಸಾಮುದಾಯಿಕ ಅಭಿವೃದ್ಧಿ ಕೇಂದ್ರಗಳು ಇಂತಹ ಪಟ್ಟಣ ವಲಯ ನಿರ್ಮಾಣಕ್ಕೆ ಆದರ್ಶ ಸ್ಥಳಗಳಾಗಬಲ್ಲವು. ಬ್ಯಾಂಕು, ಉಗ್ರಾಣ, ಆಸ್ಪತ್ರೆ ಮುಂತಾದ ಸೌಲಭ್ಯಗಳು.

೩. ಆರ್ಥಿಕ ಚೌಕಟ್ಟು :

ಆರ್ಥಿಕ ಅಭಿವೃದ್ಧಿ ಮನುಷ್ಯನನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕು ..... ಪ್ರಾಯಶಃ ಭಾರತದಲ್ಲಿ ನಾವು ಸಾಕಷ್ಟು, ಭಾರಿ, ಆಧುನಿಕ ಹಾಗೂ ಬಂಡವಾಳ ಮೂಲ ಕೈಗಾರಿಕೆಗಳ ಬೆಳವಣಿಗೆಗೆ ಉದ್ದೇಶಪೂರ್ವಕವಾಗಿಯೇ ಕಡಿವಾಣ ಹಾಕುವುದು ಒಳ್ಳೆಯದೆಂದು ಕಾಣುತ್ತದೆ. ದುಬಾರಿಯ ಪ್ರದರ್ಶನದ, ಮೂಲೋಪಯೋಗವಿಲ್ಲದ ಮತ್ತು ಪ್ರತಿಷ್ಠೆ ಹೆಚ್ಚಿಸುವುದೆಂದು ಹೇಳಲಾಗುವ ಭೂ ಉಪಗ್ರಹ ಅಭಿವೃದ್ಧಿ ಯೋಜನೆಗಳಂತಹ ಸಾಹಸಗಳನ್ನು ಕೈ ಬಿಡಬೇಕು ...... ವಿಜ್ಞಾನದ ಬಳಕೆಯು ಭಾರತದ ಪ್ರಸಕ್ತ ಪರಿಸ್ಥಿತಿಯನ್ನು ಗಮನಿಸಿದಂತೆ, ಸಾಮಾನ್ಯ ಜನರ ಮೂಲ ಅಗತ್ಯಗಳೊಂದಿಗೆ ನೇರ ಸಂಬಂಧ ಹೊಂದಿರ ಬೇಕೆಂದಷ್ಟೇ ನಾನು ಹೇಳುವುದು ..... ಗ್ರಾಮಾಂತರ ಶಾಲೆಗಳಲ್ಲಿ , ಸ್ಥಳೀಯ ಪದ್ಧತಿ ಹಾಗೂ ಅಗತ್ಯಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಹಾಗೂ ಕಾರ್ಯಶೀಲ ತಂತ್ರಜ್ಞಾನ-ಅಧ್ಯಯನದ ವಿಭಾಗವಿರಬೇಕು.......

ಕೃಷಿಯೂ ಸೇರಿದಂತೆ ಎಲ್ಲ ಉತ್ಪಾದನಾ ಘಟಕಗಳು, ಅದರಲ್ಲೂ ನಿರ್ದಿಷ್ಟವಾಗಿ ಭಾರೀ ಸಂಸ್ಥಾಪನೆಗಳು, ಜೈವಿಕ ಪರಿಸರ, ಪ್ರದೇಶ ಸೌಂದರ್ಯ ಹಾಗೂ ಚೊಕ್ಕಟ ಪರಿಗಣನೆಗಳತ್ತ ಸೂಕ್ಷ್ಮ ಗಮನ ಕೊಡಬೇಕು...... ನವ ವಸಾಹತುಶಾಹಿಯ ಶೋಷಣೆ ಬಗ್ಗೆ ಭಾರತದಲ್ಲಿ ಆಳವಾದ ಅಧ್ಯಯನ ಮಾಡಬೇಕು.

೪. ರಾಜಕೀಯ ಚೌಕಟ್ಟು :

ಮೂಲಭೂತ ಸ್ವಾತಂತ್ರ್ಯಗಳು, ವಿಕೇಂದ್ರೀಕರಣ, ಸಾಮಾಜಿಕ ಜವಾಬ್ದಾರಿ.

೫. ಸಾಂಸ್ಕೃತಿಕ ಚೌಕಟ್ಟು :

೬. ಶೈಕ್ಷಣಿಕ ಚೌಕಟ್ಟು :

ಒಂದು ಗ್ರಾಮಾಂತರ ಶಾಲೆ; ಕೃಷಿ ವಿಧಾನಗಳು, ಗ್ರಾಮಾಂತರ ಕೈಗಾರಿಕೆ, ಅರ್ಥಶಾಸ್ತ್ರ, ಸಮಾಜ ವಿಜ್ಞಾನ- ಆ ಪ್ರದೇಶಕ್ಕೆ ಸೂಕ್ತವಾದ ವಿಷಯಗಳೊಂದಿಗೆ-ವಿಜ್ಞಾನ, ಭಾಷೆ ಹಾಗೂ ಸಾಹಿತ್ಯ. ಆರ್ಥಿಕ ಸಹಕಾರ, ಸಹಕಾರ ಸಂಘಗಳು. ಗ್ರಾಮ ಪಂಚಾಯಿತಿ ನಿರ್ಧಾರ ಕೈಗೊಳ್ಳುವ ಹಾಗೂ ಜಾರಿಗೆ ತರುವ ವಿಧಾನ. ಗ್ರಾಮ ಪಂಚಾಯಿತಿ ಲೆಕ್ಕ ಹಾಗೂ ಪುಸ್ತಕ ಸಂರಕ್ಷಣೆ - ಕೃಷಿ, ವ್ಯಾಪಾರ ಹಾಗೂ ಗ್ರಾಮಾಂತರ ಕೈಗಾರಿಕೆಗೆ ಸಂಬಂಧಿಸಿದಂತೆ. ಆರೋಗ್ಯ, ಶೌಚವಿಜ್ಞಾನ-ಕಕ್ಕಸು ಹಾಗೂ ನೀರು ಪೂರೈಕೆ ವ್ಯವಸ್ಥೆ. ಜೀವಾಣು ವಿಜ್ಞಾನ, ಜೀವಶಾಸ್ತ್ರ-ಹಳ್ಳಿಪ್ರದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು. ತೋಟಗಾರಿಕೆ, ಪ್ರಾಣಿಶಾಸ್ತ್ರ ಆಹಾರ ಹಾಗೂ ಪೌಷ್ಟಿಕಾಂಶ. ಇಂಧನ ಅನಿಲ ಕಾರ್ಯಾಗಾರ ಕಾಂಪೋಸ್ಟ್ ಗೊಬ್ಬರ ಹಾಗೂ ಯೂರಿಯಾ ಗೊಬ್ಬರ ಉತ್ಪಾದನಾ ವಿಧಾನಗಳು.

೭. ಸಾಮಾಜಿಕ ಚೌಕಟ್ಟು :

೮. ಬದಲಾವಣೆ ಹಾಗೂ ಪುನರ್ ನಿರ್ಮಾಣದ ಚೈತನ್ಯ ಮೂಲಗಳು.

ಸೆಪ್ಟೆಂಬರ್ ೧೨ : ಕಾಂಗ್ರೆಸ್ಸಿಗರು ವಿನೋಬಾ ಅವರನ್ನು ಮಹಾಶೂರನನ್ನಾಗಿ ಪರಿವರ್ತಿಸಲು ಹೆಣಗುತ್ತಿರುವಂತೆ ಕಾಣುತ್ತದೆ. ಅವರಲ್ಲೊಬ್ಬರಾದ ಶ್ರೀ ಖಾಡಿಲ್ಕರ್‌ರು, 'ವಿನೋಬಾಜಿಯ ಒಂದು ಅನನ್ಯ ಗುಣವೆಂದರೆ ಸರ್ವೋದಯ ಚಳವಳಿ ಬಿಕ್ಕಟ್ಟನ್ನು ಎದುರಿಸಿದ ಸಮಯದಲ್ಲಿ ಅವರು ಬಂಡೆಯಂತೆ ಅಚಲವಾಗಿ ನಿಂತಿದ್ದು' ಎಂದು ಉದ್ಘೋಷಿಸಿದಾಗ ಅವರ ಪ್ರಜ್ಞೆಯೇ ಸತ್ತಿತ್ತು ಎಂದು ಕಾಣುತ್ತದೆ. ಇದೆಲ್ಲಾ ಎಷ್ಟೊಂದು ಅಸಹನೀಯವಾದಂತಹ ಕಪಟ ನಾಟಕವಾಗಿದೆ. ಶ್ರೀಮತಿ ಗಾಂಧಿ ಇದ್ದಕ್ಕಿದ್ದಂತೆ ವಿನೋಬಾರ ಬಳಿಗೆ ವಿಮಾನದಲ್ಲಿ ಹಾರಿಬಂದದ್ದು , ಆ ರಾತ್ರಿ ಅವರ ಆಶ್ರಮದಲ್ಲೇ ತಂಗಿದ್ದು; ಈಗ ಹೊಸದೆಹಲಿಯಲ್ಲಿ ನಡೆದ ಅವರ ಹುಟ್ಟುಹಬ್ಬದ ಆಚರಣೆಯಲ್ಲಿ ಈ ಅಮೋಘ ಸ್ತುತಿ ಭಾಷಣಗಳು ನಡೆಯುತ್ತಿರುವುದು.....

ಸೆಪ್ಟಂಬರ್ ೨೯ : ಟ್ರಿಬ್ಯೂನ್ ಮೂರು ಅಂಕಣಗಳ ಶೀರ್ಷಿಕೆಯೊಂದರಲ್ಲಿ ಶ್ರೀ ಜಗಜೀವನರಾಂ ಅವರ ಭಾಷಣವನ್ನು ವರದಿ ಮಾಡಿದೆ. ''೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಪಧಾನಮಂತ್ರಿಯವರ ನಾಯಕತ್ವ ಅನಿವಾರ್ಯ' ... ಜಗಜೀವನ ಬಾಬೂರಂತಹ ವ್ಯಕ್ತಿಯೂ ಸಹ ಇಷ್ಟು ಜೋರಾಗಿ ಇಂತಹ ಭಟ್ಟಂಗಿತನವನ್ನು ವ್ಯಕ್ತಪಡಿಸುತ್ತಿರುವುದು ನಂಬಲಾಗದ ಸಂಗತಿ. ಇದೆಂತಹ ಅವನತಿಯೋ ಕಾಣೆ .....

ಅಕ್ಟೋಬರ್ ೧ : ....ಶ್ರೀಮತಿ ಗಾಂಧಿ ಈ ನಡುವೆ 'ಶಿಸ್ತಿನ' ಬಗ್ಗೆ ದೊಡ್ಡ ಭಾಷಣ ಬಿಗಿಯುತ್ತಿದ್ದಾಳೆ, ... ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತಿದ್ದಾಳೆ. ಆದರೆ ದೇಶದಲ್ಲಿ ಅಶಿಸ್ತು ನಿರ್ಮಾಣವಾದದ್ದು ಆಡಳಿತ ಪಕ್ಷದ ಮತ್ತು ಅದರೊಳಗಿನ ಗುಪ್ತಕೂಟದ ದುರಹಂಕಾರ, ಅದಕ್ಷತೆ, ಭ್ರಷ್ಟಾಚಾರ ಹಾಗೂ ಒಳಜಗಳಗಳಿಂದಲೇ ಎಂಬುದನ್ನು ಆಕೆ ಮನವರಿಕೆ ಮಾಡಿಕೊಳ್ಳಬೇಕಾಗಿದೆ. ಆಕೆ ಮಾಡಿಕೊಳ್ಳಲಾರಳು. ರಾಷ್ಟ್ರಪತಿ ಸ್ಥಾನಕ್ಕಾಗಿ ಶ್ರೀ ಸಂಜೀವರೆಡ್ಡಿಯವರ ಪರವಾಗಿ ನಾಮಪತ್ರ ಸಲ್ಲಿಸಿಯೂ ಶ್ರೀ ಗಿರಿಯವರ ಪರ ಕೆಲಸ ಮಾಡುವ ಮೂಲಕ ಪಕ್ಷದ ಶಿಸ್ತನ್ನು ಗಾಳಿಗೆ ತೂರಿ (ಕಾಂಗ್ರೆಸ್ಸಿಗಳಾಗಿ) ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಪ್ರಚಾರ ಕೈಗೊಂಡ ಶ್ರೀಮತಿ ಗಾಂಧಿ ಸ್ವತಃ ತಾನೇ ಅಶಿಸ್ತಿನ ಅಮೋಘ ಉದಾಹರಣೆಯಾಗಿದ್ದಾಳೆ. ಇಂತಹ ಗಂಭೀರ ರಾಜಕೀಯ ಅಶಿಸ್ತು ಮತ್ತು ವಿಶ್ವಾಸ ದ್ರೋಹವನ್ನು ರಾಜಕೀಯ ಅಂದರೆ ರಾಜಕೀಯ ಎಂಬ ಸಿದ್ಧಾಂತದ ಆಧಾರದ ಮೇಲೆ ಕ್ಷಮಿಸಲಾಗಿದೆ....

ಅಕ್ಟೋಬರ್ ೧೧ : ಇಂದು ನಾನು ನನ್ನ ಜೀವನದ ೭೩ ವರ್ಷಗಳನ್ನು ಮುಗಿಸಿದ್ದೇನೆ. ಏನು ಹೇಳಲಿ ! ಬಹಳ ಕಾಲದಿಂದ ಅಂಟಿರುವ ದೀರ್ಘಕಾಲಿಕ ರೋಗಗಳ ನಡುವೆಯೂ ನಾನಿನ್ನೂ ಬದುಕಿರುವುದು ದೇವರ ದಯೆಯಿಂದಲೇ. ನನ್ನ ಉಳಿದಿರುವ ಬದುಕನ್ನು ದೇಶ ಹಾಗೂ ಜನತೆಯ ಸೇವೆಗಾಗಿ ಮುಡಿಪಾಗಿಡುವಂತಹ ಬುದ್ಧಿ ಹಾಗೂ ಛಲವನ್ನು ದೇವರು ನನಗೆ ದಯಪಾಲಿಸಲಿ.....

ಅಕ್ಟೋಬರ್ ೨೦ : ನ್ಯಾಷನಲ್ ಕಾನ್‌ಫರೆನ್ಸ್ ಪಕ್ಷಕ್ಕೆ ತಾವು ಹಿಂದಿರುಗುವುದಾಗಿ ಘೋಷಿಸಿದ ಸಂದರ್ಭದಲ್ಲಿ ಷೇಕ್ ಅಬ್ದುಲ್ಲಾ ಮಾಡಿದ ಬಿಚ್ಚು ಮನಸ್ಸಿನ ಮತ್ತು ದಿಟ್ಟ ಭಾಷಣವನ್ನು ಓದಿ (ಟ್ರಿಬ್ಯೂನ್ ಅಕ್ಟೋಬರ್ ೨೦) ಮನಸ್ಸಿಗೆ ಸಂತೋಷವೆನಿಸಿತು. ಪ್ರಧಾನಮಂತ್ರಿಯ ಮುಖಕ್ಕೇ ಮಾತನಾಡಬಲ್ಲ ಒಬ್ಬ ವ್ಯಕ್ತಿಯಾದರೂ ಈ ದೇಶದಲ್ಲಿ ಇದ್ದಾರೆ. ಇತರರು ಇದ್ದರೂ ಇರಬಹುದು...... ಸದ್ಯಕ್ಕಂತೂ ಇಡೀ ದೇಶದಲ್ಲಿ ಸ್ಮಶಾನ ಮೌನ ಆವರಿಸಿದೆ.

ಅಕ್ಟೋಬರ್ ೨೯ : ಈ ಎಲ್ಲ ದಿನಗಳಲ್ಲೂ ನರಕ ಯಾತನೆ ಅನುಭವಿಸಿದ್ದೇನೆ -ಕಿಬ್ಬೊಟ್ಟೆಯ ಬಳಿ ನಿರಂತರ ನೋವು, ಘೋರ ಅನುಭವ. ಎಲ್ಲ ರೀತಿಯ ಪರೀಕ್ಷೆಗಳನ್ನು ಮಾಡಲಾಯಿತಾದರೂ ಏನೂ ಪ್ರಯೋಜನವಾಗಲಿಲ್ಲ. ಆದರೂ ನೋವು ಇದ್ದೇ ಇದೆ. ಮಲಬದ್ಧತೆ-Trifala ಈಗ ಕೆಲಸ ಮಾಡುವುದೇ ಇಲ್ಲ. ನಿನ್ನೆ ರಾತ್ರಿ ವಾಂತಿಯಾಯಿತು. ಇಂದು ಬೆಳಿಗ್ಗೆ ಸಹ. ಹಸಿವೇ ಇಲ್ಲ. ಆಹಾರವನ್ನು ನೆನೆಸಿಕೊಂಡರೇ ಅಸಹ್ಯವಾಗುತ್ತದೆ.

ನವೆಂಬರ್ ೨ : ಇವತ್ತಿನವರೆಗೂ ಹೊಟ್ಟೆನೋವು ಇದ್ದೇ ಇದೆ. ಹಸಿವಿಲ್ಲ ಆಹಾರ ಕಂಡರೇ ಬೇಸರ. ಮಲವಿಸರ್ಜನೆ ಕೂಡ ಇಲ್ಲ. ಅಕ್ಟೋಬರ್ ೩೧ರ ರಾತ್ರಿ ಆಸ್ಪತ್ರೆಗೆ ತರಲಾಯ್ತು. (ನಾನು ಮೊದಲಿದ್ದ ಕೊಠಡಿಗೇ) ತೀವ್ರ ನೋವು. ನಿರಂತರ ನೋವಿನಿಂದ ಸೊರಗಿ ಹೋಗಿರುವೆ.......

ಇದಿಷ್ಟು ಅವರ ಸೆರೆಮನೆಯ ದಿನಚರಿಯಿಂದ ತೆಗೆದುಕೊಂಡಿರುವ ಮುಖ್ಯ ಅಂಶಗಳು.

ಜಯಪ್ರಕಾಶರನ್ನು ಒಂದು ತಿಂಗಳ ಪೆರೋಲ್ ಮೇಲೆ ಬಿಡುಗಡೆ ಮಾಡಿದರು. ದೇಹಸ್ಥಿತಿ ಅತ್ಯಂತ ಹದಗೆಟ್ಟಿತ್ತು. ಅವರು ಸೆರೆಮನೆಯಲ್ಲಿದ್ದಷ್ಟು ದಿನ ಅವರ ರೋಗಗಳು ಉಲ್ಬಣಗೊಂಡುವು. ಮೂತ್ರಪಿಂಡಗಳು ನಿಷ್ಕ್ರಿಯವಾದವು. ಬೊಂಬಾಯಿನ ಜಸ್ಲೋಕ್ ಆಸ್ಪತ್ರೆಗೆ ಅವರನ್ನು ಸೇರಿಸಲಾಯ್ತು. ಸರ್ಕಾರದ ನಿರ್ದಯ ಕ್ರೌರ್ಯ ಅವರನ್ನು ಅಪಾಯದ ಅಂಚಿಗೆ ತಳ್ಳಿತ್ತು. ದೇಶಕ್ಕೆ ದೇಶವೇ ಈ ಅಸಹನೀಯ ದಬ್ಬಾಳಿಕೆಯನ್ನು ಉಗ್ರವಾಗಿ ಖಂಡಿಸಿತು. ಅನ್ಯ ಮಾರ್ಗವಿಲ್ಲದೆ ಸರ್ಕಾರ ೧೯೭೫, ಡಿಸೆಂಬರ್ ೪ ರಂದು ಅವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿತು.

ಮುಂದುವರೆದ ತುರ್ತುಪರಿಸ್ಥಿತಿಯ ವಿರುದ್ಧ ಸತ್ಯಾಗ್ರಹ :

ತುರ್ತುಪರಿಸ್ಥಿತಿಯಿಂದ ಬೇಸತ್ತ ಜನತೆ ಒಳಗೊಳಗೇ ಕುದಿಯುತ್ತಿತ್ತು. ಈ ವೇಳೆಗಾಗಲೇ ಪ್ರಚಂಡ ಸತ್ಯಾಗ್ರಹವೊಂದು ಆರಂಭವಾಗಲಿದೆ ಎಂದು ಸರ್ಕಾರಕ್ಕೆ ತಿಳಿದಿತ್ತು. ಅಖಿಲ ಭಾರತ ಸಂಘರ್ಷ ಸಮಿತಿಯ ನೂತನ ಕಾರ್ಯದರ್ಶಿ ರವೀಂದ್ರವರ್ಮ ಸತ್ಯಾಗ್ರಹದ ಉದ್ದೇಶ ಮತ್ತು ಆರಂಭದ ದಿನವನ್ನು ಪ್ರಧಾನಿಗೆ ಬರೆದು ತಿಳಿಸಿದ್ದರು. ಆಂದೋಲನದ ಮುಖ್ಯ ಬೇಡಿಕೆಗಳೆಂದರೆ :-

೧) ತುರ್ತು ಪರಿಸ್ಥಿತಿ ರದ್ದಾಗಬೇಕು. ೨) ರಾಜಕೀಯ ಬಂದಿಗಳ ಬಿಡುಗಡೆಯಾಗಬೇಕು. ೩) ಮೂಲಭೂತ ಹಕ್ಕುಗಳನ್ನು ಮರಳಿ ನೀಡಬೇಕು. ೪) ಪತ್ರಿಕಾ ನಿರ್ಬಂಧ ದೂರವಾಗಬೇಕು. ೫) ನ್ಯಾಯಾಂಗದ ಘನತೆ ಎತ್ತಿ ಹಿಡಿಯಬೇಕು ಹಾಗೂ ಸ್ವಾತಂತ್ರ್ಯ ಪುನಃ ದೊರೆಯಬೇಕು. ೬) ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತಿತರ ನಿಷೇಧಿತ ಸಂಸ್ಥೆಗಳ ಮೇಲಿನ ಪ್ರತಿಬಂಧ ತೆಗೆದುಹಾಕಬೇಕು.

ಆಂದೋಲನವನ್ನು ಮೊಳಕೆಯಲ್ಲೇ ಚಿವುಟಿಹಾಕಲು ಸರ್ಕಾರ ಶತ ಪ್ರಯತ್ನ ನಡೆಸಿತು. ದೇಶಾದ್ಯಂತ ಪೋಲೀಸ್ ದಾಳಿಗಳಾದವು. ಸಾವಿರಾರು ಕಾರ್ಯಕರ್ತರನ್ನು ಬಂಧಿಸಲಾಯಿತು. ಆದರೆ ಎಲ್ಲವೂ ವ್ಯರ್ಥ.

'ಸರ್ವಾಧಿಕಾರಕ್ಕೆ ಧಿಕ್ಕಾರ', 'ಪ್ರಜಾಪ್ರಭುತ್ವ ಚಿರಾಯುವಾಗಲಿ' ಎಂಬ ಘೋಷಣೆಗಳೊಡನೆ ಸರ್ವಾಧಿಕಾರವನ್ನು ಧಿಕ್ಕರಿಸುತ್ತಾ ೧೪-೧೧-೧೯೭೬ರಂದು ಸಹಸ್ರಾರು ಸತ್ಯಾಗ್ರಹಿಗಳು ಮೆರವಣಿಗೆ ಹೊರಟರು. ಗಂಡಸರು, ಹೆಂಗಸರೆನ್ನದೆ, ಬಾಲಕರು ವೃದ್ಧರೆನ್ನದೆ ಎಲ್ಲರೂ ಈ ಧರ್ಮಯುದ್ಧದಲ್ಲಿ ಧುಮುಕಿದರು. ಪ್ರತಿದಿನವೂ ಮೀಸಾ, ಡಿಐಆರ್ ಗಳ ಅಡಿ ಸಹಸ್ರಾರು ಜನರನ್ನು ಬಂಧಿಸಲಾಯ್ತು.

ಎಲ್ಲ ಕ್ಷೇತ್ರಗಳಿಂದಲೂ ಪ್ರತಿಭಟನೆ ಶುರುವಾಯ್ತು. ರಾಜಕಾರಣಿಗಳು, ವಕೀಲರು, ಬರಹಗಾರರು, ನ್ಯಾಯಾಂಗದವರು, ಪತ್ರಿಕೆಯವರು ಪರಿಣಾಮಕಾರಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಸರ್ವಾಧಿಕಾರಣಿಯ ಶಕ್ತಿ ಕುಂದುತ್ತಾ ಬಂತು.

ಮುಕ್ತಿ ತಂದ ಮತ ಪೆಟ್ಟಿಗೆ :

ಹಠಾತ್ತನೆ ಲೋಕಸಭೆಯನ್ನು ವಿಸರ್ಜಿಸಿ ಚುನಾವಣೆಗಳನ್ನು ಘೋಷಿಸಿದ ಇಂದಿರಾಗಾಂಧಿ ತನ್ನದೇ ಜಯ ಎನ್ನುವ ಹಮ್ಮಿನಿಂದ ಬೀಗಿದರು. ೧೯೭೭ರ ಮಾರ್ಚಿಯಲ್ಲಿ ಚುನಾವಣೆ ನಿಗದಿತವಾಯ್ತು. ಪವಾಡ ಎನ್ನುವಂತೆ ಎಲ್ಲ ವಿರೋಧಪಕ್ಷಗಳೂ ಜಯಪ್ರಕಾಶರ ನೇತೃತ್ವದಲ್ಲಿ ತಮ್ಮ ಬೇಧಗಳನ್ನೆಲ್ಲ ಮರೆತು ಒಂದು ವೇದಿಕೆಗೆ ಬಂದುವು. ಅದರಿಂದ 'ಜನತಾಪಕ್ಷ' ಉದಯವಾಯ್ತು. ಸಮಯಾಭಾವದಿಂದ ಅದಿನ್ನೂ ಒಂದು ಸುಸಂಘಟಿತವಾಗಿರಲಿಲ್ಲ. ಅಲ್ಪಕಾಲದಲ್ಲಿ ವಿರೋಧಪಕ್ಷಗಳು ಒಂದಾಗಲಾರವು ಎನ್ನುವ ಏಕೈಕ ಭರವಸೆಯಿಂದ ಚುನಾವಣೆಯಲ್ಲಿ ಜಯ ಗಳಿಸಬಹುದೆಂಬ ಇಂದಿರಾಗಾಂಧಿಯ ಭರವಸೆ ಹುಸಿಯಾಯ್ತು. ಜಯಪ್ರಕಾಶರ ನಿರ್ಮಲವಾದ, ಕಲಂಕರಹಿತವಾದ ಶುದ್ಧ ಚಾರಿತ್ರ್ಯಕ್ಕೆ ಜನ ಒಲಿದು ಜನತಾ ಪಕ್ಷವನ್ನು ಅಧಿಕಾರಕ್ಕೆ ತಂದರು.

ಪ್ರಥಮ ಕಾಂಗ್ರೆಸೇತರ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂತು. ಮೊರಾರ್ಜಿ ದೇಸಾಯ್ ಪ್ರಧಾನಮಂತ್ರಿಯಾದರು. ಜನತಾ ಪಕ್ಷಕೆ ಮೂರನೆ ಎರಡರಷ್ಟು ಬಹುಮತ ವಿತ್ತು. ಕೇವಲ ಅಧಿಕಾರ ಹಿಡಿಯುವುದರಿಂದ ಸಂಪೂರ್ಣ ಕ್ರಾಂತಿ ಸಾಧ್ಯವಿಲ್ಲ. ಅದಕ್ಕೆ ಇಡೀ ರಾಜಕೀಯ ಮೌಲ್ಯಗಳೇ ಬದಲಾಗಬೇಕು ಎಂದು ಜಯಪ್ರಕಾಶ ನಾರಾಯಣರು ನೂತನ ನಾಯಕರನ್ನೂ ಎಚ್ಚರಿಸಿದರು. ರಾಜಘಾಟಿನ ಗಾಂಧೀ ಸಮಾಧಿ ಬಳಿ

ಲೋಕಸಭೆಯ ಜನತಾ ಪ್ರತಿನಿಧಿಗಳನ್ನು ಕರೆದರು. ಪ್ರಥಮ ಸಭೆ ನಡೆಯಿತು. ಆಚಾರ್ಯ ಕೃಪಾಲಾನಿ, ಜಯಪ್ರಕಾಶ ನಾರಾಯಣ್ ದೀಕ್ಷಾ ವಚನ ಬೋಧಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಭಾರತೀಯರಲ್ಲಿದ್ದ ಪೂರ್ಣ ಸ್ವರಾಜ್ಯದ ರೂಪುರೇಷೆಗಳನ್ನು ಜಯಪ್ರಕಾಶರು ಮುಂದಿಟ್ಟರು. ಭ್ರಷ್ಟಾಚಾರ, ನಿರಂಕುಶ ಪ್ರಭುತ್ವ, ಕೇಂದ್ರೀಕೃತ ಬಂಡವಾಳ, ದಾರಿದ್ರ್ಯ, ನಿರುದ್ಯೋಗ ಮುಂತಾದವುಗಳನ್ನು ನಿರ್ಮೂಲನ ಮಾಡಿ ನೆಮ್ಮದಿಯ ಜೀವನ ರೂಪಿಸಲು ಗ್ರಾಮ ಸಂಘರ್ಷಗಳನ್ನು ರೂಪಿಸಲು ನೆರವಾಗುವ ಸರ್ಕಾರ ಇದಾಗಬೇಕು. ಹೊಣೆ ಹೊತ್ತವರು ಸರಳ ಜೀವನ, ನಿಷ್ಪಕ್ಷಪಾತ ಅಧಿಕಾರ, ನಿಸ್ವಾರ್ಥ ಮನೋಭಾವಗಳನ್ನು ರೂಢಿಸಿಕೊಳ್ಳದೆ ಇದು ಸಾಧ್ಯವಾಗುವುದಿಲ್ಲ ಎನ್ನುವ ಕಿವಿ ಮಾತನ್ನು ಹೇಳಿದರು.

'ಜನತಾ ಸರ್ಕಾರ' ಕೇಂದ್ರದಲ್ಲಿ ೨೪-೩-೧೯೭೭ರಂದು ಅಧಿಕಾರ ವಹಿಸಿ ಕೊಳ್ಳುವ ಮುನ್ನ ರಾಜಘಾಟಿನ ಗಾಂಧಿ ಸಮಾಧಿಯ ಬಳಿ ಜಯಪ್ರಕಾಶ ನಾರಾಯಣ್ ಮತ್ತು ಆಚಾರ್ಯ ಕೃಪಾಲಾನಿ ಅವರ ಸಮ್ಮುಖದಲ್ಲಿ ಜನತಾಪಕ್ಷದವರು ಕೆಳಕಂಡಂತೆ ಪ್ರಮಾಣವಚನ ಸ್ವೀಕರಿಸಿದರು.

೧. ಜನತಾ ಪಕ್ಷದ ಕಾರ್ಯಕರ್ತರಾದ ನಾವು ನಮ್ಮ ಜನಕೋಟಿಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು , ನಾಗರಿಕ ಸ್ವಾತಂತ್ರ್ಯಗಳನ್ನೂ ಸಂರಕ್ಷಿಸಿ ಬಲಪಡಿಸಲು ನಾವು ನಮ್ಮನ್ನು ಈ ದಿನ ಸಮರ್ಪಿಸಿಕೊಳ್ಳುತ್ತೇವೆ.

೨. ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಚನೆಯಲ್ಲಿನ ಮೂಲಭೂತ ತತ್ವಗಳನ್ನು ಮಹಾತ್ಮಗಾಂಧಿಯವರ ಸಂದೇಶಗಳಿಗನುಗುಣವಾಗಿ ಮತ್ತು ಭಾರತೀಯ ಜೀವನ ಮೌಲ್ಯಗಳನ್ನಾಧರಿಸಿ ಸೂಕ್ತ ರೀತಿಯಲ್ಲಿ ಪರಿವರ್ತಿಸಿ, ಪ್ರಜಾಸತ್ತಾತ್ಮಕ ಜಾತ್ಯಾತೀತ ಸಮಾಜವಾದೀ ಸಮಾಜವನ್ನು ನಿರ್ಮಿಸಲು ಕಂಕಣಬದ್ಧರಾಗುತ್ತೇವೆ.

೩. ಪಕ್ಷದ ಧ್ಯೇಯೋದ್ದೇಶಗಳನ್ನು ಅನುಷ್ಠಾನ ಮಾಡಲು ನಾವು ಸಂಪೂರ್ಣ ಐಕ್ಯತೆಯನ್ನು ಸಾಧಿಸಿ ನಮ್ಮ ಪ್ರಣಾಳಿಕೆಯಲ್ಲಿ ವಿವರಿಸಿರುವ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಧೋರಣೆಗಳನ್ನು ಜಾರಿಗೆ ತರುತ್ತೇವೆಂದು ವಚನಬದ್ಧರಾಗುತ್ತೇವೆ.

೪. ರಾಷ್ಟ್ರೀಯ ವಿಮೋಚನಾ ಸಮಯದಲ್ಲಿ ಹೋರಾಟದ ಎಲ್ಲ ಮಹಾ ವ್ಯಕ್ತಿಗಳಿಗೂ ನಮ್ಮ ಕೃತಜ್ಞತಾ ಪೂರ್ವಕ ನಮನಗಳನ್ನು ಅರ್ಪಿಸುತ್ತೇವೆ ಇತ್ತೀಚೆಗೆ ಪ್ರಜಾಸ್ವಾತಂತ್ರ್ಯದ ಮೂಲಭೂತ ಹಕ್ಕುಗಳಿಗಾಗಿ ಜಯಪ್ರಕಾಶ ನಾರಾಯಣರ ನೇತೃತ್ವದ ಚಳವಳಿಯಲ್ಲಿ ಭಾಗವಹಿಸಿ ಸಂಕಷ್ಟಗಳನ್ನು ಅನುಭವಿಸಿದ ಯೋಧರಿಗೆಲ್ಲಾ ನಮ್ಮ ಪ್ರಣಾಮಗಳನ್ನು ಶ್ರದ್ಧಾಪೂರ್ವಕವಾಗಿ ಸಲ್ಲಿಸುತ್ತೇವೆ.

ಎರಡು ವರ್ಷಗಳುರುಳಿದವು. ಮಾಜಿ ಪ್ರಧಾನಿ ಇಂದಿರಾಗಾಂಧಿಯವರ ವ್ಯವಹಾರಗಳನ್ನು ಕುರಿತು ನ್ಯಾಯಮೂರ್ತಿ ಷಾ ಅವರ ನೇತೃತ್ವದ ವಿಚಾರಣಾ ಆಯೋಗ

ನೇಮಿಸಲ್ಪಟ್ಟಿತು. ಮತ್ತೊಂದು ಅಪರಾಧದಲ್ಲಿ ಆಕೆಯನ್ನು ಕೆಲವು ದಿನ ಬಂಧನದಲ್ಲಿ ಇಡಲಾಯ್ತು. ಬಿಡುಗಡೆಯ ನಂತರ ಇಂದಿರಾಗಾಂಧಿ ಕರ್ನಾಟಕದ ಚಿಕ್ಕಮಗಳೂರು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು.

ಆ ನಂತರದ ದಿನಗಳಲ್ಲಿ ಜನತಾಪಕ್ಷದಲ್ಲಿ ಒಡಕು ಶುರುವಾಯ್ತು. ಗಾಂಧೀಜಿಯವರ ನೇತೃತ್ವದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದು ಅಧಿಕಾರ ಸ್ವೀಕರಿಸಿದ ಮೇಲೆ ಗಾಂಧೀಜಿ, ಅಪ್ರಸ್ತುತರಾಗುತ್ತಾ ಬಂದಂತೆ ತುರ್ತುಪರಿಸ್ಥಿತಿಯ ನಂತರ ಅಧಿಕಾರ ಸ್ವೀಕರಿಸಿದ ಮೇಲೆ ಜಯಪ್ರಕಾಶ ನಾರಾಯಣರು, ಅವರು ಪ್ರತಿಪಾದಿಸಿದ ತತ್ವಗಳು ಅಪ್ರಸ್ತುತವಾಗುತ್ತಾ ಬಂದುವು. ಅಧಿಕಾರದ ದಾಹ ಜನತಾಪಕ್ಷವನ್ನೂ ಒಡಕಿನೆಡೆಗೆ ಒಯ್ದಿತು. ಜನತಾಪಕ್ಷದ ಹಿರಿಯ ರಾಜಕಾರಣಿಗಳು ಕನ್ಯಾಕುಮಾರಿಯಿಂದ ಹಿಡಿದು ಹಿಮಾಲಯದ ವರೆಗೆ ಸಮಾಜ ಸೇವೆಯಲ್ಲಿ ತೊಡಗಿ ಯುವಜನಾಂಗಕ್ಕೆ ಮಾರ್ಗದರ್ಶಕರಾಗುತ್ತಾರೆಂದು ಜನ ಭಾವಿಸಿದ್ದರು. ಆದರೆ ಅದು ಹುಸಿಯಾಯ್ತು.

ದೇಶದ ರಾಜಕೀಯ ಪರಿಸ್ಥಿತಿ ಜನತಾಪಕ್ಷದ ಒಳಜಗಳಗಳಿಂದ ಅವನತಿಯ ಪ್ರಪಾತಕ್ಕೆ ಜಾರುತ್ತಿತ್ತು. ಚೌಧುರಿ ಚರಣಸಿಂಗರ ಮತ್ತು ಮೊರಾರ್ಜಿ ದೇಸಾಯರ ಬಣಗಳು ಅಧಿಕಾರ ಸ್ಥಾನಕ್ಕಾಗಿ ಕಚ್ಚಾಡತೊಡಗಿದುವು. ಆಚಾರ್ಯ ಕೃಪಾಲಾನಿ ಮತ್ತು ಜಯಪ್ರಕಾಶರು ಹಲವು ಬಾರಿ ಮನವಿ ಮಾಡಿದರು. ಯಾವುದೂ ಪ್ರಯೋಜನಕ್ಕೆ ಬರಲಿಲ್ಲ.

೧೯೭೮, ಜನವರಿ ೩೦ ಹುತಾತ್ಮ ದಿನದಂದು ಜಯಪ್ರಕಾಶರು ಗಾಂಧೀಜಿಯವರನ್ನು ನೆನೆದು ಗದ್ಗದಿತರಾಗಿ ಹೇಳಿದರು.

''ಈ ಪವಿತ್ರ ದಿನದಂದು ಅಧಿಕಾರರೂಢರಾದ ನೀವೆಲ್ಲರೂ ಆತ್ಮ ನಿರೀಕ್ಷಣೆ ಮಾಡಿಕೊಳ್ಳಬೇಕೆಂದು ನನ್ನ ಬಿನ್ನಹ. ನಮ್ಮ ಜೀವನ ಪದ್ಧತಿ, ನಮ್ಮ ಆಚರಣೆ ಅಂದು ರಾಜಘಾಟಿನಲ್ಲಿ ನಾವು ಕೈಗೊಂಡ ಪ್ರತಿಜ್ಞೆಗನುಗುಣವಾಗಿ ರೂಪವಾಗಿದೆಯೇ? ದೇಶದ ಅತ್ಯಂತ ಕಟ್ಟಕಡೆಗೆ ನೂಕಲ್ಪಟ್ಟವರ ಬಳಿಗೆ ಸಾರುವಂತೆ ನಮ್ಮ ರಾಷ್ಟ್ರೀಯ ನೀತಿ ಧೋರಣೆಗಳಲ್ಲಿ ಎಷ್ಟು ಪರಿವರ್ತನೆಗಳನ್ನು ಮಾಡಬಹುದಾಗಿತ್ತೋ ಅದನ್ನು ಪ್ರಾಮಾಣಿಕವಾಗಿ ಮಾಡಲು ಪ್ರಯತ್ನ ಮಾಡಿದ್ದೇವೆಯೆ? ನಮ್ಮಲ್ಲಿನ ಸಾಮಾನ್ಯ ಜನತೆ ಇಂದಿನ ಸರ್ಕಾರ ಹಿಂದಿನದಕ್ಕಿಂತ ಹೆಚ್ಚು ಜನರೊಡನೆ ಸಮ್ಮಿಳಿತವಾಗಿ ಅವರ ಸಮಸ್ಯೆಗಳನ್ನು ಅರಿತು ಪರಿಣಾಮಗಳನ್ನು ಜಾರಿಗೆ ತರುವುದರಲ್ಲಿ ಯಶಸ್ವಿ ಆಗಿದೆ ಎಂದು ತಿಳಿದಿದೆಯೇ?.... ರಾಜಘಾಟಿನಲ್ಲಿ ತೆಗೆದುಕೊಂಡ ಶಪಥದ ದಿನಗಳಿಗೂ ಈಗ ಒದಗಿರುವ ಪರಿಸ್ಥಿತಿಗೂ ಅಜಗಜಾಂತರವಾಗಿದೆ. ನಾನಿನ್ನು ಸುಮ್ಮನಿರಲಾರೆ. ನನ್ನ ದುರ್ಬಲ ದೇಹಸ್ಥಿತಿಯಲ್ಲೂ ಏನಾದರೂ ಮಾಡುವ ಪ್ರಬಲವಾದ ಒತ್ತಡ ಜೀವವನ್ನು ಕೊರೆಯುತ್ತದೆ. ಜನತಾ ಪಕ್ಷ ಜನತೆಯ ಅಭೂತಪೂರ್ವ ಬೆಂಬಲವನ್ನು ಬಳಸಿಕೊಂಡು ಅವರ ಆಶೋತ್ತರಗಳಿಗೆ ವಿಮುಖವಾಗುವುದು ಘೋರ ಅಪರಾಧ.''

ಎಂದು ಭಾರವಾದ ಹೃದಯದಿಂದ ಎರಡೂ ಬಾಹುಗಳನ್ನೆತ್ತಿ ಎಚ್ಚರಿಕೆಯ ನುಡಿಗಳನ್ನಾಡಿದರು. ಆದರೆ ಹತಾಶೆ ಅವರ ಹೃದಯವನ್ನು ಆವರಿಸಿತ್ತು.

ಜಯಪ್ರಕಾಶರ ದೇಹ ಸ್ಥಿತಿ ಕುಸಿಯುತ್ತಾ ಬಂತು. ತಮ್ಮ ಕನಸಿನ ಭಾರತ ನನಸಾಗುವುದನ್ನು ಕಾಣಲು ಧೀಶಕ್ತಿಯಿಂದ ಬದುಕಿ ಹೋರಾಡಿದರು. ಈಗ ಆ ಕನಸೂ ಕುಸಿಯಿತು. ದೇಹ ದುರ್ಬಲವಾಯ್ತು. ಎರಡೂ ಮೂತ್ರಪಿಂಡಗಳು ನಿಷ್ಕ್ರಿಯವಾದವು. ನಾಲ್ಕುದಿನ ಕೃತಕ ರಕ್ತ ಶುದ್ಧಿಯ ಉಪಕರಣದಿಂದ (ಡಯಾಲಿಸಿಸ್) ಜೀವವನ್ನು ರಕ್ಷಿಸಿಕೊಳ್ಳಬೇಕಾಯಿತು. ಬದುಕೇ ಅಸಹನೀಯ ಎನಿಸಿತು. ಕೃಶದೇಹ ಕಂಪಿಸುತ್ತಿತ್ತು.

ಜಯಪ್ರಕಾಶರ ದಿವ್ಯ ಚೇತನ ಮಹಾತ್ಮ ಗಾಂಧೀಜಿಯವರಂತೆಯೇ ತನ್ನ ಕೊನೆಯ ದಿನಗಳಲ್ಲಿ ಮಮ್ಮಲ ಮರುಗುವಂತಾಯ್ತು. ದೇಶ ಅವನತಿಯ ಹಾದಿ ಹಿಡಿಯುತ್ತಿರುವುದನ್ನು ನೋಡಲು ಇನ್ನೂ ಬದುಕಿರುವೆನಲ್ಲಾ ಎಂದು ನೊಂದು ನಲುಗಿದರು. ದಿನದಿನವೂ ಕ್ಷೀಣಿಸುತ್ತಿದ್ದ ದೇಹಸ್ಥಿತಿಯಿಂದ ಬಳಲಿ ಎಲ್ಲ ರಾಜಕೀಯ ವ್ಯವಹಾರಗಳಿಂದಲೂ ದೂರ ನಿಂತು ಮೃತ್ಯು ದೇವತೆಯ ಪ್ರಶಾಂತ ಸ್ಪರ್ಶಕ್ಕಾಗಿ ಹಂಬಲಿಸಿದರು.

ಅವರು ಕ್ರಮಿಸಿದ ಸ್ವಾತಂತ್ರ್ಯಪೂರ್ವದ ಮುಳ್ಳಿನ ಹಾದಿಗಿಂತ ಸ್ವಾತಂತ್ರ್ಯ ನಂತರದ ಮುಳ್ಳಿನ ಹಾದಿ ಹೆಚ್ಚು ಕಠಿಣವೂ, ಕ್ರೂರವೂ ಆಗಿದ್ದುದು ಅವರ ಜೀವಿತದ ದೊಡ್ಡ ದುರಂತ.

ಇಳಿತಂದುದು ಈ ಭೂಮಿಗೆ
　　ಅವತಾರದ ಮೇಲವತಾರ !
ಆದುದ್ಧಾರಕೆ ಸಾವಿರ ಮಾಡಿ
　　ಇಹುದಾಗುವ ಉದ್ಧಾರ !

ಎನ್ನುವ ಕುವೆಂಪು ವಾಣಿಯಂತೆ ಮನುಕುಲದ ಉದ್ಧಾರವಾಗಬೇಕೆನ್ನುವ ಜಯಪ್ರಕಾಶ್ ನಾರಾಯಣರ ಅಂತರಂಗದ ಅಭೀಪ್ಸೆಯ ಉಸಿರು ಮರೆಯಾಗದೆ ಮೆಲ್ಲನೆ ಉಲಿಯುತ್ತಿರುವುದು ಇಂದಲ್ಲದಿದ್ದರೂ ಮುಂದೆ ಅವರ ಕನಸು ನನಸಾಗುವುದರ ಪ್ರತೀಕವಾಗಿದೆ.

★

ಮುಕ್ತಾಯಕ್ಕೆ ಮುಂಚೆ

ಸಾಮಾನ್ಯವಾಗಿ ಜಗತ್ತಿಗೆ ಬಂದ ದಾರ್ಶನಿಕರ, ಚಿಂತಕರ ವಿಚಾರಗಳು ಜನಜೀವನದಲ್ಲಿ ಸಾಕಾರಗೊಳ್ಳದೆ ವಿಫಲವಾಗುವುದು ಇಲ್ಲಾ ಅಂಧಾಚರಣೆಗೆ ಒಳಗಾಗುವುದು ಸಾಮಾನ್ಯವಾಗಿದೆ. ಜೆ.ಪಿ.ಯವರ ವಿಚಾರಗಳು ವಿಫಲವಾಗಲು ಹಾಗೂ ಜೆ.ಪಿ. ಮತ್ತು ಡಾ|| ಲೋಹಿಯಾ ಅವರುಗಳು ಭಾರತೀಯ ಸಮಾಜದಲ್ಲಿ ಅಪ್ರಸ್ತುತರಾಗಲು ಕಾರಣವೇನು? ಬಹುಶಃ ಅದು ಜನಸಾಮಾನ್ಯರ ಶಕ್ತಿಗೆ ಎಟುಕದ ಬಹು ದೂರದ ಆದರ್ಶಗಳನ್ನು ಅವರು ಅಳವಡಿಸಿಕೊಂಡಿದ್ದರ ಫಲ ಎನ್ನಬಹುದೇ?

ಜಯಪ್ರಕಾಶ ನಾರಾಯಣರು ಸಂಪೂರ್ಣ ಕ್ರಾಂತಿಯನ್ನು ಪ್ರತಿಪಾದಿಸಿದಂತೆ ಡಾ|| ರಾಮಮನೋಹರ ಲೋಹಿಯಾ ಅವರು ಸಪ್ತಕ್ರಾಂತಿಯನ್ನು ಪ್ರತಿಪಾದಿಸಿದ್ದರು. ಅದರ ಮುಖ್ಯಾಂಶಗಳೆಂದರೆ ೧. ಪುರುಷ-ಸ್ತ್ರೀ ಸಮಾನತೆ. ೨. ವರ್ಣಭೇದ ಆಧಾರಿತ ಅಸಮಾನತೆಯ ಸಮಾಪ್ತಿ ೩. ಜನ್ಮ ಅಥವಾ ಜಾತಿಯ ಆಧಾರದ ಮೇಲಿನ ಅಸಮಾನತೆಯ ನಿವಾರಣೆ. ೪ ವಿದೇಶಿ ದಬ್ಬಾಳಿಕೆಯ ಅಂತ್ಯ ಹಾಗೂ ವಿಶ್ವ ಸರ್ಕಾರದ ಸ್ಥಾಪನೆ. ೫. ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ. ೬. ಶಸ್ತ್ರಾಸ್ತ್ರಗಳ ಬಳಕೆಯ ಮೇಲೆ ಹತೋಟಿ ಹಾಗೂ ಸಾರ್ವಜನಿಕ ಕಾನೂನು ಭಂಗ ತತ್ವದ ಪ್ರತಿಷ್ಠಾಪನೆ ೭. ವೈಯಕ್ತಿಕ ಸ್ವಾತಂತ್ರ್ಯದ ಮೇಲಾಗುವ ಅತಿಕ್ರಮಣದ ವಿರುದ್ಧ ಹೋರಾಟ.

ಜಯಪ್ರಕಾಶರ ಸಂಪೂರ್ಣ ಕ್ರಾಂತಿಯಂತೆ ಇವು ಬಹುಸಂಖ್ಯಾತ ಜನಸಾಮಾನ್ಯರ ಕೈಗೆ ಎಟುಕದಂತವು. ವಿದ್ಯಾವಂತ ಹಾಗೂ ಪ್ರಜ್ಞಾವಂತ ಸಮಾಜ ಪ್ರಯತ್ನಿಸಬಹುದಾದ ಹಾಗೂ ಸಂಕಲ್ಪ ಶಕ್ತಿಯಿಂದ ತ್ಯಾಗದ ತಳಹದಿಯ ಮೇಲೆ ಸಾಧಿಸುವಂತವು.

ದಿನನಿತ್ಯದ ಬದುಕಿಗೆ ಹೊರತಾದ ಆದರ್ಶಗಳನ್ನು, ಸಿದ್ಧಾಂತಗಳನ್ನು ಜನ ಸಾಮಾನ್ಯರು ಸ್ವೀಕರಿಸಲು ಹಿಂಜರಿಯುವುದು ಸಹಜ. ಏಕೆಂದರೆ ಅವು ಅವರ ಶಕ್ತಿಗೆ ಮೀರಿದ ವಿಚಾರಗಳು. ಹಾಗಾದರೆ ಅವುಗಳನ್ನು ಜನಜೀವನದಲ್ಲಿ ತರುವುದಾದರೂ ಹೇಗೆ? ಅದಕ್ಕೆ ಸಮರ್ಥ ರಾಜಕೀಯ ಶಕ್ತಿ ಬೇಕು. ಜೆ.ಪಿ.ಯವರು ಅಂತಹ ಶಕ್ತಿ ರಾಜಕೀಯದಿಂದ ದೂರ ಇದ್ದುದು ಕಾರಣವೇ? ಅಧಿಕಾರ ಬೇಡವೆನ್ನುವುದೇ ಅವರ ಜೀವನ ಪಲ್ಲವಿ. ಬಹುಶಃ ಗಾಂಧೀಜಿಯವರ ಧೋರಣೆಯೂ ಅದೇ ಆಗಿದ್ದ ಕಾರಣ ಅವರೀರ್ವರ ವಿಚಾರಗಳೂ ಜನ ಮೆಚ್ಚುಗೆ ಪಡೆದೂ ಭಾರತದ ರಾಜಕಾರಣದಿಂದ ದೂರವಾಗಲು ಕಾರಣವಾಯ್ತೆ?

ಮಧುಲಿಮೆಯೆ ಹೇಳುವಂತೆ 'ಜೆ.ಪಿ.ಯವರು-ಪಕ್ಷಾತೀತ ಪ್ರಜಾತಂತ್ರ ಹಾಗೂ ಪಕ್ಷಾತೀತ ರಾಜನೀತಿ-ಇತ್ಯಾದಿ ಅವಾಸ್ತವ ಕಲ್ಪನಾ ಜಾಲದಲ್ಲಿ ಸಿಲುಕಿಕೊಂಡವರಾಗಿದ್ದರು' ಎನ್ನುವುದನ್ನು ಕೊಂಚ ವಿಮರ್ಶಿಸಿ ನೋಡಬೇಕು. ಏಕೆಂದರೆ ಭಾರತ ಸಾವಿರಾರು ವರ್ಷಗಳು ವರ್ಣ ವ್ಯವಸ್ಥೆಯ ಹಾಗೂ ಅನ್ಯರ ಆಡಳಿತಕ್ಕೆ ಒಳಪಟ್ಟು ವಿದ್ಯೆಯಿಂದ ವಂಚಿತವಾಗಿತ್ತು.

ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳಿಂದ ಆವೃತವಾಗಿತ್ತು. ಇಂತಹ ಮನಸ್ಥಿತಿಯಲ್ಲಿ ಜೆ.ಪಿ. ಅವರ ಪಕ್ಷಾತೀತ ಪ್ರಜಾತಂತ್ರ ಹಾಗೂ ಪಕ್ಷಾತೀತ ರಾಜನೀತಿಗಳು ಸಾಕಾರಗೊಳ್ಳುವುದು ಯಾರಿಂದ? ವಿದ್ಯಾವಂತ ಹಾಗೂ ಪ್ರಜ್ಞಾವಂತ ಸಮಾಜದಲ್ಲಿ ಮಾತ್ರ ಅಳವಡಿಸಿಕೊಳ್ಳಲು ಪ್ರಯತ್ನಿಸಬಹುದಾದ ಸಿದ್ಧಾಂತಗಳನ್ನು ಈ ಅನಕ್ಷರಸ್ಥ ಸಮೂಹದಲ್ಲಿ ಆಚರಣೆಗೆ ತರುವುದಾದರೂ ಹೇಗೆ?

ಬಹುಶಃ ಈ ಕಾರಣದಿಂದಲೇ ಎಂದು ಕಾಣುತ್ತದೆ ಸುಭಾಷ್ ಚಂದ್ರಬೋಸರು ಸಾವಿರಾರು ವರ್ಷಗಳಿಂದ ಜಾತಿ, ಮತ, ಕೋಮು, ಭಾಷೆ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆ ಮುಂತಾದುವುಗಳಿಂದ ನರಳುತ್ತಿರುವ ಭಾರತವನ್ನು ಪುನರ್ ನಿರ್ಮಾಣ ಮಾಡಬೇಕಾದರೆ 'ತ್ಯಾಗ ಮನೋಭಾವದ ಉಕ್ಕಿನ ಸರ್ವಾಧಿಕಾರಿಯೊಬ್ಬ ಕನಿಷ್ಠ ಇಪ್ಪತ್ತು ವರ್ಷಗಳ ಕಾಲ ಭಾರತವನ್ನು ಆಳಬೇಕು' ಎಂಬ ವಿಚಾರವನ್ನು ಹೊಂದಿದ್ದುದು.

ಗಾಂಧೀಜಿವರೂ ಕೂಡ ಸ್ವಾತಂತ್ರ್ಯ ಪ್ರಾಪ್ತಿಯಾಗುವ ಹೊತ್ತಿಗೆ ನಿರಾಶೆಯ ಅಂಚಿಗೆ ತಲುಪಿದ್ದರು. ೧೯೪೬, ಜುಲೈನಲ್ಲಿ 'ಒಂದು ದುರಂತಕಾರಿ ವಿದ್ಯಮಾನ' ಎಂಬ ಟಿಪ್ಪಣಿಯಲ್ಲಿ ಗಾಂಧೀಜಿ 'ಸಂವಿಧಾನ ಸಭೆಯಲ್ಲಿ ಇರಬಯಸುವ ವ್ಯಕ್ತಿಗಳ ಎಷ್ಟೊಂದು ಪತ್ರಗಳು ನನ್ನ ಟಪಾಲಿನಲ್ಲಿ ಇರುತ್ತವೆ ಎಂದರೆ ನನಗೆ ಹೆದರಿಕೆಯಾಗುತ್ತದೆ. ಬುದ್ಧಿಜೀವಿ ವರ್ಗ ಭಾರತದ ಸ್ವಾತಂತ್ರ್ಯಕ್ಕಿಂತ ವೈಯಕ್ತಿಕ ಸುಖ ಲೋಲುಪತೆಯ ಬಗ್ಗೆ ಹೆಚ್ಚು ಆತುರದಲ್ಲಿದೆ ಎಂಬ ಸಾರ್ವತ್ರಿಕ ಭಾವನೆಯ ಸೂಚಕವೋ ಇದು ಎಂದು ಸಂಶಯ ಬರುತ್ತಿದೆ' ಎನ್ನುವ ಈ ಮಾತುಗಳು ಏನನ್ನು ಧ್ವನಿಸುತ್ತವೆ?

ಭಾರತೀಯರ ಈ ಮನಸ್ಥಿತಿಯನ್ನು ಚೆನ್ನಾಗಿ ಅರಿತಿದ್ದ ಇಂಗ್ಲೆಂಡಿನ ಮಾಜಿ ಪ್ರಧಾನಿ ಚರ್ಚಿಲ್ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಸಂದರ್ಭದಲ್ಲಿ ''ಸ್ವತಂತ್ರ ಭಾರತದಲ್ಲಿ ಅಧಿಕಾರ ಎನ್ನುವುದು ದಗಾಕೋರರ, ಠಕ್ಕರ ಹಾಗೂ ನಿರಂಕುಶ ದರೋಡೆಕೋರರ ಕೈಗೆ ಹೋಗುತ್ತದೆ. ಗಾಳಿಯೊಂದನ್ನು ಬಿಟ್ಟರೆ ಒಂದು ತುಂಡು ಬ್ರೆಡ್ಡಾಗಲೀ, ಸೀಸೆ ನೀರಾಗಲೀ ತೆರಿಗೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ಅವರು ತಮ್ಮ ತಮ್ಮೊಳಗೇ ಹೊಡೆದಾಡುತ್ತಾರೆ. ಈ ಬಹಿರಂಗ ಕಾದಾಟದಿಂದಾಗಿ ಭವ್ಯ ಭಾರತ ಕಳೆದುಹೋಗುತ್ತದೆ' ಎಂದು ಹೇಳಿದ್ದು ದಶಕಗಳು ಕಳೆದಂತೆ ನಿಜವಾಗುತ್ತಿದೆ. ಇದಕ್ಕೆ ಸಾಕ್ಷಿ ಎನ್ನುವಂತೆ ೧೯೫೬ರಲ್ಲಿಯೇ ಆಚಾರ್ಯ ಕೃಪಾಲಾನಿ ''ಗೂಂಡಾಗಳೂ ಅಲ್ಲ, ಕಾಳಸಂತೆ ಕೋರರೂ ಅಲ್ಲ, ಕಮ್ಯೂನಿಷ್ಟರೂ ಅಲ್ಲ ಆದರೆ ಕಾಂಗ್ರೆಸ್ಸಿಗರಾದ ನೀವು ಈ ಶೈಶವ ಪ್ರಜಾಪ್ರಭುತ್ವದ ಬದ್ಧ ವೈರಿಗಳಾಗಿದ್ದೀರಿ. ಭಾರತದಲ್ಲಿ ಪ್ರಜಾಪ್ರಭುತ್ವವೇನಾದರೂ ಅಳಿದುಹೋದರೆ ಅದಕ್ಕೆ ಜವಾಬ್ದಾರರು ನೀವೇ ಆಗುತ್ತೀರಿ. ನೀವು ಒಂದು ದಿನ ಬದುಕಬಹುದು, ಅದಕ್ಕಿಂತ ಹೆಚ್ಚಾಗಿ ಅಲ್ಲ. ಆದರೆ ನಿಮ್ಮ ನಾಚಿಕೆಗೇಡಿತನಕ್ಕೆ ಇದು ಇತಿಹಾಸದ ತೀರ್ಪಾಗುತ್ತದೆ'' ಎಂದು ವಾಸ್ತವ ಸ್ಥಿತಿಯ ಎಚ್ಚರಿಕೆಯನ್ನಿತ್ತಿದ್ದರು.

ಭಾರತೀಯರ ಈ ಮನಸ್ಥಿತಿಯ ಬದಲಾವಣೆಗೆ ಬೇರೆ ಮಾರ್ಗ ಯಾವುದು? ಗಾಂಧೀಜಿಯವರೇನೋ ಅಹಿಂಸಾ ಮಾರ್ಗವೇ ಪರಿಹಾರವೆಂದು ನಂಬಿ ನಡೆದರು. ಆದರೆ ಅದು ಫಲ ತಂದುಕೊಟ್ಟಿದೆಯೇ? ''ಗಾಂಧೀಜಿಯವರಿಗೆ ಅಹಿಂಸಾವಾದ ನಂಬಿಕೆಯ ಪ್ರಶ್ನೆ. ಆದರೆ ನಮಗೆ ಇದು ರಾಜಕೀಯದ ಪ್ರಶ್ನೆ'' ಎಂದು ಮೌಲಾನಾ ಆಜಾದ್ ಹೇಳಿರುವುದರ ಹಿನ್ನೆಲೆ ಏನು? ''ಗಾಂಧಿಯ ಅಹಿಂಸಾವಾದ ರಾಷ್ಟ್ರದ ಚೈತನ್ಯವನ್ನು ದುರ್ಬಲಗೊಳಿಸಿತು. ಕಾನೂನಿಗೆ ಅಗೌರವ ಎಸಗಿದ್ದು ಮಾತ್ರವಲ್ಲ, ರಾಷ್ಟ್ರವನ್ನು ಅಸಾಧ್ಯ ದುರಂತಕ್ಕೆ ತಳ್ಳಿತು. ಇಂಥ ವಿಧಾನಗಳನ್ನು ಪ್ರೋತ್ಸಾಹಿಸಿದ ಯಾವ ರಾಷ್ಟ್ರದಲ್ಲೂ ಪ್ರಗತಿಪರ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು'' ಎನ್ನುವ ಡಾ॥ ಅಂಬೇಡ್ಕರ್ ಅವರ ವಿಚಾರಗಳನ್ನು ಕುರಿತು ಚಿಂತಿಸಬೇಕಾಗುತ್ತದೆ.

''ನಾನು ಅಣುಬಾಂಬನ್ನು ಅದು ಸಿಗುವುದಿದ್ದರೆ ದೊರಕಿಸಿಕೊಳ್ಳಬೇಕೆಂದು ಕೇಳಿದ್ದೇನೆ. ನಾನು ಎಂದೆಂದೂ ಇನ್ನೊಬ್ಬನ ಮನೆಯನ್ನು ವಶಪಡಿಸಿಕೊಳ್ಳಲು ಆಯುಧಗಳನ್ನು ಉಪಯೋಗಿಸಲಾರೆ. ಆದರೆ ನನ್ನ ಮಾತೃಭೂಮಿಯೇ ಶತ್ರುಗಳ ಆಕ್ರಮಣಕ್ಕೆ ತುತ್ತಾದಾಗ ನಾನು ಯಾವುದೇ ಅವಶ್ಯವಿರುವ ಹಾಗೂ ದೊರಕುವ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲು ಹಿಂದೆಗೆಯಲಾರೆ. ನಾನು ಅಹಿಂಸೆಗೆ ಬದ್ಧನಾಗಲು ಇಚ್ಛಿಸುತ್ತೇನೆ. ಆದರೆ ಈ ಕ್ರೂರ ಅಮಾನುಷ, ಬರ್ಬರ ಹಿಂಸೆಯಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಸಂಘಟಿತ ಹಿಂಸೆಯನ್ನೇ ಅವಲಂಬಿಸಬೇಕಾದುದು ಏಕೈಕ ಮಾರ್ಗವಾದರೆ, ಅದನ್ನು ಪ್ರಯೋಗಿಸಲು ನಾನು ''ಇಚ್ಛಿಸುತ್ತೇನೆ'' ಎಂದು ಹೇಳುವ ಡಾ॥ ಲೋಹಿಯಾ ಅವರ ಚಿಂತನೆಯೂ ಮನನ ಯೋಗ್ಯವಾಗಿವೆ.

ವಿಮರ್ಶೆಗೆ ಒಳಪಡುವ ಗಾಂಧೀಜಿಯವರ ಮತ್ತೊಂದು ವಿಚಾರವೆಂದರೆ 'ಶತ್ರುಗಳ ಮನ ಪರಿವರ್ತನೆ' ಕುರಿತದ್ದು. ಗಾಂಧೀಜಿ ಬ್ರಿಟಿಷರನ್ನು ಪೂರ್ಣವಾಗಿ ಒಪ್ಪಿಕೊಂಡು ಅವರ ಮನ ಪರಿವರ್ತನೆಗೆ ಪ್ರಾರ್ಥಿಸುತ್ತಿದ್ದರು. ಅವರ ಈ ನಿಲುವಿನಿಂದಾಗಿ ಭಗತ್‌ಸಿಂಗ್‌ರಂಥ ರಾಷ್ಟ್ರಪ್ರೇಮಿಗಳು ನೇಣುಗಂಬವನ್ನೇರಬೇಕಾಯಿತು. ಸುಭಾಷ್‌ಚಂದ್ರ ಬೋಸ್‌ರಂಥ ಮಹಾನ್ ನಾಯಕರು ಕಣ್ಮರೆಯಾಗಬೇಕಾಗಿ ಬಂತು. ಇದನ್ನು ಮನಗಂಡ ಡಾ॥ ಲೋಹಿಯಾ ''ಉಳ್ಳವರ, ಶೋಷಕರ, ಪ್ರಭುಗಳ ಮತ್ತು ಉತ್ತಮರ ಮನಸ್ಸನ್ನು ಪರಿವರ್ತಿಸುವುದು ಒಳ್ಳೆಯದೇನೋ ಸರಿ. ಆದರೆ ದರಿದ್ರನ, ದುಃಖಿತನ, ಶೋಷಿತನ, ತುಳಿತಕ್ಕೆ ಒಳಗಾಗಿರುವವನ ಮನಸ್ಸನ್ನು ಪರಿವರ್ತಿಸಿ ಅವನ ಕ್ಲೈಬಕ್ಕೆ ಬದಲು ಧೈರ್ಯ ಸ್ಥೈರ್ಯಗಳನ್ನು ತುಂಬುವುದು ಮುಖ್ಯ. ಬಂಜೆ ಗಾಂಧಿವಾದವೊಂದು ಈಗ ಅಸ್ತಿತ್ವಕ್ಕೆ ಬಂದು ಅದು ಮುಖ್ಯವಾಗಿ ಶ್ರೀಮಂತರ, ಉಳ್ಳವರ ಪರಿವರ್ತನೆಗೇ ಹೆಚ್ಚಾಗಿ ಪ್ರಾರ್ಥಿಸುತ್ತದೆ. ಬಡವನ, ದಲಿತನ ಅಂತರಂಗದ ಪರಿವರ್ತನೆಗೆ ಅದು ಯತ್ನಿಸುತ್ತಲೇ ಇಲ್ಲ. ಭಾರತದ ಮತ್ತು ಅಗಾದ ವಿಶ್ವದ ಬಹುಪಾಲು ಜನಸ್ತೋಮವು ಸಾಕು ಪ್ರಾಣಿಯಂಥ

ಚಿರಂತನ ಶರಣಾಗತಿಯಲ್ಲಿಯೂ ಮತ್ತು ಒಮ್ಮೊಮ್ಮೆ ಇದ್ದಕ್ಕಿದ್ದಂತೆಯೇ ಮೇಲೆದ್ದು ಕಾದಾಡುವ ಮೃಗೀಯ ಕ್ರೌರ್ಯಕ್ಕೆ ಸಿಕ್ಕಿಕೊಂಡಿದೆ'' ಎಂದು ಯಾವುದೇ ಒಬ್ಬ ವ್ಯಕ್ತಿಯಾಗಲೀ, ಒಂದು ರಾಷ್ಟ್ರವಾಗಲೀ ತಾಳಬೇಕಾದ ನಿಲುವಿನ ಪ್ರಾಕೃತಿಕ ಸತ್ಯವನ್ನು ಅಭಿವ್ಯಕ್ತಿಸುತ್ತಾ ವಸ್ತುಸ್ಥಿತಿಯನ್ನು ಕಣ್ಣ ಮುಂದೆ ಕಟ್ಟಿ ಕೊಟ್ಟಿದ್ದಾರೆ.

ಜರ್ಮನಿಯ ಶ್ರೇಷ್ಠ ಚಿಂತಕನಾದ ಫೆಡ್ರಿಕ್ ನೀಶೆ 'ಎಲ್ಲ ದೋಷಕ್ಕಿಂತಲೂ ಹೆಚ್ಚು ಉಪದ್ರವಕಾರಿಯಾದುದು ಯಾವುದೆಂದರೆ ದುಷ್ಟರಿಗೆ ಹಾಗೂ ಅಶಕ್ತರಿಗೆ ಮರುಕ ತೋರುವುದಾಗಿದೆ' ಎಂದಿದ್ದಾನೆ. ಬಹುಶಃ ಗಾಂಧೀಜಿಯವರ ಈ ದೌರ್ಬಲ್ಯವನ್ನು ಬ್ರಿಟಿಷರಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಂಡವರೆಂದರೆ ಅವರ ಸುತ್ತ ಮುತ್ತಿಕೊಂಡಿದ್ದ ಸ್ವಾರ್ಥ ರಾಜಕಾರಣಿಗಳು ಹಾಗೂ ಬಂಡವಾಳಶಾಹಿಗಳು.

''ನಾನು ರಾಜಕೀಯ ವೇಷ ಧರಿಸಿದ್ದರೂ ನಿಜವಾಗಿಯೂ ಅಂತರಂಗದಲ್ಲಿ ಧಾರ್ಮಿಕ ವೃತ್ತಿಯವನು'' ಎಂದು ಗಾಂಧಿ ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ. ಹೀಗಾಗಿ ದಾರ್ಶನಿಕ ಗಾಂಧಿಯೊಳಗೆ ಅಪೂರ್ಣ ರಾಜಕೀಯ ವ್ಯಕ್ತಿತ್ವದ ಗಾಂಧಿ ಸೇರಿಕೊಂಡು ಅತ್ತ ಬುದ್ಧನ ಪರಿಪೂರ್ಣ ದಾರ್ಶನಿಕ ವ್ಯಕ್ತಿತ್ವವಾಗಲೀ ಇಲ್ಲಾ ಮಾವೋತ್ಸೆ ತುಂಗನ ರಾಜಕೀಯ ಮುತ್ಸದ್ದಿತನವಾಗಲೀ ಇಲ್ಲದೆ ಗಾಂಧಿ ಅಪೂರ್ಣವಾಗಿ ನಿಲ್ಲುತ್ತಾರೆ. ಹೀಗಾಗಿ ಗೋಡ್ಸೆ ಕೊಂದದ್ದು ರಾಜಕೀಯ ಗಾಂಧಿಯನ್ನೋ ಇಲ್ಲ ದಾರ್ಶನಿಕ ಗಾಂಧಿಯನ್ನೊ? ರಾಜಕೀಯ ಗಾಂಧಿ ಕೊಲೆಯಾಗಿದ್ದರೆ ಅದು ದುರಂತ. ದಾರ್ಶನಿಕ ಗಾಂಧಿಯ ಕೊಲೆಯಾಗಿದ್ದರೆ ಅದು ಅಮರ. ಇಬ್ಬರ ಕೊಲೆಯೂ ಆಗಿದ್ದರೆ ಅದು ಇತಿಹಾಸದ ವ್ಯಂಗ್ಯ.

ಗಾಂಧೀಜಿ ಸ್ವಾತಂತ್ರ್ಯ ಬಂದ ಐದೂವರೆ ತಿಂಗಳಲ್ಲಿ ಗೋಡ್ಸೆಯ ಗುಂಡಿಗೆ ಬಲಿಯಾಗಿ ಅಮರರಾಗಿದ್ದರೆ ಜಯಪ್ರಕಾಶ ನಾರಾಯಣ ಅವರು ಸ್ವಾತಂತ್ರ್ಯ ನಂತರ ಮೂವತ್ತೆರಡು ವರ್ಷ ಒಂದು ತಿಂಗಳು ಇಪ್ಪತ್ಮೂರು ದಿವಸಗಳು ಬದುಕಿ ಪರಕೀಯರ ಆಳ್ವಿಕೆಯಲ್ಲಿ ಪಟ್ಟ ಹಿಂಸೆಗಿಂತಲೂ ಕ್ರೂರವಾದ ಮಾನಸಿಕ ಹಾಗೂ ದೈಹಿಕ ಹಿಂಸೆಗೆ ಸ್ವಕೀಯರ ಆಡಳಿತದಲ್ಲಿ ಗುರಿಯಾಗಿ ಸಾವಿನಂಚಿಗೆ ಸಾಗಿದರು. ಜೆ.ಪಿ.ಯವರ ಆದರ್ಶಗಳು ಜನಮನದಿಂದ ಶೀಘ್ರವಾಗಿ ದೂರವಾಗುತ್ತಿದ್ದರೆ ಗಾಂಧೀಜಿಯವರ ಆದರ್ಶಗಳು ಕೊಂಚಕೊಂಚವಾಗಿ ಕಣ್ಮರೆಯಾಗುತ್ತಿವೆ.

ಒಟ್ಟಿನಲ್ಲಿ ಜಯಪ್ರಕಾಶ ನಾರಾಯಣರು ಕೊಟ್ಟ ವಿಚಾರಗಳೂ ಸೇರಿದಂತೆ ಮನುಕುಲದ ಏಳ್ಗೆಗೆ ಬೇಕಾಗಿರುವ ಉತ್ತಮ ಚಿಂತನೆಗಳೇನೋ ಜಗತ್ತಿನಲ್ಲಿ ಸಮೃದ್ಧವಾಗಿವೆ. ಅವು ಕಾಲದಿಂದ ಕಾಲಕ್ಕೆ ಚಿಂತಕರ ಮೂಸೆಯಲ್ಲಿ ಕರಗಿ ಪಾಕವಾಗಿವೆ. ಆದರೆ ಅವನ್ನು ಅಗತ್ಯವಾದ ಎರಕಕ್ಕೆ ಹೊಯ್ದು ಬದುಕಿಗೆ ಅಳವಡಿಸಿಕೊಳ್ಳುವ ಬಗೆ ಹೇಗೆ ಎಂಬುದೆ ಈಗ ನಮ್ಮ ಮುಂದಿರುವ ಪ್ರಮುಖ ಪ್ರಶ್ನೆ ಹಾಗೂ ಎದುರಾಗಿರುವ ಸವಾಲು.

* * *

ನೆರವಿಗೆ ಬಂದ ಕೃತಿಗಳು

೧. ಜಯಪ್ರಕಾಶ್ ನಾರಾಯಣ್ : ಎಚ್. ಎಸ್. ದೊರೆಸ್ವಾಮಿ
೨. ಜಯಪ್ರಕಾಶ್ ನಾರಾಯಣ್ : ಪ್ರಧಾನ್ ಗುರುದತ್ತ
೩. ಜೆ.ಪಿ. ವಿಚಾರದೃಷ್ಟಿ : ಸಂ।। ಕೆ. ನಾರಾಯಣ ಭಟ್ಟ
ಅನು।। ಬಳ್ಳೂರು ಸುಬ್ರಾಯ ಭಟ್ಟ
೪. ನನ್ನ ವಿಚಾರ ಯಾತ್ರೆ : ಜಯಪ್ರಕಾಶ್ ನಾರಾಯಣ
ಸಂ।। ಮತ್ತು ಅನು।।
ಕೆ.ಎಸ್. ನಾರಾಯಣಸ್ವಾಮಿ
೫. ಸಂಪೂರ್ಣ ಕ್ರಾಂತಿ : ಜಯಪ್ರಕಾಶ್ ನಾರಾಯಣ
ಅನು।। ಟಿ.ಎಸ್. ಅನಂತರಂಗಾಚಾರ್
೬. ನವ ನಿರ್ಮಾಣ ಹಾಗೂ ಲೋಕಶಕ್ತಿ : ಸಂಕಲನ : ಆರ್‌ಜಿ. ಹಳ್ಳಿ ನಾಗರಾಜ್
೭. ಸೆರೆಮನೆಯ ದಿನಚರಿ : ಅನು ।। ಡಿ.ಎಸ್. ನಾಗಭೂಷಣ
೮. ಸತ್ಯಾನ್ವೇಷಣೆ ಅಥವಾ ನನ್ನ ಆತ್ಮಕಥೆ : ಮೊ.ಕಾ. ಗಾಂಧಿ
ಅನು।। ಗೊರೂರು ರಾಮಸ್ವಾಮಿ
ಅಯ್ಯಂಗಾರ್
೯. ಇಕ್ಷು ಗಂಗೋತ್ರಿ : ಕುವೆಂಪು
೧೦. ಸ್ವಾಮಿ ವಿವೇಕಾನಂದ : ಕುವೆಂಪು
೧೧. ಕೋಗಿಲೆ ಮತ್ತು ಸೋವಿಯತ್ ರಷ್ಯಾ : ಕುವೆಂಪು
೧೨. ಡಾ।। ಲೋಹಿಯಾ : ಪ್ರೊ।। ಎಂ.ಡಿ. ನಂಜುಂಡಸ್ವಾಮಿ
ಕೆ.ಪಿ. ಪೂರ್ಣಚಂದ್ರತೇಜಸ್ವಿ
೧೩. ಭಾರತದ ರೈತ : ಡಾ।। ರಾಮಮನೋಹರ ಲೋಹಿಯಾ
ಅನು: ಜ.ಹೊ. ನಾರಾಯಣಸ್ವಾಮಿ
೧೪. ಡಾ।। ಅಂಬೇಡ್ಕರ್ ಅವರ ಕೃತಿ ಶ್ರೇಣಿಗಳು
೧೫. Towords Revolution : Jayaprakash Narayan
೧೬. Lohia : Onkar Sharad
೧೭. Springing Tiger : Toy
೧೮. Twilight of the Idols and
The Anti - Christ Friedrich Nietzsche
೧೯. ಸ್ವಾತಂತ್ರ್ಯದ ಅಂತರ್ಜಲ : ಡಾ।। ರಾಮಮನೋಹರ ಲೋಹಿಯಾ
ಪ್ರ।। ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು.

ಜಗತ್ತಿನ ಸಾಹಿತ್ಯಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಕ್ಷೇತ್ರಗಳನ್ನು ತಮ್ಮ ವಿಶಿಷ್ಟವಾದ ಬದುಕು, ಕ್ರಿಯಾಶೀಲತೆ, ಹೋರಾಟ ಮತ್ತು ಚಿಂತನೆಗಳಿಂದ ಅರ್ಥಪೂರ್ಣವಾಗಿ, ಅತ್ಯುಪಯುಕ್ತವನ್ನಾಗಿ, ಜೀವಂತಿಸಿದ ನೂರಾರು ಸಾವಿರಾರು ಜನ ಚಿಂತಕರು ಇತಿಹಾಸದಲ್ಲಿ ಮೂಡಿ ಮೆರೆದಿದ್ದಾರೆ. ಇವರ ಅಪೂರ್ವವೂ, ಅನನ್ಯವೂ ಆದ ಬದುಕು ಮತ್ತು ಚಿಂತನೆಗಳು 20ನೆಯ ಶತಮಾನದ ಈ ಅವಧಿಯಲ್ಲೂ ಕಾಲ, ದೇಶ ಮತ್ತು ಭಾಷೆಗಳನ್ನು ಮೀರಿ ಪ್ರಸ್ತುತವಾಗಿ ಮಾನವ ಬದುಕಿಗೆ ಸ್ಫೂರ್ತಿಯನ್ನು ತುಂಬುತ್ತಿವೆ. ಇಂತಹ ಅಸಾಮಾನ್ಯ ಚಿಂತಕರ ಆಲೋಚನೆಗಳನ್ನು ಕನ್ನಡಿಗರಿಗೆ ಸರಳವಾದ ಭಾಷೆಯಲ್ಲಿ ಪರಿಚಯ ಮಾಡಿಕೊಡುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರವು "ಜಾಗತಿಕ ಚಿಂತಕರು ಮಾಲೆ" ಯನ್ನು ಆರಂಭಿಸಿದೆ.

ಈಗಾಗಲೇ ತಮ್ಮ ವೈಜ್ಞಾನಿಕ ಮನೋಧರ್ಮದ ಕೃತಿಗಳ ರಚನೆಯಿಂದ ಹೆಸರು ಮಾಡಿರುವ ಮಿತ್ರರಾದ ಜ.ಹೊ. ನಾರಾಯಣಸ್ವಾಮಿಯವರು ಈ ಕೃತಿಯನ್ನು ತುಂಬಾ ಸ್ವಾರಸ್ಯವಾಗಿ ರಚಿಸಿದ್ದಾರೆ. ಜಯಪ್ರಕಾಶರ ಜೀವನದ ಪ್ರಮುಖ ಘಟ್ಟಗಳಾವುವೂ ಬಿಟ್ಟು ಹೋಗದಂತೆ ಮತ್ತು ಅವರ ದಿಟ್ಟ ಹಾಗೂ ಪ್ರಾಮಾಣಿಕ ವಿಚಾರದ ಎಳೆಗಳು ಸುಸ್ಪಷ್ಟವಾಗುವಂತೆ ಲೇಖಕರು ಈ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಈ ಕೃತಿ ಸಂಕ್ಷಿಪ್ತವಾದರೂ ಸಮರ್ಪಕವಾಗಿ ಮತ್ತು ಆ ದಿವ್ಯ ಚೇತನದ ಬಗೆಗೆ ಆಸಕ್ತಿ ಮತ್ತು ಗೌರವಗಳು ಅರಳುವಂತೆ ಮೂಡಿ ಬಂದಿದೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

I.S.B.N.:81-7713-034-X